48ನೇ th ವಾರ್ಷಿಕ ವರದಿ
ANNUAL REPORT
2021-22





KRIDL

Boosting Rural Strength

Commuted to Value based Quality work

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

Karnataka Rural Infrastructure Development Ltd.



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಕೆ.ಎಸ್. ಈಶ್ವರಪ್ಪ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು



ಶ್ರೀ ಎಂ.ರುದ್ರೇಶ್
ಮಾನ್ಯ ಅಧ್ಯಕ್ಷರು, ಕೆ.ಆರ್.ಐ.ಡಿ.ಎಲ್.



ಶ್ರೀ ಎಲ್.ಕೆ. ಅತೀಕ್, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ಶ್ರೀ ಗಂಗಾಧರಸ್ವಾಮಿ. ಜಿ.ಎಂ. ಭಾ.ಅ.ಸೇ.
ವ್ಯವಸ್ಥಾಪಕ ನಿರ್ದೇಶಕರು
ಕೆಆರ್‌ಐಡಿಎಲ್

OUR VISION



ಧ್ಯೇಯ:

- ಕರ್ನಾಟಕದಲ್ಲಿಯೇ ಶ್ರೇಷ್ಠ ಹಾಗೂ ಸಮರ್ಥ ಸಾರ್ವಜನಿಕ ವಲಯದ ಕಂಪನಿಯಾಗಿ ಹೊರಹೊಮ್ಮುವುದು.
- ನಿರ್ಮಾಣ ವ್ಯವಸ್ಥೆಯಲ್ಲಿಯೇ ಮುಂಚೂಣಿ ಸ್ಥಾನ ಪಡೆಯುವುದು.
- ಗುಣಮಟ್ಟದ ಮತ್ತು ಮಿತವ್ಯಯದ ಸೇವೆ ಒದಗಿಸುವುದು.
- ಒಟ್ಟಾರೆಯಾಗಿ ಅತ್ಯುತ್ತಮ ಸೇವೆಯೇ ಗುರಿ.

ಉದ್ದೇಶ:

- ಬೆಲೆ ಮತ್ತು ಸಮಯ ವಿಳಂಬವಾಗುವುದನ್ನು ತಪ್ಪಿಸುವುದು.
- ಗ್ರಾಹಕರ ಅಗತ್ಯಗಳಿಗೆ ತಕ್ಷಣ ಸ್ಪಂದನೆ.
- ಕೆಆರ್‌ಐಡಿಎಲ್ ಮಾಡಬಹುದಾದ ಎಲ್ಲಾ ಕಾರ್ಯಗಳಲ್ಲಿ ವಿಶ್ವಾಸಾರ್ಹತೆ ಗಳಿಸುವುದು ಮತ್ತು ಈ ಕ್ಷೇತ್ರದಲ್ಲಿಯೇ ಗೆಲುವು ಸಾಧಿಸುವುದು.
- ಬದ್ಧತೆಯುಳ್ಳ ಸಿಬ್ಬಂದಿವರ್ಗ.

ಗುರಿ:

ಅಭಿವೃದ್ಧಿ ಸಾಧಿಸಲು ಮೂಲಸೌಕರ್ಯಗಳ ಕಾಮಗಾರಿಗಳು ಅತೀ ಪ್ರಮುಖವಾದದ್ದಾಗಿದ್ದು, ಇದಕ್ಕಾಗಿ ಅಗತ್ಯ ಕಾರ್ಮಿಕರನ್ನು ಒದಗಿಸಬೇಕಾಗಿರುವುದರಿಂದ ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳಿಗೆ ಹಾಗೂ ಕಡಿಮೆ ಉದ್ಯೋಗವಿಲ್ಲದವರಿಗೆ ಉದ್ಯೋಗ ಅವಕಾಶ ನೀಡುವ ಮೂಲಕ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು.

ಮಧ್ಯವರ್ತಿಗಳನ್ನು ದೂರವಿಟ್ಟು, ಅಂದರೆ, ಗ್ರಾಮೀಣ ಬಡತನವನ್ನು ದುರುಪಯೋಗಪಡಿಸಿಕೊಳ್ಳುವ ಗುತ್ತಿಗೆದಾರರನ್ನು ದೂರಸರಿಸಿ, ಆ ಮೂಲಕ ಸಾರ್ವಜನಿಕರ ಹಣವನ್ನು ಸದ್ವಿನಿಯೋಗ ಪಡಿಸಲು, ನೇರವಾಗಿ ಗ್ರಾಮೀಣ ಪ್ರದೇಶದ ಎಲ್ಲಾ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.

ಗುಣಮಟ್ಟದ ನೀತಿ:

ಕೆಆರ್‌ಐಡಿಎಲ್ ಉದ್ಯಮದ ಮಾನದಂಡಗಳಿಗೆ ಜವಾಬ್ದಾರಿಯುತವಾಗಲು, ಅಂದರೆ ಕೇವಲ ಗುಣಮಟ್ಟ ಹಾಗೂ ಮೌಲ್ಯ ಒಂದೇ ಅಲ್ಲ ಕಾರ್ಯದಕ್ಷತೆಯನ್ನು ಸಾಧಿಸುವ ಮೂಲಕ ತನ್ನ ಸೇವೆಯಲ್ಲಿ ಯಶಸ್ಸು ಸಾಧಿಸಲು ಬದ್ಧವಾಗಿದೆ. ನಾವು ನಿರಂತರವಾಗಿ ನಮ್ಮ ವ್ಯವಹಾರದಲ್ಲಿ ಉತ್ತಮವೆಂದು ಹೆಸರು ಪಡೆಯುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದು, ಅದಕ್ಕಾಗಿ ಅಧಿಕ ನಿರೀಕ್ಷೆಗಳನ್ನು ಮತ್ತು ಕಡಿಮೆ ಸಮಯದಲ್ಲಿಯೇ ಕರಾರುವಕ್ಕಾದ ಸೇವೆಯನ್ನು ಸಾಧಿಸುವ ಸಂಸ್ಕೃತಿಗೆ ನಾಂದಿ ಹಾಡಲಿದ್ದೇವೆ. ವಿಶ್ವಾಸಾರ್ಹತೆಯೆ ಎಲ್ಲದಕ್ಕೆ ಅಗತ್ಯವಿದ್ದು, ನಂಬಿಕೆಯನ್ನೇ ನೆಚ್ಚಿಕೊಂಡಿದ್ದು, ಪ್ರತಿಯೊಬ್ಬರು ಜವಾಬ್ದಾರಿಗೆ ಬದ್ಧರಾಗಿದ್ದೇವೆ. ಅಭಿವೃದ್ಧಿಯಲ್ಲಿ ಪಾರದರ್ಶಕತೆಯನ್ನು ನೀಡುವ ಭರವಸೆಯಿದ್ದು, ದಕ್ಷ ಸೇವೆಯೆ ನಮ್ಮ ಪ್ರತಿಷ್ಠೆಯನ್ನು ಕಾಯುತ್ತದೆ.

Vision

- To be the Best and Most Efficient Public Sector Company in Karnataka
- To be leader in construction management
- Quality & Economical Deliverables
- Overall superior service

Mission

- To avoid cost and time overrun
- Quick response to customer needs
- Credibility in everything KRIDL does and to be winners in the field
- Committed Manpower

Objective

To concentrate on labour intensive infrastructure works which are vital for development by providing employment opportunities to rural unemployed and under employed to improve their economic conditions.

To undertake all rural development construction works directly by eliminating middlemen, i.e., contractors, to avoid exploitation of the rural poor, thereby passing on the full worth of money to the people.

Quality Policy

KRIDL is committed to enhancing its success with services and responsiveness that set industry standards for not only quality and value, but for efficiency as well. We relentlessly strive to be the best in every aspect of our business, fostering a culture of high expectations and accurate delivery- at quick turn-around times. Credibility is everything, trust is inherent and responsibility lies with each individual. Transparent processes guarantee progression and efficient delivery controls reputation.

ವಿಷಯಸೂಚಿ

ಮಂಡಳಿ ನಿರ್ದೇಶಕರ ಪಟ್ಟಿ

01 ಸದಸ್ಯರಿಗೆ ಸೂಚನಾ ಪತ್ರ

ನಿರ್ದೇಶಕರ ವರದಿ 06

38 ಮಹಾಲೇಖಪಾಲರ ವರದಿ

ಲೆಕ್ಕ ಪರಿಶೋಧಕರ ವರದಿ 39

58 ಆಯವ್ಯಯ ಪಟ್ಟಿ

ಲಾಭ ಮತ್ತು ನಷ್ಟದ ತಃಖ್ತೆ 60

62 ಹಣಕಾಸು ನಗದು ಹರಿಯುವಿಕೆಯ ತ:ಖ್ತೆ

ಪ್ರಮುಖ ಲೆಕ್ಕಪತ್ರ ನೀತಿಗಳು 64

81 ಆಯವ್ಯಯ ಪಟ್ಟಿಯ ಭಾಗವಾಗಿ ರೂಪಿಸುವ ಟಿಪ್ಪಣಿಗಳು

ಆಡಳಿತ ಮಂಡಳಿ ನಿರ್ದೇಶಕರುಗಳು

(2021 – 2022ನೇ ಹಣಕಾಸು ಸಾಲಿಗೆ)

ಅಧ್ಯಕ್ಷರು

ಶ್ರೀ ಎಂ. ರುದ್ರೇಶ್
ಮಾನ್ಯ ಅಧ್ಯಕ್ಷರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್,
ಬೆಂಗಳೂರು
(ದಿ: 24.11.2020 ರಿಂದ ಇಲ್ಲಿಯವರೆಗೆ)

ವ್ಯವಸ್ಥಾಪಕ ನಿರ್ದೇಶಕರು

ಶ್ರೀ ಗಂಗಾಧರ ಸ್ವಾಮಿ ಜಿ.ಎಂ., ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್.
(ದಿ: 31.03.2021 ರಿಂದ ಇಲ್ಲಿಯವರೆಗೆ)

ನಿರ್ದೇಶಕರುಗಳು

ಶ್ರೀ ಬಿ.ಹೆಚ್. ಅನಿಲ್‌ಕುಮಾರ್, ಭಾ.ಆ.ಸೇ.,
ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು,
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
(ದಿ: 05.12.220 ರಿಂದ 22.02.2022ರವರೆಗೆ)

ಶ್ರೀ ಎಲ್.ಕೆ. ಅತೀಕ್, ಭಾ.ಆ.ಸೇ.,
ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು
(ದಿ: 19.12.2019 ರಿಂದ ಇಲ್ಲಿಯವರೆಗೆ)

ಡಾ. ಶಮ್ಲಾ ಇಕ್ಬಾಲ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಸಾರ್ವಜನಿಕ ಉದ್ದಿಮೆಗಳ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು
(ದಿ: 22.02.2022 ರಿಂದ ಇಲ್ಲಿಯವರೆಗೆ)

ಶ್ರೀ ರಾಕೇಶ್‌ಸಿಂಗ್, ಭಾ.ಆ.ಸೇ.,
ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು
(ದಿ: 11.06.2020 ರಿಂದ ಇಲ್ಲಿಯವರೆಗೆ)

ಶ್ರೀ ಗಂಗಾಧರ ಸ್ವಾಮಿ ಜಿ.ಎಂ., ಭಾ.ಆ.ಸೇ.,
ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್,
ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ,
ಬೆಂಗಳೂರು–09.
(ದಿ: 31.03.2021 ರಿಂದ ಇಲ್ಲಿಯವರೆಗೆ)

ಶ್ರೀ ದಯಾನಂದ. ಕೆ.ಎ., ಭಾ.ಆ.ಸೇ.,
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು
(ದಿ: 11.03.2022 ರಿಂದ ಇಲ್ಲಿಯವರೆಗೆ)

ಶ್ರೀ ವಿಜಯಕುಮಾರ ಚವಡಣ್ಣವರ್
ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್
ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ,
ಬೆಂಗಳೂರು–560009.
(ದಿ: 19.12.2019 ರಿಂದ ಇಲ್ಲಿಯವರೆಗೆ)

ಶ್ರೀ ಶ್ರೀನಿವಾಸ ಹೆಚ್. ಮಾರಂಗಪ್ಪನವರ್
ನಿರ್ದೇಶಕರು (ಗ್ರಾಮೀಣಾಭಿವೃದ್ಧಿ) ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಆರ್‌ಡಿ&ಪಿಆರ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
(ದಿ: 20.07.2021 ರಿಂದ ಇಲ್ಲಿಯವರೆಗೆ)

ಶ್ರೀ ಬಿ. ಮಲ್ಲಿಕಾರ್ಜುನ
ನಿರ್ದೇಶಕರು, ಕೆಆರ್‌ಐಡಿಎಲ್,
ದ್ವಾರಹಳ್ಳಿ, ಮಲ್ಲಾಪುರ (ಸೊರಬ)
ಶಿವಮೊಗ್ಗ
(ದಿ: 20.10.2020 ರಿಂದ ಇಲ್ಲಿಯವರೆಗೆ)

ಶ್ರೀ ಸುರೇಶ್‌ಗೌಡ ಇ ಪಾಟೀಲ್
ನಿರ್ದೇಶಕರು, ಕೆಆರ್‌ಐಡಿಎಲ್
ಅಗರ್‌ಖೇಡ್ ತಾಲ್ಲೂಕು
ವಿಜಯಪುರ ಜಿಲ್ಲೆ
(ದಿ: 27.11.2020 ರಿಂದ ಇಲ್ಲಿಯವರೆಗೆ)

ಶ್ರೀ ಶ್ರೀಕೃಷ್ಣ ಎನ್. ಬುಗಟ್ಯಾಗೋಳ
ವಿಶೇಷ ಅಧಿಕಾರಿ (ಜಿಲ್ಲಾ ಪಂಚಾಯತ್) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ, (ಆರ್ಥಿಕ ಕೋಶ)
ವಿಧಾನ ಸೌಧ, ಬೆಂಗಳೂರು.
(ದಿ: 20.07.2021 ರಿಂದ ಇಲ್ಲಿಯವರೆಗೆ)

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

(ಕರ್ನಾಟಕ ಸರ್ಕಾರ ಉದ್ಯಮ) (ಹಿಂದೆ ಕರ್ನಾಟಕ ಭೂಸೇನಾ ನಿಗಮಕ್ಕೆ ಸೇರಿದ್ದು)

ಸಂಖ್ಯೆ: ಕೆಆರ್‌ಐಡಿಎಲ್/ಎಡಿಎಂ/48ನೇ ವಾಸಾಸ/2022–23 ದಿನಾಂಕ : 27.09.2022

ಸದಸ್ಯರಿಗೆ ಸೂಚನಾ ಪತ್ರ

48ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಎಲ್ಲ ಷೇರುದಾರರಿಗೆ,

48ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 30ನೇ ಸೆಪ್ಟೆಂಬರ್, 2022ರ ಶುಕ್ರವಾರದಂದು ಸಂಜೆ 05.00 ಘಂಟೆಗೆ, 4ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು – 560 009 ಇಲ್ಲಿ ಈ ಕೆಳಗೆ ತಿಳಿಸಿದ ಸಾಮಾನ್ಯ ವಿಷಯಗಳ ಚರ್ಚೆಗಾಗಿ ಅಲ್ಪಾವಧಿ ಪ್ರಕಟಣೆ ನೀಡಿ ಕರೆಯಲಾಗಿದೆ ಎಂದು ಈ ಮೂಲಕ ಸೂಚಿಸಲಾಗಿದೆ.

ಸಾಮಾನ್ಯ ವ್ಯವಹಾರಗಳು:–

1. ಭಾರತೀಯ ಲೆಕ್ಕಪತ್ರ ಗುಣಮಟ್ಟ (Ind AS) ರ ಪ್ರಕಾರ ತಯಾರಿಸಿದ 31ನೇ ಮಾರ್ಚ್, 2022 ರ ಸಂಸ್ಥೆಯ ಲೆಕ್ಕಪರಿಶೋಧಿತ ಹಣಕಾಸು ತಖ್ತೆಗಳು, ನಿರ್ದೇಶಕರ ವರದಿ, ಲೆಕ್ಕಪರಿಶೋಧಕರ ವರದಿ ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರಿಂದ ಪಡೆದ ಟೀಕೆ, ಟಿಪ್ಪಣಿ ವರದಿಗಳನ್ನು ಕಂಪನಿ ಕಾಯಿದೆ, 2013 ಅಧಿನಿಯಮ 143(6)(ಬಿ)ರ ಪ್ರಕಾರ ಸ್ವೀಕರಿಸಲು, ಪರಿಗಣಿಸಲು ಮತ್ತು ಅದನ್ನು ಅಂಗೀಕರಿಸಿ ಕಾರ್ಯರೂಪಕ್ಕೆ ತರಲು ನಿರ್ಧರಿಸುವುದು.
2. ಈಕ್ವಿಟಿ ಷೇರುಗಳ ಮೇಲಿನ ಲಾಭಾಂಶ ಘೋಷಣೆ.
3. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು, ನವದೆಹಲಿ ಇವರು 2022–23ನೇ ಆರ್ಥಿಕ ಸಾಲಿಗೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವ ಅವರ ಸಂಭಾವನೆಯನ್ನು ನಿಗದಿಪಡಿಸುವ ಅಧಿಕಾರವನ್ನು ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ವಹಿಸುವುದು.

II. ವಿಶೇಷ ವ್ಯವಹಾರ

4. ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 94 (i) (ಬಿ)ಗೆ ತಿದ್ದುಪಡಿ

ಈ ಕೆಳಕಂಡ ನಿರ್ಣಯವನ್ನು ತಿದ್ದುಪಡಿ ಸಹಿತ ಅಥವಾ ತಿದ್ದುಪಡಿಯಿಲ್ಲದೆ ವಿಶೇಷ ನಿರ್ಣಯವೆಂದು ಪರಿಗಣಿಸಲು ಮತ್ತು ಸೂಕ್ತವೆಂದು ಪರಿಭಾವಿಸಿದಲ್ಲಿ ಅಂಗೀಕರಿಸುವುದು.

"ಕಂಪನಿಗಳ ಕಾಯಿದೆ, 2013 (" "ಕಾಯಿದೆ" ") ಯ ಸೆಕ್ಷನ್ 14 ರ ನಿಬಂಧನೆಗಳಿಗೆ ಅನುಸಾರವಾಗಿ ಮತ್ತು ಕಾಯಿದೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅನ್ವಯವಾಗುವ ಯಾವುದೇ ನಿಬಂಧನೆಗಳಿಗೆ ಅನುಸಾರವಾಗಿ, ಅದರಲ್ಲಿ ಯಾವುದೇ ಮಾರ್ಪಾಡು (ಗಳು) ಅಥವಾ ಮರು–ಕಾಯಿದೆ(ಗಳು) ತತ್ಕಾಲದಲ್ಲಿ ಜಾರಿಯಲ್ಲಿರುವ ಕಂಪನಿಯ ಸದಸ್ಯರ ಒಪ್ಪಿಗೆಯನ್ನು ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಅಸ್ತಿತ್ವದಲ್ಲಿರುವ ಆರ್ಟಿಕಲ್ 94 **(i)** (ಬಿ) ಅನ್ನು ತಿದ್ದುಪಡಿ ಮಾಡಿದ ನಿಬಂಧನೆಗಳೊಂದಿಗೆ ಬದಲಿಸಲು ಇಲ್ಲಿ ಒದಗಿಸಿರುವಂತೆ ನೀಡಲಾಗಿದೆ:

ಆರ್ಟಿಕಲ್ ಸಂಖ್ಯೆ	"ಸರ್ಕಾರದ ಅನುಮೋದನೆಯ ಅಗತ್ಯವಿರುವ ನಿರ್ಧಾರಗಳಿಗೆ" ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ನಿಬಂಧನೆಗಳು	"ಸರ್ಕಾರದ ಅನುಮೋದನೆಯ ಅಗತ್ಯವಿರುವ ನಿರ್ಧಾರಗಳಿಗೆ" ಸಂಬಂಧಿಸಿದಂತೆ ನಿಬಂಧನೆಗಳ ತಿದ್ದುಪಡಿ
94ನೇ ಪರಿಚ್ಛೇದ(i)(b)	ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಯ ಯಾವುದೇ ಪ್ರಸ್ತಾವನೆಗಳು ಅಥವಾ ನಿರ್ಧಾರಗಳನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು. ಬಿ) ರೂ. 25.00 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಬಂಡವಾಳದ ಕಾಮಗಾರಿಗಳನ್ನು ಕೈಗೊಳ್ಳುವುದು.	ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಯ ಯಾವುದೇ ಪ್ರಸ್ತಾವನೆಗಳು ಅಥವಾ ನಿರ್ಧಾರಗಳನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು. ಬಿ) ರೂ.5.00 ಕೋಟಿ ಗಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಬಂಡವಾಳದ ಕಾಮಗಾರಿಗಳನ್ನು ಕೈಗೊಳ್ಳುವುದು.

ಮೇಲ್ಕಂಡ ನಿರ್ಣಯವನ್ನು ಜಾರಿಗೆ ತರಲು ವ್ಯವಸ್ಥಾಪಕ ನಿರ್ದೇಶಕರು ಅಂತಹ ಎಲ್ಲಾ ಕಾರ್ಯಗಳು, ಕ್ರಮಗಳು ಮತ್ತು ಕೆಲಸಗಳನ್ನು ಮಾಡಲು ಮತ್ತು ಅಗತ್ಯವಾದ ಅಥವಾ ಪ್ರಾಸಂಗಿಕವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಈ ಮೂಲಕ ಅಧಿಕಾರ ಹೊಂದಿರುತ್ತಾರೆ ಎಂದು ನಿರ್ಧರಿಸಲಾಗಿದೆ.

ನಿರ್ದೇಶಕ ಮಂಡಳಿ ಆದೇಶದ ಮೇರೆಗೆ
ಸಹಿ/–
(ಸಿಎಸ್ ಶಶಿಧರ್. ಜಿ.ಎಸ್.)
ಕಂಪನಿ ಕಾರ್ಯದರ್ಶಿ

ಸೂಚನೆ :

1. ಸಭೆಗೆ ಹಾಜರಾಗಲು ಅರ್ಹರಾದ ಸದಸ್ಯರು ತಮ್ಮ ಅನುಪಸ್ಥಿತಿಯಲ್ಲಿ ಒಬ್ಬ ಪ್ರಾಕ್ಸಿಯನ್ನು ನೇಮಿಸಬಹುದು. ಅವರು ನಿಗಮದ ಸದಸ್ಯರಾಗದಿದ್ದರೂ ಮತದಾನದಲ್ಲಿ ಪಾಲ್ಗೊಂಡು ಮತ ಚಲಾಯಿಸಲು ಮಾತ್ರ ಅರ್ಹರು.
2. ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ನವದೆಹಲಿ ಇವರು 2022–23ರ ಆರ್ಥಿಕ ವರ್ಷಕ್ಕೆ ಕಂಪನಿ ಕಾಯಿದೆ, 2013 ಅಧಿನಿಯಮ 139(5)ರ ಪ್ರಕಾರ ಚಾರ್ಟರ್ಡ್ ಅಕೌಂಟೆಂಟ್‌ಗಳನ್ನು ನೇಮಿಸಬೇಕಾಗಿರುತ್ತದೆ.
3. ಕಂಪನಿಯ ಕಾಯ್ದೆ 2013ರ ಸೆಷನ್ 102ರ ಪ್ರಕಾರ ಸಂಬಂಧಿತ ವಿವರಣಾತ್ಮಕ ಹೇಳಿಕೆಯನ್ನು ಸೂಚನೆಗೆ ಲಗತ್ತಿಸಲಾಗಿದೆ.

ಕಂಪನಿ ಕಾಯ್ದೆ 2013ರ ಸೆಕ್ಷನ್ 102(1)ರ ಪ್ರಕಾರ ವಿವರಣಾತ್ಮಕ ಹೇಳಿಕೆ.

ಐಟಂ ಸಂಖ್ಯೆ 4

ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 94 (i) (ಬಿ)ಗೆ ತಿದ್ದುಪಡಿ

ದಿನಾಂಕ: 31.07.2021 ರಂದು ನಡೆದ ನಿರ್ದೇಶಕರ ಮಂಡಳಿಯ 203 ನೇ ಸಭೆಯಲ್ಲಿ, ಸರ್ಕಾರದ ಮತ್ತು ಕಂಪನಿಯ ಷೇರುದಾರರ ಅನುಮೋದನೆಗೆ ಒಳಪಟ್ಟು ನಿರ್ದೇಶಕರ ಮಂಡಳಿಯು ಈ ಕೆಳಗಿನ ವಿವರಗಳ ಪ್ರಕಾರ ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 94 (i) (b) ಅನ್ನು ತಿದ್ದುಪಡಿ ಮಾಡಲು ಅನುಮೋದನೆ ನೀಡಿದೆ ಎಂದು ಸದಸ್ಯರ ಗಮನಕ್ಕೆ ತರಲಾಗಿದೆ.

ಆರ್ಟಿಕಲ್	ಪರಿಚ್ಛೇದ	"ಸರ್ಕಾರದ ಅನುಮೋದನೆಯ ಅಗತ್ಯವಿರುವ ನಿರ್ಧಾರಗಳಿಗೆ" ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ನಿಬಂಧನೆಗಳು	ಸರ್ಕಾರದ ಅನುಮೋದನೆಯ ಅಗತ್ಯವಿರುವ ನಿರ್ಧಾರಗಳಿಗೆ ಸಂಬಂಧಿಸಿದಂತೆ ವಿಷಯಗಳಿಗೆ ತಿದ್ದುಪಡಿ / ಅಳವಡಿಕೆಗೆ ಅನುಮೋದನೆ
94	(i)	ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಯ ಯಾವುದೇ ಪ್ರಸ್ತಾವನೆಗಳು ಅಥವಾ ನಿರ್ಧಾರಗಳನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು. ಬಿ) ರೂ. 25.00 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಬಂಡವಾಳದ ಕಾಮಗಾರಿಗಳನ್ನು ಕೈಗೊಳ್ಳುವುದು.	ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಯ ಯಾವುದೇ ಪ್ರಸ್ತಾವನೆಗಳು ಅಥವಾ ನಿರ್ಧಾರಗಳನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು. ಬಿ) ಕಂಪನಿಯ ನಿವ್ವಳ ಬ್ಲಾಕ್‌ನ ಶೇ. 25%ರಷ್ಟು ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಬಂಡವಾಳದ ಕಾರ್ಯಗಳನ್ನು ಕೈಗೊಳ್ಳುವುದು.

ಕರ್ನಾಟಕ ಸರ್ಕಾರವು 16.07.2022 ರ ತನ್ನ ಸರ್ಕಾರಿ ಆದೇಶ ಸಂಖ್ಯೆ. ಗ್ರಾ ಅ ಪಂ 68 ಎಸ್‌ಜಿವೈ 2021, ಬೆಂಗಳೂರು ಇದರ ಪ್ರಕಾರ ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಶನ್‌ನ ಆರ್ಟಿಕಲ್ 94 (i) (ಬಿ) ತಿದ್ದುಪಡಿಗೆ ತನ್ನ ಅನುಮೋದನೆಯನ್ನು ಈ ಕೆಳಗಿನಂತೆ ತಿಳಿಸಲಾಗಿದೆ ಎಂದು ಸದಸ್ಯರ ಗಮನಕ್ಕೆ ಈ ಮೂಲಕ ತರಲಾಗಿದೆ.

ಆರ್ಟಿಕಲ್ ಸಂಖ್ಯೆ	"ಸರ್ಕಾರದ ಅನುಮೋದನೆಯ ಅಗತ್ಯವಿರುವ ನಿರ್ಧಾರಗಳಿಗೆ" ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ನಿಬಂಧನೆಗಳು	"ಸರ್ಕಾರದ ಅನುಮೋದನೆಯ ಅಗತ್ಯವಿರುವ ನಿರ್ಧಾರಗಳಿಗೆ" ಸಂಬಂಧಿಸಿದಂತೆ ನಿಬಂಧನೆಗಳ ತಿದ್ದುಪಡಿ
94ನೇ ಪರಿಚ್ಛೇದ(i)(b)	ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಯ ಯಾವುದೇ ಪ್ರಸ್ತಾವನೆಗಳು ಅಥವಾ ನಿರ್ಧಾರಗಳನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು. ಬಿ) ರೂ. 25.00 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಬಂಡವಾಳದ ಕಾಮಗಾರಿಗಳನ್ನು ಕೈಗೊಳ್ಳುವುದು.	ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಯ ಯಾವುದೇ ಪ್ರಸ್ತಾವನೆಗಳು ಅಥವಾ ನಿರ್ಧಾರಗಳನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು. ಬಿ) ರೂ.5.00 ಕೋಟಿ ಗಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಬಂಡವಾಳದ ಕಾಮಗಾರಿಗಳನ್ನು ಕೈಗೊಳ್ಳುವುದು.

ಕಂಪನಿ ಕಾಯ್ದೆ 2013ರ ಸೆಕ್ಷನ್ 102ರ ಉಪನಿಯಮಗಳನುಸಾರ ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೆಷನ್ಸ್‌ನ ಪರಿಚ್ಛೇದ 94(i) (ಬಿ) ತಿದ್ದುಪಡಿ ಮಾಡಲು ಷೇರುದಾರರ ಅನುಮೋದನೆ ಅಗತ್ಯವಿರುವುದು. ಅದರನುಸಾರ ನಿರ್ದೇಶಕರ ಮಂಡಳಿಯು ಕಾರ್ಯಸೂಚಿ ಸಂಖ್ಯೆ 4ರಲ್ಲಿ ವಿವರಿಸಿರುವಂತೆ ನಿರ್ಣಯವನ್ನು ಸದಸ್ಯರುಗಳ ವಿಶೇಷ ನಿರ್ಣಯವಾಗಿ ಅಂಗೀಕಾರ ಮಾಡಿರುವ ಅನುಮೋದನೆಗಾಗಿ ಶಿಫಾರಸು ಮಾಡಲಾಗಿದೆ. ಈ ನಿರ್ಣಯದಲ್ಲಿ ಯಾರೊಬ್ಬ ನಿರ್ದೇಶಕರು ಯಾವುದೇ ವಿಧದಲ್ಲಿ ಕಾಳಜಿ ಅಥವಾ ಆಸಕ್ತಿ ಹೊಂದಿರುವುದಿಲ್ಲ.

ನಿರ್ದೇಶಕ ಮಂಡಳಿ ಆದೇಶದ ಮೇರೆಗೆ
ಸಹಿ/-
(ಸಿಎಸ್ ಶಶಿಧರ್. ಜಿ.ಎಸ್.)
ಕಂಪನಿ ಕಾರ್ಯದರ್ಶಿ

ಯಥಾ ಪ್ರತಿಯನ್ನು,

- ಶ್ರೀ **ಎಂ.ರುದ್ರೇಶ್,** ಮಾನ್ಯ ಅಧ್ಯಕ್ಷರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, 4ನೇ ಮತ್ತು 5ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು
- ಶ್ರೀ **ರಾಕೇಶ್ ಸಿಂಗ್,** ಭಾ.ಆ.ಸೇ., ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು
- ಶ್ರೀ **ಎಲ್.ಕೆ.ಅತೀಕ್,** ಭಾ.ಆ.ಸೇ., ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
- ಶ್ರೀ **ಹಿರೇಮಠ. ಎಂ.ಜಿ.,** ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದ್ ರಾವ್ ವೃತ್ತ, ಬೆಂಗಳೂರು
- ಶ್ರೀ **ರಾಕೇಶ್‌ಕುಮಾರ್. ಕೆ.,** ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
- ಶ್ರೀ **ಕೃಷ್ಣ ಎನ್. ಬುಗಟ್ಯಾಗೋಳ,** ವಿಶೇಷ ಅಧಿಕಾರಿ, ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಮತ್ತು ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು – 560 001
- ಶ್ರೀ **ಶ್ರೀನಿವಾಸ ಹೆಚ್. ಮಾರಂಗಪ್ಪನವರ್,** ನಿರ್ದೇಶಕರು, (ಗ್ರಾಮೀಣ ಮೂಲ ಸೌಕರ್ಯ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – 01
- ಶ್ರೀ **ವಿಜಯಕುಮಾರ ಚವಡಣ್ಣವರ್,** ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದ್ ರಾವ್ ವೃತ್ತ, ಬೆಂಗಳೂರು
- ಶ್ರೀ **ಮಲ್ಲಿಕಾರ್ಜುನಪ್ಪ ಬಿ,** ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ದ್ವಾರಹಳ್ಳಿ, ಮಲ್ಲಾಪುರ (ಸೊರಬ), ಶಿವಮೊಗ್ಗ
- ಶ್ರೀ **ಸುರೇಶ್‌ಗೌಡ ಇ ಪಾಟೀಲ್,** ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಅಗರ್‌ಖೇಡ್ ತಾಲ್ಲೂಕು, ವಿಜಯಪುರ ಜಿಲ್ಲೆ
- ಶ್ರೀ **ವಿದ್ಯಾ ಹೆಚ್. ಪೈ,** ಸರ್ಕಾರದ ಅಧೀನ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಆರ್ಥಿಕ ಇಲಾಖೆ, ಬೆಂಗಳೂರು – ಕರ್ನಾಟಕ ಸರ್ಕಾರದ ಪ್ರತಿನಿಧಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

(ಕರ್ನಾಟಕ ಸರ್ಕಾರ ಉದ್ಯಮ) (ಹಿಂದೆ ಕರ್ನಾಟಕ ಭೂಸೇನಾ ನಿಗಮಕ್ಕೆ ಸೇರಿದ್ದು)

ಸದಸ್ಯರಿಗೆ ನಿರ್ದೇಶಕರ ವರದಿ

2022ರ ಮಾರ್ಚ್–31ಕ್ಕೆ ಕೊನೆಗೊಂಡ ಲೆಕ್ಕಪರಿಶೋಧಿತ ಹಣಕಾಸು ತಃಖ್ತೆಗಳ ಮತ್ತು ಲೆಕ್ಕಪರಿಶೋಧಕರ ವರದಿಯೊಂದಿಗೆ 48ನೇ ವಾರ್ಷಿಕ ವರದಿಯನ್ನು ಮಂಡಿಸಲು ಮೆ॥ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಸಂಸ್ಥೆಯ ನಿರ್ದೇಶಕರುಗಳಿಗೆ ಸಂತಸವಾಗಿದೆ.

1. ಆರ್ಥಿಕ ಸಾಧನೆ (ಕಂಪನಿಯ ವ್ಯವಹಾರಗಳ ಸ್ಥಿತಿ) :

2021–22ನೇ ಸಾಲಿನ ಕಂಪನಿಯ ಹಣಕಾಸು ಪ್ರಗತಿಯನ್ನು ಕಳೆದ ವರ್ಷಕ್ಕೆ ಹೋಲಿಸಿ, ವಾರ್ಷಿಕ ಲೆಕ್ಕಪತ್ರಗಳ ಪ್ರಮುಖ ಅಂಶಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ. (ರೂ. ಕೋಟಿಗಳಲ್ಲಿ)

ವಿವರಗಳು	2021-22	2020-21
ವಹಿವಾಟು ನಿರ್ವಹಿಸಿದ ಕಾಮಗಾರಿಗಳ ಮೌಲ್ಯ	2,733.43	3,801.40
ಇತರೆ ಆದಾಯ	183.09	202.06
ಒಟ್ಟು ವಹಿವಾಟು	2,916.52	4,003.46
ನೇರ ಕಾಮಗಾರಿಗಳ ವೆಚ್ಚ	2,607.01	3,479.64
ಆಡಳಿತಾತ್ಮಕ ಇತರೆ ವೆಚ್ಚಗಳು	140.70	128.98
ಸವಕಳಿ ಮತ್ತು ಆದಾಯ ತೆರಿಗೆ ಮುನ್ನ ಲಾಭ	168.81	394.84
ಸವಕಳಿ	3.12	1.54
ತೆರಿಗೆ ಮುಂಚಿನ ಲಾಭ	165.69	393.30
ಪ್ರಸ್ತುತ ವರ್ಷದ ತೆರಿಗೆ ಹಾಗೂ ಮುಂದೂಡಿದ ತೆರಿಗೆಗಳ ಹೊಂದಾಣಿಕೆ	41.45	105.00
ತೆರಿಗೆ ನಂತರದ ನಿವ್ವಳ ಲಾಭ	124.24	288.30
ಇತರೆ ಸಮಗ್ರ ಆದಾಯ (ಓಸಿಐ)	1.13	(0.32)
ಓಸಿಐ ನಂತರ ಗಳಿಸಲಾದ ಲಾಭ	125.37	287.98
ಹಿಂದಿನ ವರ್ಷದ ಲಾಭ ನಷ್ಟದ ತಃಖ್ತೆಯ ಶಿಲ್ಕು	1,465.04	1,187.22
ಮೀಸಲುಗಳಿಗೆ ವರ್ಗಾವಣೆ	(10.00)	(10.00)
ಸಮಗ್ರ ಆದಾಯದಿಂದ ವರ್ಗಾವಣೆ (ಓಸಿಐ)	1.29	4.52
ಐಎನ್‌ಡಿ–ಎಎಸ್ ಅಳವಡಿಕೆ	-	0.22
ಡಿವಿಡೆಂಡ್ ಮತ್ತು ಡಿವಿಡೆಂಡ್ ತೆರಿಗೆ	86.49	(4.90)
ಆಸ್ತಿಗಳ ಮನ್ನಾ	Nil	Nil
ಆಯವ್ಯಯ ಪಟ್ಟಿಗೆ ಶಿಲ್ಕು ರವಾನೆ	1,495.21	1,465.04

ಕಂಪನಿಯ 6 ವಲಯಗಳ ಪ್ರಗತಿ ಕೆಳಕಂಡಂತಿದೆ. (ರೂ.ಕೋಟಿಗಳಲ್ಲಿ)

ಕ್ರ.ಸಂ.	ವಲಯದ ಹೆಸರು	2021-22	2020-21
1.	ಬೆಂಗಳೂರು ವಲಯ	335.04	324.25
2.	ಮೈಸೂರು ವಲಯ	256.29	480.05
3.	ಕಲಬುರ್ಗಿ ವಲಯ	204.75	318.41
4.	ಕೇಂದ್ರಿಯ ವಲಯ	188.96	557.24

(ರೂ.ಕೋಟಿಗಳಲ್ಲಿ)

ಕ್ರ.ಸಂ.	ವಲಯದ ಹೆಸರು	2021-22	2020-21
5.	ಬಿಬಿಎಂಪಿ ವಲಯ	1,485.25	1,692.61
6.	ಬೆಳಗಾವಿ ವಲಯ	257.87	429.57
ಒಟ್ಟು		2,728.16	3,802.13
		5.27	(0.73)
ಸೇರಿಸಿ: ನಿವ್ವಳ ಅಂದಾಜಿಸಿದ ನಷ್ಟ (ಟಿಪ್ಪಣಿ ನಂ. 19)		-	-
ಒಟ್ಟು		2,733.43	3,801.40

02. ಆದಾಯ ಮತ್ತು ಲಾಭ

2021–22ನೇ ಸಾಲಿನಲ್ಲಿ ಕಂಪನಿಯು ರೂ. 2733.43 ಕೋಟಿ ವಹಿವಾಟು ಹೊಂದಿದ್ದು, ಕಳೆದ ವರ್ಷದಲ್ಲಿ ರೂ. 3801.40 ಕೋಟಿ ವಹಿವಾಟು ಹೊಂದಿತ್ತು. ಕಳೆದ ವರ್ಷಕ್ಕೆ ಹೋಲಿಸಿದ್ದಲ್ಲಿ ಒಟ್ಟು ಶೇ. 28.09%ರಷ್ಟು ಇಳಿಕೆ ವಹಿವಾಟು ಆಗಿರುತ್ತದೆ.

2021–22ನೇ ಸಾಲಿನಲ್ಲಿ ಕಂಪನಿಯು ರೂ. 125.37 ಕೋಟಿ ಲಾಭವನ್ನು ತನ್ನ ವಹಿವಾಟಿನ ಮೇಲೆ ಗಳಿಸಿದೆ. ಕಳೆದ ವರ್ಷದಲ್ಲಿ ರೂ. 287.98 ಕೋಟಿ ಲಾಭ ಗಳಿಸಿತ್ತು.

31.03.2022ರ ಅಂತ್ಯಕ್ಕೆ ರೂ. 1657.30 ಕೋಟಿ ಮೀಸಲು ನಿಧಿ ಇದ್ದು ಕಂಪನಿಯ ನಿವ್ವಳ ಮೌಲ್ಯವು 1669.55 ಕೋಟಿಗಳು ಇರುತ್ತದೆ. ಪ್ರಸ್ತುತ ವರ್ಷದಲ್ಲಿ ಪ್ರತಿ ಷೇರಿನ ಗಳಿಕೆ ರೂ. 10,142/– ಇರುತ್ತದೆ.

03. ನಿಗಮದ ವ್ಯವಹಾರ ಕಾರ್ಯಚರಣೆಯ ಪರಾಮರ್ಶೆ ಮತ್ತು ಭವಿಷ್ಯದ ಭರವಸೆಗಳು

ಕಂಪನಿಯು ಕೈಗೊಂಡ ಪ್ರಮುಖ ಯೋಜನೆಗಳ ವಿವರಗಳು:–

ಕಂಪನಿಯು ಪ್ರಸಕ್ತ ವರ್ಷದಲ್ಲಿ ಸರ್ಕಾರಿ ಇಲಾಖೆಗಳು ಮತ್ತು ಇತರ ಸ್ಥಳೀಯ ಸಂಸ್ಥೆಗಳು ವಹಿಸಿದ ಈ ಕೆಳಗಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

a) **ಗ್ರಾಮ ವಿಕಾಸ ಯೋಜನೆ :** ಸರ್ಕಾರವು ಸುವರ್ಣ ಗ್ರಾಮ ಯೋಜನೆಯನ್ನು ಅಂತ್ಯಗೊಳಿಸಿ, ಗ್ರಾಮ ವಿಕಾಸ ಯೋಜನೆಯಾಗಿ ರೂಪಿಸಿದೆ. ಈ ಯೋಜನೆಯಡಿ ಸರ್ಕಾರವು ರಸ್ತೆಗಳು, ಚರಂಡಿಗಳು, ಸಮುದಾಯ ಭವನಗಳ ನಿರ್ಮಾಣವನ್ನು ಒಳಗೊಂಡಿದ್ದು, ಪ್ರಾಥಮಿಕವಾಗಿ ರೂ. 420.29 ಕೋಟಿಗಳ ಅಂದಾಜು ವೆಚ್ಚದಲ್ಲಿ 675 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ ಸರ್ಕಾರವು ರೂ.420.29 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ದಿನಾಂಕ: 31ನೇ ಮಾರ್ಚ್, 2022ರ ಅಂತ್ಯಕ್ಕೆ ಕಂಪನಿಯು ರೂ. 374.16 ಕೋಟಿ ವೆಚ್ಚದಲ್ಲಿ 302 ಕಾಮಗಾರಿಗಳನ್ನು ಪೂರ್ಣಗೊಂಡಿದ್ದು ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ.

b) **ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆ :** ಈ ಯೋಜನೆಯಡಿ ಸರ್ಕಾರವು ರಸ್ತೆಗಳು, ಚರಂಡಿಗಳು, ಸಮುದಾಯ ಭವನಗಳ ನಿರ್ಮಾಣವನ್ನು ಒಳಗೊಂಡಿದ್ದು, ಪ್ರಾಥಮಿಕವಾಗಿ ರೂ. 518.78 ಕೋಟಿಗಳ ಅಂದಾಜು ವೆಚ್ಚದಲ್ಲಿ 625 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸರ್ಕಾರವು ರೂ. 383.02 ಕೋಟಿಗಳನ್ನು ಬಿಡುಗಡೆ ಮಾಡಿದ್ದು ನಿಗಮವು ಮಾರ್ಚ್ 31, 2022ರ ಅಂತ್ಯದವರೆಗೆ ರೂ. 346.83 ಕೋಟಿ ವೆಚ್ಚಮಾಡಿದೆ. ಇದುವರೆಗೂ 159 ಕಾಮಕಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿದೆ.

c) **ಮುಖ್ಯಮಂತ್ರಿ ಮಾದರಿಗ್ರಾಮ :** ಈ ಯೋಜನೆಯಡಿ ಸರ್ಕಾರವು ರಸ್ತೆ, ಚರಂಡಿಗಳು, ಸಮುದಾಯ ಭವನಗಳ ನಿರ್ಮಾಣವನ್ನು ಒಳಗೊಂಡಿದ್ದು, ಪ್ರಾಥಮಿಕವಾಗಿ ಪ್ರತಿ ಗ್ರಾಮಕ್ಕೆ ರೂ. 100.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸರ್ಕಾರವು ಒಟ್ಟಾರೆ 127 ಗ್ರಾಮಗಳನ್ನು ಸರ್ಕಾರವು ಗುರುತಿಸಿದ್ದು, ಇದರಲ್ಲಿ 59 ಗ್ರಾಮಗಳನ್ನು ಕೆಆರ್‌ಐಡಿಎಲ್ ಸಂಸ್ಥೆಗೆ ಹಂಚಿಕೆ ಮಾಡಲಾಗಿದೆ. ಸರ್ಕಾರವು ರೂ. 52.20 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಕಂಪನಿಯು 31ನೇ ಮಾರ್ಚ್ 2022ರ ಅಂತ್ಯದವರೆಗೆ ರೂ. 41.80 ಕೋಟಿಗಳನ್ನು ವೆಚ್ಚ ಮಾಡಿದೆ. ಒಟ್ಟು 36 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ 24 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

d) **ಪಶುಸಂಗೋಪನೆ ಇಲಾಖೆ :** ಪಶುಸಂಗೋಪನೆ ಇಲಾಖೆಯು ನಮ್ಮ ನಿಗಮಕ್ಕೆ RIDF20 ರಿಂದ 24 ಯೋಜನೆಯಡಿ ಕಾಮಗಾರಿ ವಹಿಸುತ್ತಿದೆ. ಇಲಾಖೆಯು 380 ಕಾಮಗಾರಿಗಳನ್ನು ವಹಿಸಿದೆ. ಅಂದಾಜು ಮೊತ್ತ ರೂ113.11 ಕೋಟಿಯಾಗಿದ್ದು, ರೂ.111.85 ಕೋಟಿ ಬಿಡುಗಡೆ ಮಾಡಿದೆ. ಮಾರ್ಚ್ 31, 2022ರ ಅಂತ್ಯಕ್ಕೆ ನಿಗಮವು ರೂ.110.05 ಕೋಟಿ ಖರ್ಚು ಮಾಡಿರುತ್ತದೆ. ಕಂಪನಿಯು ಒಟ್ಟು 367 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ 13 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

e) **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಾಮಗಾರಿಗಳು:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಒಟ್ಟು 30 ಜಿಲ್ಲಾ ಪಂಚಾಯತ್ ಸಂಪನ್ಮೂಲ ಕೇಂದ್ರಗಳನ್ನು ಹಾಗೂ ಪ್ರಾಂತೀಯ ತರಬೇತಿ ಕೇಂದ್ರಗಳು ಧಾರವಾಡ, ಕಲಬುರ್ಗಿ ಮತ್ತು ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ, ಜಕ್ಕೂರು, (MGIRED) ಬೆಂಗಳೂರಿನಲ್ಲಿ ನಿರ್ಮಿಸುವ ಕಾಮಗಾರಿಗಳನ್ನು ವಹಿಸಿರುತ್ತದೆ. ಕಾಮಗಾರಿಗಳ ಒಟ್ಟು ಅಂದಾಜು ವೆಚ್ಚ ರೂ.129.95 ಕೋಟಿಯಾಗಿದ್ದು, ಸರ್ಕಾರ ರೂ. 80.27 ಕೋಟಿ ಬಿಡುಗಡೆ ಮಾಡಿರುತ್ತಾರೆ. ಮಾರ್ಚ್ 31, 2022ರ ಅಂತ್ಯಕ್ಕೆ ನಿಗಮವು ಒಟ್ಟು ರೂ. 60.00 ಕೋಟಿ ಖರ್ಚು ಮಾಡಿರುತ್ತದೆ. ಕಂಪನಿಯು ಒಟ್ಟು 27 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ 5 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು 50 ಸ್ಥಳಗಳಲ್ಲಿ ಹಳ್ಳಿ ಸಂತೆಗಳನ್ನು ಅಂದಾಜು ಮೊತ್ತ ರೂ. 16.80 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು 2016–17ನೇ ವರ್ಷದ ಸಾಲಿನಲ್ಲಿ ಸಂಸ್ಥೆಗೆ ವಹಿಸಿರುತ್ತದೆ. ಸರ್ಕಾರವು ರೂ. 16.80 ಕೋಟಿಯನ್ನು ಬಿಡುಗಡೆ ಮಾಡಿದೆ. ಹಿಂದಿನ ವರ್ಷದ ಅಂತ್ಯಕ್ಕೆ ನಿಗಮವು ಒಟ್ಟು ರೂ. 16.66 ಕೋಟಿ ಖರ್ಚು ಮಾಡಿರುತ್ತದೆ. ಪ್ರಸಕ್ತ ವರ್ಷದಲ್ಲಿ ಇಲಾಖೆಯು 42 ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 20.40 ಕೋಟಿ ಮೊತ್ತದ ಕಾಮಗಾರಿಯನ್ನು ವಹಿಸಿದೆ. ಕಂಪನಿಯು ರೂ. 12.97 ಕೋಟಿಗಳನ್ನು ವೆಚ್ಚ ಮಾಡಿದೆ. ಕಂಪನಿಯು ಒಟ್ಟು 12 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ರಾಜ್ಯದ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ 61 ಸಮೂಹ ಶೌಚಾಲಯಗಳು ಮತ್ತು ಸ್ನಾನದ ಗೃಹಗಳನ್ನು ನಿರ್ಮಿಸಲು ವಹಿಸಿದ್ದು, ಅಂದಾಜು ಮೊತ್ತ ರೂ. 18.30 ಕೋಟಿಯಾಗಿದ್ದು, ಕಂಪನಿಗೆ ರೂ. 18.30 ಕೋಟಿ ನಿಧಿ ಬಿಡುಗಡೆಯಾಗಿರುತ್ತದೆ. ಈ ವರ್ಷದ ಅಂತ್ಯಕ್ಕೆ ನಿಗಮವು ಒಟ್ಟು ರೂ. 18.06 ಕೋಟಿ ಖರ್ಚು ಮಾಡಿರುತ್ತದೆ. ಕಂಪನಿಯು 60 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಉಳಿಕೆ 1 ಕಾಮಗಾರಿಯು ನಿವೇಶನ ವ್ಯಾಜ್ಯ ಇರುವುದರಿಂದ ಸ್ಥಗಿತಗೊಂಡಿದೆ.

f) **ನೀರು ಶುದ್ಧೀಕರಣ ಘಟಕಗಳು :** ಫ್ಲೋರೈಡ್, ಸಲ್ಫರ್, ಆರ್ಸೆನಿಕ್ ಮತ್ತು ಐರನ್‌ನಿಂದ ಕೂಡಿದಂತಹ ಕುಡಿಯುವ ನೀರನ್ನು ಉಪಯೋಗಿಸುವ ಹಳ್ಳಿಗಳ ಜನರು ಅನಾರೋಗ್ಯ ಪೀಡಿತರಾಗಿ ಬಳಲುತ್ತಿದ್ದು, ಅಂತಹ ಪ್ರದೇಶಗಳಲ್ಲಿ ರಾಜ್ಯದಾದ್ಯಂತ 4 ಹಂತಗಳಲ್ಲಿ ಅಂದಾಜು ಮೊತ್ತ ರೂ. 466.77 ಕೋಟಿಗಳಲ್ಲಿ 5861 ನೀರು ಶುದ್ಧೀಕರಣ ಘಟಕ ಹಾಗೂ 2492 ಪ.ಜಾ/ಪ.ಪಂ ಹಾಸ್ಟೆಲ್‌ಗಳಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ನೀತಿ ಆಯೋಗದಡಿ ನಿರ್ಮಿಸಲು ಸರ್ಕಾರವು ಸಂಸ್ಥೆಗೆ ವಹಿಸಿದೆ. ಅದರಲ್ಲಿ ಕೆಆರ್‌ಐಡಿಎಲ್, ಸುಮಾರು 5721 ಘಟಕಗಳನ್ನು ಹಾಗೂ 2200 ಪ.ಜಾ./ಪ.ಪಂ. ಹಾಸ್ಟೆಲ್‌ಗಳಲ್ಲಿ ಘಟಕಗಳನ್ನು ಸ್ಥಾಪಿಸಿ, ಜನರಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ಕಂಪನಿಯು ರೂ. 471.42 ಕೋಟಿಗಳನ್ನು ವ್ಯಯಿಸಲಾಗಿದ್ದು, ಅದನ್ನು ಕಂಪನಿಯ ಆದಾಯದಿಂದ ಭರಿಸಲಾಗಿದ್ದು, ಅದನ್ನು ಸಂಸ್ಥೆಗೆ ವಾಪಸ್ಸು ನೀಡಲಾಗುವುದೆಂದು ಆಯುಕ್ತರು, ಗ್ರಾಮೀಣ ನೀರು ಸರಬರಾಜು ಇಲಾಖೆಯವರು ಭರವಸೆ ನೀಡಿರುತ್ತಾರೆ ಹಾಗೂ ಅದರಂತೆ ಗ್ರಾಮೀಣ ನೀರು ಸರಬರಾಜು ಇಲಾಖೆಯು ರೂ. 470.86 ಕೋಟಿಗಳನ್ನು ಬಿಡುಗಡೆ ಮಾಡಿರುತ್ತಾರೆ. ಕೆಆರ್‌ಐಡಿಎಲ್ ಸಂಸ್ಥೆಯು ಸಮುದಾಯದ ಏಳಿಗೆಗಾಗಿ ಯಾವುದೇ ಆದಾಯವನ್ನು ಪಡೆಯದೇ ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುತ್ತದೆ. ಯೋಜನೆಯ ವಿವರಗಳು ಈ ಕೆಳಗಿನಂತಿದೆ:

(ರೂ. ಕೋಟಿಗಳಲ್ಲಿ)

ಕ್ರ ಸಂ.	ಹಂತ	ಯೂನಿಟ್ ಸಂಖ್ಯೆ	ತೆಗೆದುಕೊಂಡ ಯೂನಿಟ್ ಸಂಖ್ಯೆ	ಅಂದಾಜು ಮೊತ್ತ	ಬಿಡುಗಡೆಯಾದ ಅನುದಾನ	ಆರ್ಥಿಕ ಪ್ರಗತಿ	ಪೂರ್ಣಗೊಂಡ ಯೂನಿಟ್‌ಗಳು
1	ಹಂತ–1	1073	1073	77.34	77.95	77.34	1073
2	ಹಂತ–2	1454	1448	70.65	73.50	70.65	1448
3	ಹಂತ–3	1730	1722	127.58	117.31	127.58	1722
4	ಹಂತ–4 ಎಸ್‌ಸಿಪಿ/ಟಿಎಸ್‌ಪಿ	1319	1218	120.97	131.93	120.97	1218
5	ನೀತಿ ಆಯೋಗ	287	221	19.48	27.90	19.48	221
6	ಹೆಚ್ಚುವರಿ	285	260	25.35	11.32	25.35	260
7	ಎಸ್‌ಸಿ/ಎಸ್‌ಟಿ ಹಾಸ್ಟೆಲ್	2205	1979	30.95	30.95	30.05	1979
	ಒಟ್ಟು	**8353**	**7921**	**472.32**	**470.86**	**471.42**	**7921**

g) **ಶಿಕ್ಷಣ ಇಲಾಖೆ:** ಕಾಲೇಜು ಶಿಕ್ಷಣ ಇಲಾಖೆಯು ವಸತಿ ನಿಲಯ, ಹೊಸ ಕಾಲೇಜು ಕಟ್ಟಡಗಳು, ಹೆಚ್ಚುವರಿ ತರಗತಿ ಕೊಠಡಿಗಳು, ಲ್ಯಾಬ್ಸ್, ಲೈಬ್ರರಿ, ಸಭಾಂಗಣ, ಮಹಿಳೆಯರ ವಿಶ್ರಾಂತಿ ಕೊಠಡಿಗಳು ಹಾಗೂ ಶೌಚಾಲಯಗಳು ಸೇರಿದಂತೆ ಒಟ್ಟು 400 ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 307.54 ಕೋಟಿ ಮೊತ್ತಕ್ಕೆ ನಿಗಮಕ್ಕೆ ವಹಿಸಿದೆ. ಇಲ್ಲಿಯವರೆಗೆ ಇಲಾಖೆಯು ರೂ. 270.84 ಕೋಟಿ ಬಿಡುಗಡೆ ಮಾಡಿದ್ದು ಸಂಸ್ಥೆಯು ರೂ. 249.37 ಕೋಟಿ ವೆಚ್ಚ ಮಾಡಿರುತ್ತದೆ. ಕಂಪನಿಯು ಮಾರ್ಚ್ 31, 2022ರ ಅಂತ್ಯಕ್ಕೆ 305 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ ಉಳಿಕೆ ಕಾಮಗಾರಿಗಳು ವಿವಿಧ ಪ್ರಗತಿಯ ಹಂತದಲ್ಲಿವೆ.

ತಾಂತ್ರಿಕ ಶಿಕ್ಷಣ ಇಲಾಖೆಯು ಪ್ರಸ್ತುತ ವರ್ಷದಲ್ಲಿ ವಸತಿ ನಿಲಯ, ಕಾಲೇಜು ಕಟ್ಟಡ, ಹೆಚ್ಚುವರಿ ತರಗತಿ ಕೊಠಡಿಗಳು, ಕಟ್ಟಡಗಳ ದುರಸ್ತಿಯಂತಹ ಒಟ್ಟು 107 ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ.164.17 ಕೋಟಿಗೆ ವಹಿಸಿದೆ. ಇಲಾಖೆಯು

ರೂ. 163.74 ಕೋಟಿ ಬಿಡುಗಡೆ ಮಾಡಿದ್ದು, ಕಂಪನಿಯು ಮಾರ್ಚ್ 31, 2022ರ ಅಂತ್ಯಕ್ಕೆ ರೂ.160.02 ಕೋಟಿ ವೆಚ್ಚ ಮಾಡಲಾಗಿದೆ. 102 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ ಉಳಿಕೆ 05 ಕಾಮಗಾರಿಗಳು ವಿವಿಧ ಪ್ರಗತಿಯ ಹಂತದಲ್ಲಿವೆ.

ಆರ್‌ಐಡಿಎಫ್–19, 20 ಮತ್ತು 21 ಯೋಜನೆಯಡಿ ಪದವಿಪೂರ್ವ ಶಿಕ್ಷಣ ಇಲಾಖೆಯು ಒಟ್ಟು 344 ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 223.14 ಕೋಟಿಗೆ ವಹಿಸಿದೆ. ವರ್ಷದ ಮಾರ್ಚ್ 31, 2022ರ ಅಂತ್ಯಕ್ಕೆ ರೂ. 223.14 ಕೋಟಿ ಬಿಡುಗಡೆ ಮಾಡಿದ್ದು, ಮಾರ್ಚ್ 31, 2022ರ ಅಂತ್ಯಕ್ಕೆ ನಿಗಮವು 221.87 ಕೋಟಿ ವೆಚ್ಚ ಮಾಡಲಾಗಿದೆ. 326 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ ಉಳಿಕೆ ಕಾಮಗಾರಿಗಳು ವಿವಿಧ ಪ್ರಗತಿಯ ಹಂತದಲ್ಲಿವೆ.

h) **ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ :** ಕೆಎಸ್‌ಬಿಸಿಎಲ್ ಪ್ರಸ್ತುತ ವರ್ಷದಲ್ಲಿ ಗೋದಾಮುಗಳು, ಕಚೇರಿ ಕಟ್ಟಡಗಳು, ರಸ್ತೆಗಳಂತಹ ಒಟ್ಟು 8 ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 67.69 ಕೋಟಿಗೆ ವಹಿಸಿದೆ. ನಿಗಮವು ರೂ. 61.82 ಕೋಟಿ ಬಿಡುಗಡೆ ಮಾಡಿದ್ದು, ಮಾರ್ಚ್ 31, 2022ರ ಅಂತ್ಯಕ್ಕೆ ರೂ. 68.97 ಕೋಟಿ ವೆಚ್ಚ ಮಾಡಲಾಗಿದೆ. ಕಂಪನಿಗೆ ವಹಿಸಲಾದ ಎಲ್ಲಾ 8 ಕಾಮಗಾರಿಗಳು ಪೂರ್ಣಗೊಂಡಿವೆ.

i) **ಕೆಕೆಆರ್‌ಡಿಬಿ ಕಾಮಗಾರಿಗಳು :** 2014–15ನೇ ಸಾಲಿನಿಂದ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯು ರಸ್ತೆಗಳು, ಶಾಲಾ ಕಟ್ಟಡಗಳು, ಕಚೇರಿ ಕಟ್ಟಡಗಳು ಹಾಗೂ ಇತರೆ ಮೂಲಸೌಕರ್ಯಗಳ ನಿರ್ಮಾಣ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಲಾಗಿದ್ದು, 31.03.2022ಕ್ಕೆ ರೂ. 1189.46 ಕೋಟಿಗಳ ಅಂದಾಜು ವೆಚ್ಚದಲ್ಲಿ 4900 ಕಾಮಗಾರಿಗಳನ್ನು ವಹಿಸಿದೆ. 31.03.2022ಕ್ಕೆ ಮಂಡಳಿಯು ರೂ. 937.62 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ಈ ಪೈಕಿ ಕಂಪನಿಯು ರೂ. 938.67 ಕೋಟಿಗಳನ್ನು ವೆಚ್ಚ ಮಾಡಲಾಗಿದ್ದು, ಕಂಪನಿಯು 31.03.2022ರ ಅಂತ್ಯಕ್ಕೆ 4031 ಕಾಮಗಾರಿಗಳು ಪೂರ್ಣಗೊಳಿಸಲಾಗಿರುತ್ತದೆ. ಉಳಿಕೆ ಕಾಮಗಾರಿಗಳ ನಿರ್ಮಾಣ ವಿವಿಧ ಹಂತದಲ್ಲಿರುತ್ತವೆ.

j) **ಪ್ರವಾಸೋದ್ಯಮ ಇಲಾಖೆ:** ಪ್ರವಾಸಿ ತಾಣಗಳಲ್ಲಿ ಯಾತ್ರಿನಿವಾಸ, ಶೌಚಾಲಯಗಳು, ರಸ್ತೆಗಳು ಮತ್ತು ಇತರೆ ಮೂಲಸೌಕರ್ಯಗಳ ನಿರ್ಮಾಣ ಮಾಡಲು ಪ್ರವಾಸೋದ್ಯಮ ಇಲಾಖೆಯು ವಹಿಸಿಕೊಳ್ಳಲಾಗಿದ್ದು, 31.03.2022ಕ್ಕೆ ರೂ. 544.46 ಕೋಟಿಗಳ ವೆಚ್ಚದಲ್ಲಿ 1053 ಕಾಮಗಾರಿಗಳನ್ನು ವಹಿಸಿಕೊಂಡಿದೆ. ಇಲಾಖೆಯು 31.03.2022ರವರೆಗೆ ರೂ. 368.30 ಕೋಟಿ ಬಿಡುಗಡೆ ಮಾಡಿದೆ. ಈ ಪೈಕಿ ಕಂಪನಿಯು ರೂ. 307.24 ಕೋಟಿ ವೆಚ್ಚ ಮಾಡಲಾಗಿದೆ. ಕಂಪನಿಯು 31.03.2022ರ ಅಂತ್ಯಕ್ಕೆ 431 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಹಾಗೂ 396 ಕಾಮಗಾರಿಗಳು ಪ್ರಗತಿಯ ಹಂತದಲ್ಲಿದ್ದು, 99 ಕಾಮಗಾರಿಗಳನ್ನು ಕೈಬಿಡಲಾಗಿದೆ. 80 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಗೆ ಕಾಯುತ್ತಿದ್ದು, 47 ಕಾಮಗಾರಿಗಳಲ್ಲಿ ನಿವೇಶನ ವಿಷಯವಾಗಿ ತೊಂದರೆಯಿರುತ್ತದೆ.

k) **ವಿಜೆಎನ್‌ಎಲ್, ಕೆಎನ್‌ಎನ್‌ಎಲ್, ಸಿಎನ್‌ಎನ್‌ಎಲ್ ಮತ್ತು ಕೆಬಿಜೆಎನ್‌ಎಲ್ ಕಾಮಗಾರಿಗಳು:** ವಿಜೆಎನ್‌ಎಲ್, ಕೆಎನ್‌ಎನ್‌ಎಲ್, ಸಿಎನ್‌ಎನ್‌ಎಲ್ ಮತ್ತು ಕೆಬಿಜೆಎನ್‌ಎಲ್ ನಿಗಮಗಳು ಚೆಕ್‌ಡ್ಯಾಂ, ರಸ್ತೆ, ಚರಂಡಿ ಮತ್ತು ಕಲ್ವರ್ಟ್ ಕಾಮಗಾರಿಗಳು, ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿದ್ದು, ದಿನಾಂಕ: 31.3.2022ರ ಅಂತ್ಯಕ್ಕೆ ರೂ. 722.68 ಕೋಟಿ ಅಂದಾಜು ವೆಚ್ಚದಲ್ಲಿ 3791 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ರೂ. 667.07 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ರೂ. 639.65 ಕೋಟಿಗಳನ್ನು ಸಂಸ್ಥೆಯು ವೆಚ್ಚ ಮಾಡಿರುತ್ತದೆ. 3269 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. 315 ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 207 ಕಾಮಗಾರಿಗಳು ಇನ್ನು ಆರಂಭವಾಗಬೇಕಿದೆ.

l) **ಪ್ರವಾಹ ಕಾಮಗಾರಿಗಳು:** 5054 ಪ್ರವಾಹ ಯೋಜನೆಯಡಿ ಪ್ರಸ್ತುತ ವರ್ಷದಲ್ಲಿ ರಾಜ್ಯದಾದ್ಯಂತ ಅತಿಹೆಚ್ಚು ಮಳೆ ಪೀಡಿತ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ನಿರ್ಮಾಣವನ್ನು ಸರ್ಕಾರ ವಹಿಸಿದೆ. ಅಂದಾಜು ಮೊತ್ತ ರೂ. 637.21 ಕೋಟಿಗಳಲ್ಲಿ 2707 ಕಾಮಗಾರಿಗಳನ್ನು ವಹಿಸಿದ್ದು, ರೂ. 600.67 ಕೋಟಿಗಳನ್ನು ಬಿಡುಗಡೆ ಮಾಡಿದೆ. ನಿಗಮವು ರೂ. 614.57 ಕೋಟಿಗಳ ವೆಚ್ಚದಲ್ಲಿ 2402 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ 175 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತವೆ. ಮತ್ತು ಇನ್ನುಳಿದ 130 ಕಾಮಗಾರಿಗಳು ಆರಂಭವಾಗಬೇಕಿದೆ.

5054 ಪ್ರವಾಹ ರಹಿತ ಯೋಜನೆಯಡಿ ಪ್ರಸ್ತುತ ವರ್ಷದಲ್ಲಿ ರಾಜ್ಯದಾದ್ಯಂತ ಅತಿಹೆಚ್ಚು ಮಳೆ ಪೀಡಿತ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ನಿರ್ಮಾಣವನ್ನು ಸರ್ಕಾರ ವಹಿಸಿದೆ. ಅಂದಾಜು ಮೊತ್ತ ರೂ. 168.38 ಕೋಟಿಗಳಲ್ಲಿ 659 ಕಾಮಗಾರಿಗಳನ್ನು ವಹಿಸಿದ್ದು, ರೂ. 155.21 ಕೋಟಿಗಳನ್ನು ಬಿಡುಗಡೆ ಮಾಡಿದೆ. ನಿಗಮವು ರೂ. 143.65 ಕೋಟಿಗಳ ವೆಚ್ಚದಲ್ಲಿ 528 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ 27 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತವೆ. ಇನ್ನುಳಿದ 104 ಕಾಮಗಾರಿಗಳು ಆರಂಭವಾಗಬೇಕಿದೆ.

3054 ಯೋಜನೆಯಡಿ ಪ್ರಸ್ತುತ ವರ್ಷದಲ್ಲಿ ರಾಜ್ಯದಾದ್ಯಂತ ಅತಿಹೆಚ್ಚು ಮಳೆ ಪೀಡಿತ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳು ಹಾಗೂ ನಾಲೆಗಳಿಗೆ ರೀಟೈನಿಂಗ್ ಗೋಡೆಗಳ ನಿರ್ಮಾಣವನ್ನು ಸರ್ಕಾರ ವಹಿಸಿದೆ. ಅಂದಾಜು ಮೊತ್ತ ರೂ. 1003.16 ಕೋಟಿಗಳಲ್ಲಿ 3550 ಕಾಮಗಾರಿಗಳನ್ನು ವಹಿಸಿದ್ದು, ರೂ. 764.44 ಕೋಟಿಗಳನ್ನು ಬಿಡುಗಡೆ ಮಾಡಿದೆ. ನಿಗಮವು ರೂ. 726.65 ಕೋಟಿಗಳ ವೆಚ್ಚದಲ್ಲಿ 2146 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ 340 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತವೆ. ಮತ್ತು ಇನ್ನುಳಿದ 1064 ಕಾಮಗಾರಿ ಆರಂಭವಾಗಬೇಕಿದೆ.

o) **ಧಾರ್ಮಿಕ ದತ್ತಿ ಇಲಾಖೆ:** ಮುಜರಾಯಿ ಇಲಾಖೆಯು ದಿನಾಂಕ: 31.03.2022 ರವರೆಗೆ 24 ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 14.55 ಕೋಟಿಗೆ ವಹಿಸಿದೆ. ಇಲಾಖೆಯು ರೂ. 5.06 ಕೋಟಿ ಬಿಡುಗಡೆ ಮಾಡಿದ್ದು, ಕಂಪನಿಯು ರೂ. 2.40 ಕೋಟಿ ವೆಚ್ಚ ಮಾಡಲಾಗಿದೆ. 2 ಕಾಮಗಾರಿಗಳು ಪೂರ್ಣಗೊಂಡಿದ್ದು, 22 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತದೆ.

p) **ಕೃಷಿ ಇಲಾಖೆ:** ಕೃಷಿ ಇಲಾಖೆಯು ಪ್ರಸ್ತುತ ವರ್ಷದಲ್ಲಿ ರೈತ ಸಂಪರ್ಕ ಕೇಂದ್ರ, ಚೈನ್‌ಲಿಂಕ್ ಫೆನ್ಸಿಂಗ್, ಬೀಜ ಪರೀಕ್ಷೆ/ ಜೈವಿಕ ಗೊಬ್ಬರ ಪರೀಕ್ಷಾ ಪ್ರಯೋಗಾಲಯಗಳ ಬಲವರ್ಧನೆ ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ನಿರ್ಮಾಣದಂತಹ ಒಟ್ಟು 245 ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 95.06 ಕೋಟಿಗೆ ವಹಿಸಿದೆ. ಇಲಾಖೆಯು ರೂ. 94.94 ಕೋಟಿ ಬಿಡುಗಡೆ ಮಾಡಿದ್ದು, ಮಾರ್ಚ್ 31, 2022ರ ಅಂತ್ಯಕ್ಕೆ ರೂ. 93.60 ಕೋಟಿ ವೆಚ್ಚ ಮಾಡಲಾಗಿದೆ. 236 ಕಾಮಗಾರಿಗಳು ಪೂರ್ಣಗೊಂಡಿದ್ದು, 09 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತದೆ.

q) **ತಾಂಡಾ ಅಭಿವೃದ್ಧಿ ಕಾಮಗಾರಿಗಳು :** ತಾಂಡಾ ಅಭಿವೃದ್ಧಿ ನಿಗಮವು 2125 ವಿವಿಧ ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 234.28 ಕೋಟಿಗೆ ವಹಿಸಿದೆ. ನಿಗಮವು ರೂ. 184.60 ಕೋಟಿ ಬಿಡುಗಡೆ ಮಾಡಿದ್ದು, ಕಂಪನಿಯು ರೂ. 193.33 ಕೋಟಿ ವೆಚ್ಚ ಮಾಡಲಾಗಿದೆ. 1747 ಕಾಮಗಾರಿಗಳು ಪೂರ್ಣಗೊಂಡಿದ್ದು, 133 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತದೆ. ಇನ್ನೂ 75 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದ್ದು, 170 ಕಾಮಗಾರಿಗಳನ್ನು ಕೈಬಿಡಲಾಗಿದೆ.

o) **ಇತರೆ ಕಾಮಗಾರಿಗಳು:** ಕಂಪನಿಯು ಮೀನುಗಾರಿಕೆ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಮತ್ತು ಕೃಷಿ ಇಲಾಖೆ, ತಾಂಡಾ ಅಭಿವೃದ್ಧಿ ಕಾರ್ಯಗಳು, ರಾಜೀವ್ ಗಾಂಧಿ ಜಿಲ್ಲಾ ಸಂಪನ್ಮೂಲ ಕೇಂದ್ರಗಳು, ಬಿಎಂಆರ್‌ಸಿಎಲ್ ಕಾಮಗಾರಿಗಳು, ವಕ್ಫ್ ಬೋರ್ಡ್, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್, ವಾಣಿಜ್ಯ ತೆರಿಗೆ ಇಲಾಖೆ, ವಿವಿಧ ವಿಶ್ವವಿದ್ಯಾನಿಲಯ, ಕೆಹೆಚ್‌ಬಿ, ಮುಜರಾಯಿ, ಪೊಲೀಸ್ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಇತರೆ ಸರ್ಕಾರ

ಸಂಸ್ಥೆಗಳಿಂದಲೂ ಮತ್ತು ಸ್ಥಳೀಯ ಸಂಸ್ಥೆಗಳಿಂದಲೂ ಕೆಲಸಗಳನ್ನು ಪಡೆಯುತ್ತಿದೆ. ಶಾಸಕರು ಮತ್ತು ಸಂಸದರೂ ಸಹ ತಮ್ಮ ಅಭಿವೃದ್ಧಿ ನಿಧಿಯ ಕೆಲಸಗಳನ್ನು ಕಂಪನಿಗೆ ವಹಿಸಿಕೊಡುತ್ತಿದ್ದಾರೆ.

ನಿಮ್ಮ ನಿರ್ದೇಶಕರು ಕಂಪನಿಯು ಮುಂಬರುವ ವರ್ಷಗಳಲ್ಲಿ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಗುರಿ, ಧ್ಯೇಯಗಳನ್ನು ರೂಪಿಸಿ, ಕಂಪನಿಯ ಒಟ್ಟಾರೆ ಅಭಿವೃದ್ಧಿ ಮತ್ತು ಲಾಭಾಂಶ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಂಡಿದ್ದಾರೆ. ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಒತ್ತು ನೀಡುತ್ತಿದೆ. ನಮ್ಮ ಕಂಪನಿಯ ಈ ಕೆಲಸಗಳಲ್ಲಿ ಮುಂಚೂಣಿಯಲ್ಲಿರುವುದರಿಂದ ಪ್ರಮುಖ ಪಾತ್ರವಹಿಸಲು ಸನ್ನದ್ಧವಾಗಿದೆ. ಕರ್ನಾಟಕ ಸರ್ಕಾರವು 1999ರ ಸಾರ್ವಜನಿಕ ಸಂಗ್ರಹಣೆ ಕಾಯಿದೆಯಲ್ಲಿನ ಕರ್ನಾಟಕ ಪಾರದರ್ಶಕತೆ ಕಾಯಿದೆಯಲ್ಲಿ (ಇ4) ಷರತ್ತನ್ನು ಸೇರಿಸುವ ಮೂಲಕ ವಿಭಾಗ 4ಕ್ಕೆ ತಿದ್ದುಪಡಿ ಮಾಡಿದೆ ಮತ್ತು **ಇದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಎಲ್ಲಾ ಪ್ರಕಾರದ ನಿರ್ಮಾಣ ಕಾರ್ಯಗಳ ಮೌಲ್ಯವನ್ನು ಮೀರದಂತೆ ಸಂಗ್ರಹಣೆ ಸಂಪಾದನೆ ಆಸಕ್ತಿಯನ್ನು ಒದಗಿಸುತ್ತದೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಲಿಮಿಟೆಡ್‌ಗೆ ನೀಡುಗ ಕಾಮಗಾರಿಗಳ ಮೌಲ್ಯವು ಎರಡು ಕೋಟಿ ರೂಪಾಯಿಗಳನ್ನು ಮೀರದಿರುವುದರಿಂದ** ಇದು ಕಂಪನಿಯು ಸರ್ಕಾರಿ ಇಲಾಖೆ ಮತ್ತು ಇತರ ಸರ್ಕಾರಿ ಏಜೆನ್ಸಿಗಳಿಂದ ಹೆಚ್ಚಿನ ಕೆಲಸಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.

ಏಪ್ರಿಲ್ 2021ರಲ್ಲಿ ಭಾರತ ಮತ್ತು ವಿಶ್ವದಾದ್ಯಂತ ಹರಡಿದ ಕೋವಿಡ್-19 ಸೋಂಕಿನ 2ನೇ ಅಲೆಯಿಂದಾಗಿ ವಿವಿಧ ಸರ್ಕಾರಿ ಇಲಾಖೆಗಳಿಂದ ವಹಿಸಿಕೊಳ್ಳಲಾದ ಕಾಮಗಾರಿಗಳು ಸಂಪನ್ಮೂಲದ ಕೊರತೆಯಿಂದಾಗಿ ಬಾಕಿ ಉಳಿದಿರುತ್ತವೆ. ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯವನ್ನು ಒದಗಿಸುವ ಸಲುವಾಗಿ ಸಾಕಷ್ಟು ಅನುದಾನವನ್ನು ಮೀಸಲಿಟ್ಟಿದ್ದು, ನಮ್ಮ ಕಂಪನಿಯು ಅಂತಹ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ಪಡೆಯಲು ಯಾವುದೇ ಸಮಸ್ಯೆಯಿರುವುದಿಲ್ಲ.

ವಿವಿಧ ಸರ್ಕಾರ / ಏಜೆನ್ಸಿಗಳು ವಹಿಸಿಕೊಡುವ ವಿವಿಧ ಕಾಮಗಾರಿಗಳನ್ನು 2000 ರ ಸಾರ್ವಜನಿಕ ಸಂಗ್ರಹಣೆ ನಿಯಮಗಳಲ್ಲಿ ಕರ್ನಾಟಕ ಪಾರದರ್ಶಕತೆಯ ನಿಬಂಧನೆಗಳಿಗೆ ಅನುಗುಣವಾಗಿ ಇ-ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಅಂದಾಜು ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಕರ್ನಾಟಕ ಸರ್ಕಾರವು ದಿನಾಂಕ 31.12.2021 ರ ತನ್ನ ಆದೇಶ ಸಂಖ್ಯೆ.ಗ್ರಾ ಆ ಪ:84:ಸು ಗ್ರಾ ಯೋ:2021 (ಇ-596152) ರಲ್ಲಿ ಕಂಪನಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವುದು ನಿರ್ದೇಶಕರ ಮಂಡಳಿಯು ಸಂತಸ ವ್ಯಕ್ತಪಡಿಸಿದೆ.

ಕಂಪನಿಯು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್‌ನಲ್ಲಿ ಭಾಗವಹಿಸಲು ಪ್ರಯತ್ನಿಸುತ್ತಿದ್ದು, ಸಮಯಬದ್ಧ ಮತ್ತು ಗುಣಮಟ್ಟದ ಕಾಮಗಾರಿಗಳನ್ನು ಒದಗಿಸುವ ಭರವಸೆ ನೀಡಿದೆ. ಮುಂದಿನ ವರ್ಷಗಳಲ್ಲಿ ಸಂಸ್ಥೆಯು ತನ್ನ ಸಾಮರ್ಥ್ಯ ಮತ್ತು ಸಾಧನೆಯ ನಿಟ್ಟಿನಲ್ಲಿ ಸ್ಪರ್ಧಾತ್ಮಕ ಟೆಂಡರ್‌ಗಳಲ್ಲಿ ಭಾಗವಹಿಸಿ ವ್ಯವಹಾರವನ್ನು ಪಡೆಯಲು ನಿಯಮಾವಳಿಗಳನ್ನು ರೂಪಿಸಲು ಕ್ರಮ ತೆಗೆದುಕೊಳ್ಳಲಾಗುವುದು.

04. ಡಿವಿಡೆಂಡ್:

ನಿಗಮವು ಸತತ 13 ಹಣಕಾಸು ವರ್ಷಗಳಿಂದ ಈಕ್ವಿಟಿ ಷೇರುದಾರರಿಗೆ (ಕರ್ನಾಟಕ ಸರ್ಕಾರ) ಡಿವಿಡೆಂಡ್ ನೀಡುವಷ್ಟು ಆರ್ಥಿಕ ಸುಭದ್ರತೆ ಸಾಧಿಸುವ ಸ್ಥಾನದಲ್ಲಿದೆ ಎಂದು ತಿಳಿಸಲು ಸಂತೋಷವಾಗುತ್ತಿದೆ. 31ನೇ ಮಾರ್ಚ್ 2022ಕ್ಕೆ ಅಂತ್ಯಗೊಂಡಂತೆ ತೆರಿಗೆ ನಂತರ ಕಂಪನಿಯ ಆದಾಯದಲ್ಲಿನ ಶೇ.30ರಂತೆ ಡಿವಿಡೆಂಡ್‌ನ್ನು ಬಂಡವಾಳದ ಮೇಲೆ ನೀಡಲು ಶಿಫಾರಸ್ಸು ಮಾಡಿರುವುದು ಸಂತೋಷಕರ ವಿಷಯವಾಗಿದೆ ಎಂದು ತಿಳಿಸಲಾಗಿದೆ.

05. ನಿಧಿಗಳಿಗೆ ವರ್ಗಾವಣೆ:

ಪ್ರಸ್ತುತ ವರ್ಷದ ಲಾಭಾಂಶದಿಂದ ರೂ.10.00 ಕೋಟಿಗಳನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡಲು ನಿರ್ದೇಶಕರು ಪ್ರಸ್ತಾಪ ಮಾಡಿರುತ್ತಾರೆ.

06. ಸಂಬಂಧಿಸಿದ ವ್ಯಕ್ತಿಗಳ ಜೊತೆ ಮಾಡಿಕೊಂಡ ಗುತ್ತಿಗೆ ಹಾಗೂ ಒಡಂಬಡಿಕೆಗಳ ವಿವರ:

ಕಂಪನಿಯ ಕಾಯ್ದೆ 2013 ಸೆಕ್ಷನ್ 188 (1) ರ ಪ್ರಕಾರ ಸಂಬಂಧಿಸಿದ ವ್ಯಕ್ತಿಗಳ ಜೊತೆ ಮಾಡಿಕೊಂಡ ಯಾವುದೇ ಗುತ್ತಿಗೆ ಹಾಗೂ ಒಡಂಬಡಿಕೆಗಳ ವಿವರ ಇರುವುದಿಲ್ಲ.

07. ಆರ್ಥಿಕ ವರ್ಷದ ಅಂತ್ಯ ಮತ್ತು ವರದಿಯ ದಿನಾಂಕದ ನಡುವಿನ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ವಸ್ತು ಬದಲಾವಣೆಗಳು ಮತ್ತು ಬದ್ಧತೆಗಳು:

2021–22ರ ಆರ್ಥಿಕ ವರ್ಷದ ಅಂತ್ಯ ಮತ್ತು ಈ ವರದಿಯ ದಿನಾಂಕದ ನಡುವೆ ಕಂಪನಿಯ ಆರ್ಥಿಕ ಸ್ಥಾನದ ಮೇಲೆ ಈ ಕೆಳಗಿನಂತೆ ಪರಿಣಾಮ ಬೀರಿದೆ:

ದಿನಾಂಕ: 18.07.2022ರ ಬೋನಸ್ ವಿಷಯವಾಗಿ ಒಟ್ಟು ರೂ. 2,44,99,000/– ಮೊತ್ತದ ರೂ. 1,000/– ಮೌಲ್ಯದ 24,499 ಈಕ್ವಿಟಿ ಷೇರುಗಳನ್ನು ಕಂಪನಿಯು ಹಂಚಿಕೆ ಮಾಡಿರುತ್ತದೆ.

08. ಕಂಪನಿಯ ವೆಬ್‌ಸೈಟ್ ಮೇಲಿನ ವಾರ್ಷಿಕ ಆದಾಯ:

ಕಂಪನಿಗಳ ಕಾಯ್ದೆ 2013 ಸೆಕ್ಷನ್ 92(3) ಅನ್ನು ಓದಿಕೊಂಡಂತೆ ಸೆಕ್ಷನ್ 134(3)(ಎ)ರಡಿಯಲ್ಲಿ ಆಡಳಿತ ಮಂಡಳಿಯು ದಿನಾಂಕ: 31.03.2021ರ ಕೊನೆಗೊಳ್ಳುವ ಹಣಕಾಸು ವರ್ಷಕ್ಕೆ ವಾರ್ಷಿಕ ಆದಾಯ (ಎಂಜಿಟಿ–7 ಫಾರಂ) ವನ್ನು ಕಂಪನಿಯ ವೆಬ್‌ಸೈಟ್ ಮೇಲೆ ಇರಿಸಲಾಗಿದ್ದು, ಅಂದರೆ www.kridl.org ಮತ್ತು ವಾರ್ಷಿಕ ಆದಾಯದ ವೆಬ್‌ಲಿಂಕ್ ಅನ್ನು www.kridl.org/turnover.html ರಲ್ಲಿ ನೀಡಲಾಗಿದೆ.

09. ಆಡಳಿತ ಮಂಡಳಿಯ ಸಭೆಗಳ ವಿವರ :

ಆಡಳಿತ ಮಂಡಳಿಯು 2021–22ನೇ ವರ್ಷದಲ್ಲಿ ಏಳು ಬಾರಿ ಅಂದರೆ ದಿನಾಂಕ: 20.04.2021, 31.07, 2021, 25.10.2021, 03.12.2021, 13.12.2021, 20.01.2022 ಮತ್ತು 30.03.2022 ರಂದು ಸಭೆ ಸೇರಿರುತ್ತದೆ. ಕಂಪನಿ ಕಾಯ್ದೆ 2013 ಸೆಕ್ಷನ್ 173 ರ ಪ್ರಕಾರ ಒಂದು ಸಭೆಯಿಂದ ಇನ್ನೊಂದು ಸಭೆಗೆ ಇರಬೇಕಾದ ಸಮಯವನ್ನು ಪಾಲಿಸಲಾಗಿದೆ. ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 118(10)ರಡಿಯಲ್ಲಿ ನೀಡಲಾದ ಮಂಡಳಿ ನಿರ್ದೇಶಕರ ಸಭೆಯ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ ಎಸ್‌ಎಸ್–1ರ ಕ್ಲಾಜ್–9ರಡಿ ಅಗತ್ಯವಿರುವಂತೆ 2021–22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಂಪನಿಯ ಪ್ರತಿ ನಿರ್ದೇಶಕರು ಹಾಜರಾದ ಸಭೆಯ ವಿವರಗಳನ್ನು ಈ ವರದಿಯ ಅಡಕ–2ರಲ್ಲಿ ನೀಡಲಾಗಿದೆ.

10. ಪ್ರತಿ ಆಕ್ಷೇಪಣೆಗಳು, ಪ್ರತಿಕೂಲ ಟೀಕೆಗಳು ಹಾಗೂ ನಿರಾಕರಿಸುವಿಕೆಗೆ ಆಡಳಿತ ಮಂಡಳಿಯ ವಿವರಣೆಗಳು:-

a) ಲೆಕ್ಕಪರಿಶೋಧಕರ ವರದಿಯಲ್ಲಿನ ಆಕ್ಷೇಪಣೆಗಳು:

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
1	ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ರೂ. 16,40,357.80 ಲಕ್ಷಗಳನ್ನು ಸರಕುಗಳ ವಿವರಗಳ ರೂಪದಲ್ಲಿ ಮತ್ತು ಕಾಮಗಾರಿಗಳನ್ನು ವಹಿಸಿಕೊಡುವ ಸಂಸ್ಥೆಗಳಿಂದ ಸ್ವೀಕರಿಸಲಾದ ಮುಂಗಡಗಳನ್ನು ರೂ. 16,73,721.30 ಲಕ್ಷ ಮೊತ್ತವನ್ನು ಲೆಕ್ಕಶೀರ್ಷಿಕೆ "ಇತರ ಚಾಲ್ತಿ ಋಣಭಾರಗಳು" ಅಡಿ ಬಿಂಬಿಸಲಾಗಿದೆ. ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ಸ್ವೀಕರಿಸಲಾದ ಮುಂಗಡಗಳನ್ನು ಭೌತಿಕವಾಗಿ ಕಾಮಗಾರಿಗಳು ಪೂರ್ಣಗೊಂಡ ನಂತರ ಮತ್ತು ಅಂತಿಮ ಬಿಲ್ ನೀಡಿದಾಗ ಮಾತ್ರ ಹೊಂದಾಣಿಕೆ ಮಾಡಲಾಗುವುದು. ಈ ಹಿನ್ನೆಲೆಯಲ್ಲಿ ನಮ್ಮ ಅಭಿಪ್ರಾಯದಂತೆ ಪ್ರಗತಿಯಲ್ಲಿರುವ ಕಾಮಗಾರಿ ಮತ್ತು ಕಾಮಗಾರಿ ವಹಿಸಿಕೊಡುವ ಸಂಸ್ಥೆಗಳಿಂದ ಸ್ವೀಕರಿಸಲಾದ ಮುಂಗಡಗಳನ್ನು ಕಡಿಮೆ ತೋರಿಸಲಾಗಿದೆ / ಹೆಚ್ಚಾಗಿ ತೋರಿಸಲಾಗಿದೆ. ಕಡಿಮೆ ತೋರಿಸಿದ / ಹೆಚ್ಚಾಗಿ ತೋರಿಸಿದ ನಿಖರ ಮೊತ್ತದ ಬಗ್ಗೆ ಪರಿಮಾಣಾತ್ಮಕ ಮಾಡಲು ವಿವರಗಳ ಅನುಪಸ್ಥಿತಿಯಲ್ಲಿ ಸಾಧ್ಯವಾಗಿರುವುದಿಲ್ಲ.	ರೂ. 3483.50 ಕೋಟಿ ಮೌಲ್ಯದ ಅಂತಿಮ ಬಿಲ್‌ಗಳನ್ನು ಆರ್ಥಿಕ ವರ್ಷ 2021-22ನೇ ಸಾಲಿನಲ್ಲಿ ಹೊಂದಾಣಿಕೆ ಮಾಡಲಾಗಿದೆ. ಭೌತಿಕವಾಗಿ ಮತ್ತು ಆರ್ಥಿಕವಾಗಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂತಿಮ ಬಿಲ್‌ಗಳನ್ನು ಪಡೆದುಕೊಳ್ಳುವ ಜವಾಬ್ದಾರಿಯನ್ನು ಕೇಂದ್ರಸ್ಥಾನದಲ್ಲಿ ಮುಖ್ಯ ಇಂಜಿನಿಯರ್ ಅವರು ಮುಖ್ಯಸ್ಥರಾಗಿರುವ ಅಂತಿಮ ಬಿಲ್ ವಿಭಾಗಕ್ಕೆ ವಹಿಸಲಾಗಿದೆ. ಕಂಪನಿಯು 2022-23ನೇ ಸಾಲಿನಲ್ಲಿ ರೂ. 4000.00 ಕೋಟಿಗೂ ಅಧಿಕ ಮೊತ್ತಕ್ಕೆ ಅಂತಿಮ ಬಿಲ್‌ಗಳನ್ನು ಪಡೆಯುವ ನಿರೀಕ್ಷೆ ಹೊಂದಿರುತ್ತದೆ.
2	ಕೆಳಕಂಡ ಮೊತ್ತಗಳನ್ನು ವಿವಿಧ ಶೀರ್ಷಿಕೆಗಳಡಿ ಯಾರಿಗೆ ನೀಡಬೇಕಾಗಿದೆ / ಯಾರಿಂದ ಪಡೆಯಬೇಕಾಗಿದೆ ಎಂಬುದರ ಬಗ್ಗೆ ವಿವರ ಮಾಹಿತಿಗಳಿಲ್ಲದೆ ನಮೂದಿಸಲಾಗಿದೆ. ಆ ಮೇರೆಗೆ ಸದರಿ ಲೆಕ್ಕಗಳ ಮೊತ್ತಗಳು ಸರಿಯಾಗಿರುವ ಬಗ್ಗೆ ನಮಗೆ ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ. ರೂ.ಲಕ್ಷಗಳಲ್ಲಿ ವಿವರಗಳು / ವಿವರಣೆಗಳು / ದಾಣಿಕೆ/ಋಣಿಕೆ / ದಿನಾಂಕ: 31.3.2022ರಂದು ಇದ್ದಂತೆ ಟ್ರೇಡ್ ಪಾವತಿ ಆಗಬೇಕಿರುವುದು / ಇತರೆ ಸಾಲಗಾರರು (ವಿವರಗಳು ಪತ್ತೆಯಾಗಬೇಕಿದೆ) / ಋಣಿಕೆ / 57.62 ಇತರೇ ಹಣಕಾಸು ಆಸ್ತಿಗಳು / ಕೆಆರ್‌ಐಡಿಎಲ್‌ನಿಂದ ಪಾವತಿಯಾದ ಇಎಂಡಿ (ವಿವರಗಳು ಪತ್ತೆಯಾಗಬೇಕಿದೆ) / ದಾಣಿಕೆ / 289.20	ಪತ್ತೆ ಹಚ್ಚಲಾಗದಿರುವ ಮೊತ್ತಗಳು ತುಂಬಾ ದೀರ್ಘಾವಧಿಗೆ ಸಂಬಂಧಪಟ್ಟಿವೆ ಮತ್ತು 2010-11ನೇ ಆರ್ಥಿಕ ಸಾಲಿನಿಂದ ಟ್ಯಾಲಿ ಲೆಕ್ಕಪತ್ರ ನಿರ್ವಹಣಾ ವಿಧಾನವನ್ನು ಅಳವಡಿಸಿದ ದಿನದಿಂದ ಈ ರೀತಿಯ ಪತ್ತೆ ಹಚ್ಚಲಾಗದಿರುವ ಮೊತ್ತಗಳನ್ನು ತೆಗೆದು ಹಾಕಲಾಗಿದೆ. ಪತ್ತೆ ಹಚ್ಚಲಾಗದಿರುವ ಮುಂಗಡಗಳನ್ನು ಮುಂಬರುವ ವರ್ಷಗಳಲ್ಲಿ ಒದಗಿಸಬೇಕಾದ ಅಗತ್ಯತೆ ಇರುವುದು ಮತ್ತು ಇತರ ಸಾಲಗಾರರನ್ನು ಆದಾಯವೆಂದು ಲೆಕ್ಕಕ್ಕೆ ಪರಿಗಣಿಸಬೇಕಾದ ಅಗತ್ಯತೆ ಇರುವುದು. ಏಕೆಂದರೆ ಕಳೆದ 10 ವರ್ಷಗಳಿಗೂ ಹೆಚ್ಚು ಕಾಲದಿಂದ ಈ ಮೊತ್ತವನ್ನು ಯಾರೊಬ್ಬರೂ ತಮ್ಮದೆಂದು ಹೇಳಿಕೊಂಡಿರುವುದಿಲ್ಲ. ಆದಾಗ್ಯೂ 2021-22ನೇ ಸಾಲಿನಲ್ಲಿ ರೂ. 197.16 ಲಕ್ಷಗಳನ್ನು ಹಿಮ್ಮುಗೊಳಿಸಲಾಗಿದೆ. ಸಂಶಯಾತ್ಮಕ ಸ್ವೀಕೃತಿಯಾದ ಮೊತ್ತವನ್ನು 2022-23ನೇ ಆರ್ಥಿಕ ಸಾಲಿನಲ್ಲಿ ಸಂಬಂಧಪಟ್ಟ ಬ್ಯಾಂಕ್ / ಕಾಮಗಾರಿ ವಹಿಸಿದ ಸಂಸ್ಥೆಗಳೊಂದಿಗೆ ಸಮನ್ವಯ / ಸೂಕ್ತ ಪರಿಶೀಲನೆಯ ನಂತರ ಚುಕ್ತಾ ಗೊಳಿಸಲಾಗುವುದು.

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು

ಇತರ ಚಾಲ್ತಿಯೇತರ ಆಸ್ತಿಗಳು	ಮುಂಗಡ (ವಿವರಗಳು ಪತ್ತೆಯಾಗಬೇಕಿದೆ)	ದಾಣಿಕೆ	172.55
ಇತರ ಚಾಲ್ತಿಯಲ್ಲದ ಆಸ್ತಿಗಳು	ಚಾಲ್ತಿಯಲ್ಲದ ಮುಂಗಡ (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	38.66
ಇತರ ಹಣಕಾಸು ಋಣಭಾರಗಳು	ಎಸ್‌ಡಿ ನೌಕರರು (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	15.68
ಇತರ ಹಣಕಾಸು ಋಣಭಾರಗಳು	ಸಂಗ್ರಹವಾದ ಇಎಂಡಿ (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	3.69
ಇತರ ಚಾಲ್ತಿಯೇತರ ಋಣಭಾರಗಳು	ರಹಸ್ಯ ಸ್ವೀಕೃತಿಗಳು (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	5879.31
ಇತರ ಹಣಕಾಸು ಸ್ವತ್ತುಗಳು	ಇತರೆ ಭದ್ರತಾ ಠೇವಣಿಗಳು (ವಿವರಗಳು ಪತ್ತೆಯಾಗಬೇಕಿದೆ)	ದಾಣಿಕೆ	4.53
ಇತರ ಹಣಕಾಸು ಸ್ವತ್ತುಗಳು	ನೇಮಕಗೊಂಡ ಏಜೆನ್ಸಿಯೊಂದಿಗೆ ಭದ್ರತಾ ಠೇವಣಿಗಳು (ವಿವರಗಳು ಪತ್ತೆಯಾಗಬೇಕಿದೆ)	ದಾಣಿಕೆ	16.72

ಈ ಸ್ವೀಕೃತಿಗಳು ಕಳೆದ 6 ವರ್ಷಗಳಿಂದ ಕಾಮಗಾರಿ ವಹಿಸಿಕೊಡುವ ಸಂಸ್ಥೆಗಳ ಆರ್‌ಟಿಜಿಎಸ್ / ಎನ್‌ಇಎಫ್‌ಟಿ ಮುಖಾಂತರ ವರ್ಗಾವಣೆ ಮಾಡಿರುವ ಮೊತ್ತಗಳು ಸಂಗ್ರಹವಾಗಿದ್ದು ವರ್ಗಾವಣೆ ಮಾಡಿದ ಸಂಸ್ಥೆಗಳ ವಿವರಗಳು ಲಭ್ಯವಿರುವುದಿಲ್ಲ. ಇತರ ಇಲಾಖೆಗಳೊಂದಿಗೆ ಮುಂಗಡಗಳನ್ನು ನೀಡಿದ, ಠೇವಣಿ ಇಡಲಾದ ವಿವರಗಳ ಕುರಿತು ಮೇಲುಸ್ತುವಾರಿಯನ್ನು ಮುಂಬರುವ ವರ್ಷಗಳಲ್ಲಿ ಬಲಪಡಿಸಲಾಗುವುದು.

3	ಟಿಪ್ಪಣಿ ಸಂಖ್ಯೆ 29ರಲ್ಲಿ ಬಹಿರಂಗಪಡಿಸಿದ್ದ ಬಾಬ್ತುಗಳನ್ನು ಬಿಟ್ಟು ಉದ್ಭವಿಸಬಹುದಾದ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಉಂಟಾಗಬಹುದಾದ ಕಟ್ಟುಪಾಡುಗಳ ಕುರಿತು ಕಂಪನಿಯು ವಿಶ್ವಾಸಾರ್ಹ ಅಂದಾಜು ಮಾಡಿರುವುದಿಲ್ಲ. ಆದ್ದರಿಂದ ಕಂಪನಿಯು "ಭಾರತೀಯ ಲೆಕ್ಕ ಪತ್ರ ಗುಣಮಟ್ಟ (Ind AS)–37– ಅವಕಾಶಗಳು ಸಾದಿಲ್ವಾರು ಋಣಭಾರಗಳು ಮತ್ತು ಸಾದಿಲ್ವಾರು ಆಸ್ತಿಗಳು"ರ ಅಗತ್ಯತೆಯ ಅನುಸಾರ ಬಹಿರಂಗ ಪಡಿಸುವಿಕೆಯ ವಿಧಾನಗಳನ್ನು ಪಾಲಿಸಿರುವುದಿಲ್ಲ. ಈ ವಿವರಗಳ ಅನುಪಸ್ಥಿತಿಯಲ್ಲಿ ಸಾದಿಲ್ವಾರು ಋಣಭಾರಗಳ ಮೊತ್ತದ ಪ್ರಮಾಣವನ್ನು ನಿಗದಿಪಡಿಸಲು ನಮಗೆ ಸಾಧ್ಯವಾಗುತ್ತಿಲ್ಲ.	ಟಿಪ್ಪಣಿ ಸಂಖ್ಯೆ: 29ರಲ್ಲಿ ಬಹಿರಂಗಪಡಿಸಲಾದ ಪ್ರಕರಣ / ಬಾಬ್ತುಗಳನ್ನು ಬಿಟ್ಟು ಬಾಕಿ ಇರುವ ಬಹುತೇಕ ಪ್ರಕರಣಗಳು ನೌಕರರು ಕಂಪನಿಯ ವಿರುದ್ಧ ಸೇವಾ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ಸಾಮಗ್ರಿ ಪೂರೈಕೆದಾರರು ಹೂಡಲಾಗಿರುವ ದಾವೆಗಳಿಗೆ ಸಂಬಂಧಿಸಿವೆ. ಕಂಪನಿಯ ವಿರುದ್ಧ ಸರಬರಾಜುದಾರರು ಹೂಡಿರುವ 5 ದಾವೆಗಳಲ್ಲಿ ಬೇಡಿಕೆ ಮಂಡಿಸಿರುವ (ಕ್ಲೇಮ್) ಮೊತ್ತ ರೂ. 4,20,70,355/–ಗಳಾಗಿದೆ. ಇನ್ನುಳಿದ ಪ್ರಕರಣಗಳಲ್ಲಿ ಕಂಪನಿಯ ವಿರುದ್ಧದ ಋಣಭಾರವನ್ನು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಪ್ರಕರಣಗಳು

ಕ್ರಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
		ಇತ್ಯರ್ಥಗೊಂಡ ನಂತರವಷ್ಟೆ ಖಚಿತಪಡಿಸಲು ಸಾಧ್ಯವಾಗುವುದು. ಹಣಕಾಸು ಹೇಳಿಕೆಗಳಲ್ಲಿ ಬಹಿರಂಗಪಡಿಸುವಿಕೆಯನ್ನು 2022-23ನೇ ಆರ್ಥಿಕ ವರ್ಷದಿಂದ ಮಾಡಲಾಗುವುದು.
4	ಸ್ವೀಕರಿಸಲಾದ ಮುಂಗಡಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ಅಂತಿಮ ಬಿಲ್ ಮೌಲ್ಯದ ಮೇಲೆ ಉದ್ಭವಿಸುವ ಜಿಎಸ್‌ಟಿ (ಸರಕು ಸೇವೆಗಳ ತೆರಿಗೆ) ಋಣಭಾರದ ಬಗ್ಗೆ ಜಿಎಸ್‌ಟಿ ರಿಟರ್ನ್‌ನಲ್ಲಿ ಮರುಮನನವಾಗಿರುವುದಿಲ್ಲ. ಆ ಮೇರೆಗೆ ಕಂಪನಿಯು ಜಿಎಸ್‌ಟಿ ಋಣಭಾರದ ಮೊತ್ತದ ನಿಖರಪಡಿಸಲು ಸಮರ್ಥವಾಗಿರುವುದಿಲ್ಲ. ಕಂಪನಿಯು ಜಿಎಸ್‌ಟಿ ಋಣಭಾರವನ್ನು ಖಚಿತಪಡಿಸಿಲ್ಲದಿರುವುದರಿಂದ ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಆಯವ್ಯಯ ಪಟ್ಟಿಯ ಮೇಲೆ ಉಂಟಾಗುವ ಪರಿಣಾಮವನ್ನು ಖಚಿತಪಡಿಸಲು ನಮಗೆ ಸಾಧ್ಯವಾಗುತ್ತಿಲ್ಲ.	ಕಾಮಗಾರಿ ವಹಿಸಿಕೊಡುವ ಸಂಸ್ಥೆಗಳಿಂದ ಸ್ವೀಕರಿಸಲಾದ ಮುಂಗಡಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ಅಂತಿಮ ಬಿಲ್ ಮೌಲ್ಯದ ಮೇಲೆ ಜಿಎಸ್‌ಟಿ ಋಣಭಾರವನ್ನು ಜಿಎಸ್‌ಟಿ ರಿಟರ್ನ್ಸ್‌ನೊಂದಿಗೆ ಸಮನ್ವಯ ಮಾಡಬೇಕಾಗಿದೆ. ಜಿಎಸ್‌ಟಿ ಋಣಭಾರದ ನಿಖರ ಮೊತ್ತವನ್ನು 2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆ ಮತ್ತು ಜಿಎಸ್‌ಟಿ-9 ರಿಟರ್ನ್ಸ್ ಸಲ್ಲಿಸಿದ ನಂತರ ಲೆಕ್ಕ ಹಾಕಲಾಗುವುದು.
5	ಕಂಪನಿಯು ಲೆಕ್ಕಪತ್ರದ ಪುಸ್ತಕಗಳ ಪ್ರಕಾರ ಮತ್ತು GSTR-2A/3B ಪ್ರಕಾರ GST ಅಡಿಯಲ್ಲಿ ಸ್ವೀಕರಿಸಬಹುದಾದ ಇನ್‌ಪುಟ್ ತೆರಿಗೆ ಕ್ರೆಡಿಟ್ (ITC) ಅನ್ನು ಸಮನ್ವಯಗೊಳಿಸಿಲ್ಲ. ಕ್ಲೈಮ್ ಮಾಡಬಹುದಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮೊತ್ತವನ್ನು ಕಂಪನಿಯು ಖಚಿತಪಡಿಸದ ಕಾರಣ, ಲಾಭ ಮತ್ತು ನಷ್ಟದ ಹೇಳಿಕೆ ಮತ್ತು ಬ್ಯಾಲೆನ್ಸ್ ಶೀಟ್‌ನ ಮೇಲಿನ ಪರಿಣಾಮವನ್ನು ಕಂಡು ಹಿಡಿಯಲು ನಮಗೆ ಸಾಧ್ಯವಾಗುತ್ತಿಲ್ಲ.	GST ಅಡಿಯಲ್ಲಿ ಸ್ವೀಕರಿಸಬಹುದಾದ ಇನ್‌ಪುಟ್ ತೆರಿಗೆ ಕ್ರೆಡಿಟ್‌ಗೆ ಸಂಬಂಧಿಸಿದಂತೆ ಸಮನ್ವಯ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಮತ್ತು ಸಮನ್ವಯದ ನಂತರ, 2022-23ರ ಹಣಕಾಸು ವರ್ಷದಲ್ಲಿ ಅಗತ್ಯ ನಮೂದನ್ನು ಅಂಗೀಕರಿಸಲಾಗುತ್ತದೆ.
6	ಕಂಪನಿಯು ಆದಾಯ ತೆರಿಗೆ ಕಾಂಪ್ಲೆ-ಉಪಬಂಧಗಳನುಸಾರ ಮೂಲದಲ್ಲೇ ತೆರಿಗೆಯನ್ನು ಕಡಿತಗೊಳಿಸಿರುವುದಿಲ್ಲ. ಅಂದರೆ ಲೆಕ್ಕಪತ್ರಗಳ ಪುಸ್ತಕದಲ್ಲಿ ಅದಕ್ಕಾಗಿ ಅವಕಾಶ ಮಾಡಿರುವಾಗ ಅಥವಾ ವಾಸ್ತವದಲ್ಲಿ ಪಾವತಿ ಮಾಡಿದಾಗ ಇವೆರಡರಲ್ಲಿ ಯಾವುದು ಮೊದಲೋ ಆ ಸಂದರ್ಭದಲ್ಲಿ ಮೂಲದಲ್ಲೇ ಆದಾಯ ತೆರಿಗೆಯನ್ನು ಕಡಿತಗೊಳಿಸಬೇಕಾಗಿತ್ತು. ಹಣಕಾಸು ತಖ್ತೆಗಳ ಮೇಲೆ ಇದರಿಂದ ಉಂಟಾಗುವ ಪರಿಣಾಮವನ್ನು ಖಚಿತಪಡಿಸಲಾಗುತ್ತಿಲ್ಲ.	ಬಹಳ ಕಾಲದಿಂದಲೂ ಆದಾಯ ತೆರಿಗೆಯನ್ನು ಸಂಬಂಧಪಟ್ಟವರಿಗೆ ವಾಸ್ತವವಾಗಿ ಹಣ ಪಾವತಿ ಮಾಡುವಾಗ ಕಡಿತಗೊಳಿಸುವ ವಿಧಾನವನ್ನು ಅನುಸರಿಸಿಕೊಂಡು ಬರಲಾಗುತ್ತಿದೆ. ಆದಾಗ್ಯೂ ಲೆಕ್ಕಪರಿಶೋಧಕರ ಈ ಅಭಿಪ್ರಾಯದ ಮೇರೆಗೆ ಆದಾಯ ತೆರಿಗೆಯನ್ನು ಮೂಲದಲ್ಲೇ ಕಡಿತಗೊಳ್ಳುವ ಉಪಬಂಧವನ್ನು ಇನ್ನು ಮುಂದೆ ಕಂಪನಿಯಲ್ಲಿ ಅನುಷ್ಠಾನಗೊಳಿಸಲಾಗುವುದು. ಈ ಬಗ್ಗೆ ಸುತ್ತೋಲೆಯನ್ನು ಹೊರಡಿಸಲಾಗುವುದು. 2022-23 ಆರ್ಥಿಕ ವರ್ಷದಲ್ಲಿ ಈ ವಿಧಾನವನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳಲಾಗುವುದು.

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
7	ಲಾಭ ಮತ್ತು ನಷ್ಟದ ತಖ್ತೆಯಲ್ಲಿ ಖರ್ಚು ಹಾಕಲಾದ ಕಳೆಯಲಾಗಿರುವ ಮಜೂರಿಯ ಒಟ್ಟು ಮೊತ್ತ ರೂ. 16,444.89 ಲಕ್ಷಗಳು. ಈ ಎಲ್ಲ ಪಾವತಿಗಳನ್ನು ಆಂತರಿಕವಾಗಿ ಸೃಜಿಸಲಾದ ವೋಚರ್ ರಸೀತಿಗಳ ಆಧಾರದಲ್ಲಿ ಮಾಡಲಾಗಿದೆ ಮತ್ತು ಇವುಗಳಿಗೆ ಹಣ ಪಡೆದವರಿಂದ ಯಾವುದೇ ದಾಖಲೆಯ ಸಾಕ್ಷ್ಯಾಧಾರ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಪಾವತಿಗಳ ವಾಸ್ತವತೆಯು ಹಣಕಾಸು ತಃಖ್ತೆಗಳಲ್ಲಿ ಈ ರೀತಿಯ ಪಾವತಿಗಳು ತಪ್ಪು ವರದಿಗೆ ಕಾರಣವಾಗುತ್ತಿದೆ ಎಂಬುದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ನಮಗೆ ಸಾಧ್ಯವಾಗುತ್ತಿಲ್ಲ.	ಕೆಆರ್‌ಐಡಿಎಲ್ ಸಂಸ್ಥೆಯು ಕಾಮಗಾರಿಗಳನ್ನು ಉಪಗುತ್ತಿಗೆ ನೀಡದೆ ಇಲಾಖಾ ವತಿಯಿಂದ ಕೈಗೊಳ್ಳುತ್ತಿದೆ. ಕಂಪನಿಯು ಉಕ್ಕು (ಸ್ಟೀಲ್) ಮತ್ತು ಸಿಮೆಂಟ್‌ನಂತಹ ಸಾಮಗ್ರಿಗಳನ್ನು ಇ-ಟೆಂಡರ್ ಮೂಲಕ ಸಂಗ್ರಹಣೆ ಮಾಡುತ್ತದೆ. ಸಾಮಗ್ರಿಗಳನ್ನು ನೋಂದಾಯಿತ ವರ್ತಕರಿಂದ (ಡೀಲರ್) ಸ್ಥಳೀಯವಾಗಿ ದರಪಟ್ಟಿ ಆಹ್ವಾನಿಸುವ ಮೂಲಕ ಖರೀದಿಸಲಾಗುತ್ತಿದೆ. ಮರಳು, ಇಟ್ಟಿಗೆ, ಜೆಲ್ಲಿ, ಸೈಜುಗಲ್ಲುಗಳಂತಹ ಇನ್ನಿತರ ಸಾಮಗ್ರಿಗಳನ್ನು ಯುಆರ್‌ಡಿ ಡೀಲರ್‌ಗಳಿಂದ ಖರೀದಿಸಲಾಗುತ್ತಿದೆ. ಕಾರ್ಮಿಕರನ್ನು ಸ್ಥಳೀಯವಾಗಿ ಗುಂಪುನಾಯಕರ ಮುಖಾಂತರ ಕಾರ್ಯಪ್ರವೃತ್ತಿಗೊಳಿಸಲಾಗುವುದು. ಗುಂಪು ನಾಯಕ ಸಹ ಕಾರ್ಮಿಕರಲ್ಲೇ ಒಬ್ಬ ಕಾರ್ಮಿಕನಾಗಿದ್ದು, ಅವರೊಂದಿಗೆ ಕೆಲಸ ನಿರ್ವಹಿಸುವನು. ಮಜೂರಿಯನ್ನು ನಿರ್ವಹಿಸಲಾದ ಕಾಮಗಾರಿಯ ಪ್ರಮಾಣದ ಆಧಾರದಲ್ಲಿ ಲೆಕ್ಕಹಾಕಲಾಗುವುದು ಮತ್ತು ಒಟ್ಟು ಮಜೂರಿಯನ್ನು ಅನ್ವಯವಾಗುವ ಮೂಲದಲ್ಲೇ ತೆರಿಗೆ ಕಡಿತ (ಟಿಡಿಎಸ್) ಮೊತ್ತವನ್ನು ಕಡಿತಗೊಳಿಸಿ ಗುಂಪು ನಾಯಕನಿಗೆ ಪಾವತಿ ಮಾಡಲಾಗುವುದು. ಗುಂಪು ನಾಯಕರು ಪ್ರತಿಯಾಗಿ ಸದರಿ ಮಜೂರಿ ಮೊತ್ತವನ್ನು ಸಹ ಕಾರ್ಮಿಕರಿಗೆ ವಿತರಣೆ ಮಾಡುವರು. ಕೆಲಸ ಕಾರ್ಯಗಳ ಬಿಲ್ಲುಗಳನ್ನು ಕಾಮಗಾರಿ ಸ್ಥಳದ ಉಸ್ತುವಾರಿ ಹೊಂದಿರುವ ಇಂಜಿನಿಯರ್ ಅವರು ನಿರ್ವಹಿಸಲಾದ ಕಾಮಗಾರಿಯ ಪ್ರಮಾಣ, ದಾಖಲಾದ ಪ್ರತಿ ಚ.ಮೀ. (ಘನ ಮೀ.) ದರಗಳಂತಹ ಅಂಶಗಳ ವಿವರಗಳೊಂದಿಗೆ ತಯಾರಿಸುತ್ತಾರೆ. ಕೆಲಸ ಕಾರ್ಯಗಳ (ಜಾಬ್ ವರ್ಕ್) ಬಿಲ್‌ಗಳಲ್ಲಿ ಪಾವತಿ ಮಾಡಬೇಕಾಗಿರುವ ಒಟ್ಟು ಮಜೂರಿ ಮೊತ್ತವನ್ನು ನಮೂದಿಸಲಾಗುತ್ತದೆ. ಈ ಬಿಲ್ಲುಗಳಿಗೆ ಸೈಟ್ (ನಿವೇಶನ) ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ನಿರ್ದಿಷ್ಟ ಕಾಮಗಾರಿಯ ಮಜೂರಿ ಮೊತ್ತ ಪಡೆದುಕೊಳ್ಳುವ ಮತ್ತು ವಿತರಿಸುವ ಗುಂಪುನಾಯಕರು ಸಹಿ ಮಾಡಿರುತ್ತಾರೆ. ಎಲ್ಲಾ ಮಜೂರಿಗಳ ಪಾವತಿಯನ್ನು ಕ್ರಾಸ್ಡ್ ಚೆಕ್ ಮೂಲಕ ಮಾಡಲಾಗುತ್ತದೆ. ಮಜೂರಿ ಪಾವತಿಯ ಈ ವಿಧಾನವನ್ನು ಹಿಂದಿನಿಂದ ಹಲವಾರು ವರ್ಷಗಳಿಂದ ಅನುಸರಿಸಿಕೊಂಡು ಬರಲಾಗುತ್ತಿದೆ. ಮಜೂರಿ

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
		ಪಾವತಿಯು ಕಾಮಗಾರಿಯ ಪ್ರಮಾಣಕ್ಕನುಸಾರವಾಗಿ ಇರುತ್ತದೆ. ಆದ್ದರಿಂದ ಕೆಲಸ ಕಾರ್ಯಗಳ ಬಿಲ್ಲು, ಮಜೂರಿ ಮೊತ್ತ ಪಾವತಿಗೆ ಸಂಬಂಧಿಸಿದಂತೆ ಅಧಿಕೃತ ದಾಖಲೆಯಾಗಿರುತ್ತದೆ. ದಿನಾಂಕ: 01.07.2017ರಿಂದ ಸರಕು ಮತ್ತು ಸೇವಾ ತೆರಿಗೆ ಜಾರಿಗೆ ಬಂದ ನಂತರ ಗುಂಪುನಾಯಕರನ್ನು ಜಿಎಸ್‌ಟಿ ಕಾಯ್ದೆಯಡಿ ನೋಂದಾಯಿಸಲಾಗುತ್ತಿದೆ ಮತ್ತು ಜಿಎಸ್‌ಟಿ ಬಿಲ್ (ಇನ್‌ವಾಯ್ಸ್)ಗಳನ್ನು ಮಜೂರಿ ಪಾವತಿಗಾಗಿ ಬಿಬಿಎಂಪಿ ವಲಯದ ಗುಂಪು ನಾಯಕರು ಹಾಗೂ ಕೆಲವು ಇತರೆ ವಲಯಗಳ ಗುಂಪು ನಾಯಕರು ಸಂಸ್ಥೆಗೆ ನೀಡುತ್ತಿರುತ್ತಾರೆ.
8	ಕಂಪನಿಗಳ ಕಾಯಿದೆ 2013 ರ (ತಿದ್ದುಪಡಿ ಮಾಡಿದಂತೆ) ವೇಳಾಪಟ್ಟಿ III ರ ಪ್ರಕಾರ ವ್ಯಾಪಾರದ ಸ್ವೀಕಾರಾರ್ಹತೆಗಳು ಮತ್ತು ವ್ಯಾಪಾರ ಪಾವತಿಗಳ ವಯಸ್ಸನ್ನು ಕಂಪನಿಯು ಬಹಿರಂಗಪಡಿಸಿಲ್ಲ ಏಕೆಂದರೆ ಅವರು ಒದಗಿಸಲು ಸಾಕಷ್ಟು ಡೇಟಾವನ್ನು ಹೊಂದಿಲ್ಲ.	ವ್ಯಾಪಾರ ಪಾವತಿಗಳಿಗೆ ಸಂಬಂಧಿಸಿದ ಹಲವಾರು ವಹಿವಾಟುಗಳಿಂದಾಗಿ, ಕಂಪನಿಗಳ ಕಾಯ್ದೆ, 2013 ರ ವೇಳಾಪಟ್ಟಿ III ರ ಪ್ರಕಾರ ಪಾವತಿಸಬೇಕಾದ ವ್ಯಾಪಾರದ ವಯಸ್ಸನ್ನು ಕಂಪನಿಯು ಒದಗಿಸಿಲ್ಲ. ವ್ಯಾಪಾರದ ರಶೀದಿಗಳ ವಿಷಯದಲ್ಲಿರುವಂತೆ, ಅದು ಮೂರು ವರ್ಷಗಳಿಗಿಂತ ಕಡಿಮೆ ಮತ್ತು ಮೂರು ವರ್ಷಗಳಿಗಿಂತ ಹೆಚ್ಚು ಎಂದು ವರದಿಯಾಗಿದೆ. ಮುಂದಿನ ವರ್ಷದಲ್ಲಿ ಕಂಪನಿಗಳ ಕಾಯಿದೆ, 2013 ರ ವೇಳಾಪಟ್ಟಿ III ರ ಪ್ರಕಾರ ವ್ಯಾಪಾರದ ಸ್ವೀಕಾರಾರ್ಹತೆಗಳು ಮತ್ತು ವ್ಯಾಪಾರ ಪಾವತಿಗಳನ್ನು ಖಾತೆಗಳ ಪುಸ್ತಕಗಳಲ್ಲಿ ಒದಗಿಸಲು ಕಂಪನಿಯು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.
9	ಕಂಪನಿಯು ವಿಮಾ ಪಾವತಿಗಳನ್ನು ವೆಚ್ಚ ಮತ್ತು ಪ್ರಿಪೇಯ್ಡ್ ವೆಚ್ಚಗಳು (ಆಸ್ತಿ) ಎಂದು ವರ್ಗೀಕರಿಸಿಲ್ಲ, ಇದರಿಂದಾಗಿ ಪ್ರಸ್ತುತ ಆಸ್ತಿಗಳ ಕಡಿಮೆ ವಿವರ ಮತ್ತು ಲಾಭದ ಅತಿಯಾದ ವಿವರಗಳು ರೂ.107.79 ಲಕ್ಷಗಳಷ್ಟಿದೆ. ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.	ಅಗತ್ಯ ಹೊಂದಾಣಿಕೆ ನಮೂದನ್ನು 2022-23 ರ ಆರ್ಥಿಕ ವರ್ಷದಲ್ಲಿ ಅಂಗೀಕರಿಸಲಾಗುವುದು.

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
10	ಗ್ರಾಚ್ಯುಯಿಟಿ ವೆಚ್ಚಗಳು ಮತ್ತು ರೂ 1091.13 ಲಕ್ಷಗಳ ಪ್ರಸಕ್ತವಲ್ಲದ ಆಸ್ತಿಗಳ ಅತಿಯಾದ ವರದಿ ಹೇಳಿಕೆ ಕಡಿಮೆ ಮಾಡಲಾಗಿದೆ, ಇದು ಆಕ್ಚುರಿಯಲ್ ಮೌಲ್ಯಮಾಪನ ವರದಿಯ ಪ್ರಕಾರ ಗ್ರಾಚ್ಯುಯಿಟಿ ಫಂಡ್ ಬ್ಯಾಲೆನ್ಸ್ ಮತ್ತು ಹೊಣೆಗಾರಿಕೆಯ ನಡುವಿನ ವ್ಯತ್ಯಾಸವಾಗಿದೆ. ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.	2021-22 ರ ಅವಧಿಯಲ್ಲಿ ಆಸ್ತಿಯಾಗಿ ಗ್ರಾಚ್ಯುಟಿ ನಿಧಿಯ ಹೆಚ್ಚುವರಿ ಲೆಕ್ಕಪರಿಶೋಧನೆ ಮತ್ತು "ಇತರ ಆದಾಯ" ದಂತೆ ಗ್ರಾಚ್ಯುಟಿ ವೆಚ್ಚಗಳನ್ನು ಹಿಂತಿರುಗಿಸಲಾಗುತ್ತದೆ ಮತ್ತು 2022-23 ರ ಅವಧಿಯಲ್ಲಿ ಖಾತೆಗಳ ಪುಸ್ತಕಗಳಲ್ಲಿ ಅಗತ್ಯವಾದ ನಮೂದನ್ನು ರವಾನಿಸುವ ಮೂಲಕ ಲೆಕ್ಕಹಾಕಲಾಗುತ್ತದೆ.
11	ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ, ಮಾರ್ಚ್ 31,2022 ರಂತೆ ಈ ಕೆಳಗಿನ ಭೌತಿಕ ದೌರ್ಬಲ್ಯಗಳನ್ನು ಗುರುತಿಸಲಾಗಿದೆ: ಕಂಪನಿಯು ಈ ಕೆಳಗಿನ ಕ್ಷೇತ್ರಗಳಲ್ಲಿ ಸೂಕ್ತವಾದ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರಲಿಲ್ಲ: **1) ಆದಾಯ** ಎ) ಯೋಜನಾ ನಿರ್ವಹಣಾ ವ್ಯವಸ್ಥೆಯಲ್ಲಿ ಉಪವಿಭಾಗಗಳು ನವೀಕರಿಸಿದ ಮಾಸಿಕ ಚಾಲನೆಯಲ್ಲಿರುವ ಖಾತೆ ಬಿಲ್ ವಿವರಗಳ ಆಧಾರದ ಮೇಲೆ ಆದಾಯವನ್ನು ಗುರುತಿಸಲಾಗುತ್ತದೆ. (BHUSIRI). ಈ ವಿವರಗಳು ವಾಸ್ತವವಾಗಿ ಉಪವಿಭಾಗಗಳು ಅಂತಿಮ ಬಿಲ್ಲುಗಳು ಹೊಂದಿಕೆಯಾಗುತ್ತವೆಯೇ ಎಂದು ಖಚಿತಪಡಿಸಿಕೊಳ್ಳಲು ಯಾವುದೇ ನಿಯಂತ್ರಣವಿಲ್ಲ. ಬಿ) ಒಪ್ಪಿಕೊಂಡ ನಿಯಮಗಳ ಪ್ರಕಾರ ಕೆ.ಆರ್.ಐ.ಡಿ.ಎಲ್ ಶುಲ್ಕಗಳ ಲೆಕ್ಕಾಚಾರದ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಗೆ ಸೂಕ್ತವಾದ ನಿಯಂತ್ರಣಗಳಿಲ್ಲ. ಸಿ) ಪೂರ್ಣಗೊಂಡ ಎಲ್ಲಾ ಯೋಜನೆಗಳಿಗೆ ಅಂತಿಮ ಬಿಲ್‌ಗಳನ್ನು ಸಮಯಕ್ಕೆ ಸರಿಯಾಗಿ ತಯಾರಾಗಲಿದೆಯೇ ಎಂದು ಖಚಿತಪಡಿಸಿಕೊಳ್ಳಲು ಕಂಪನಿಯು ಯಾವುದೇ ಟ್ರ್ಯಾಕಿಂಗ್ ಕಾರ್ಯವಿಧಾನವನ್ನು ಹೊಂದಿಲ್ಲ. ಇದು ಸಂಭಾವ್ಯವಾಗಿ ಆದಾಯ ಮತ್ತು ಸ್ವೀಕಾರಾರ್ಹ ವಸ್ತುಗಳ ತಪ್ಪು ಹೇಳಿಕೆಗೆ ಕಾರಣವಾಗಬಹುದು.	1.a. ಉಪ-ವಿಭಾಗಗಳು ಮಾಸಿಕ ಚಾಲನೆ-ಯಲ್ಲಿರುವ ಖಾತೆ ಬಿಲ್ ಆಧಾರದ ಮೇಲೆ ಆದಾಯವನ್ನು ಗುರುತಿಸಲಾಗಿದೆಯಾದರೂ, ಉಪ-ವಿಭಾಗಗಳು ಅಂತಿಮ ಬಿಲ್ಲುಗಳ ವಿವರಗಳ ಆಧಾರದ ಮೇಲೆ ಹಣಕಾಸು ವರ್ಷದ ಕೊನೆಯಲ್ಲಿ ಲೆಕ್ಕ ಪುಸ್ತಕಗಳಲ್ಲಿ ಲೆಕ್ಕ ಹಾಕಲಾಗುತ್ತದೆ. 1.b. ಪ್ರಧಾನ ಕಛೇರಿಯಲ್ಲಿ ಆಯಾ ಉಪ-ವಿಭಾಗಗಳ ಖಾತೆಗಳನ್ನು ಪರಿಶೀಲಿಸಲು ನಿಯೋಜಿಸಲಾದ ಲೆಕ್ಕಪರಿಶೋಧನಾ ಅಧಿಕಾರಿಗಳನ್ನು, ಸಲ್ಲಿಸಿದ ಬಿಲ್ ಮೇಲಿನ ಕೆ.ಆರ್.ಐ.ಡಿ.ಎಲ್. ಶುಲ್ಕಗಳಿಗೆ ಸಂಬಂಧಿಸಿದಂತೆ ಸರಿಯಾಗಿ ಪರಿಶೀಲಿಸಲಾಗುತ್ತಿದೆ ಮತ್ತು ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ, ಲೆಕ್ಕಪರಿಶೋಧನಾ ಅಧಿಕಾರಿಗಳು ಸಾಮಾನ್ಯವಾಗಿ ವ್ಯತ್ಯಾಸದ ಸಮರ್ಥನೆಯನ್ನು ಪಡೆಯುತ್ತಾರೆ. 1.c. ಪ್ರಧಾನ ಕಛೇರಿಯಲ್ಲಿ ಮುಖ್ಯ ಇಂಜಿನಿಯರ್ ನೇತೃತ್ವದ ಅಂತಿಮ ಬಿಲ್ ವಿಭಾಗವು ಕಾರ್ಯನಿರ್ವಹಿಸುತ್ತಿದೆ ಮತ್ತು ಭೌತಿಕವಾಗಿ

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
	2) ಕೆಲಸ ವಹಿಸುವ ವಿಜೆನ್ಸಿಗಳಿಂದ ಸ್ವೀಕರಿಸಿದ ಮುಂಗಡದ ವಿತರಣೆ/ಸೆಟ್ ಆಫ್ ಎ) ಉಪ ವಿಭಾಗಗಳಿಂದ ಉಂಟಾಗುವ ನಿಜವಾದ ವೆಚ್ಚವು ಯೋಜನೆಗಳಿಗೆ ಅನುಮೋದಿತ ಅಂದಾಜುಗಳನ್ನು ಮೀರಿದೆಯೇ ಎಂಬ ಸಂದರ್ಭಗಳನ್ನು ಗುರುತಿಸಲು ಸೂಕ್ತವಾದ ಆಂತರಿಕ ನಿಯಂತ್ರಣ ಕಾರ್ಯವಿಧಾನವಿಲ್ಲ. ಬಿ) ಇದು ಆದಾಯ ಸೋರಿಕೆಗೆ ಕಾರಣವಾಗಬಹುದು, ಏಕೆಂದರೆ ಉಪವಿಭಾಗಗಳು ಕ್ಲೈಮ್ ಮಾಡಿದ ಹೆಚ್ಚುವರಿ ಮೊತ್ತವನ್ನು ಸಹ ವಿತರಿಸಬಹುದು. ಸಿ) ನಿರ್ದಿಷ್ಟ ಯೋಜನೆಗೆ ವಿತರಿಸಲ್ಪಟ್ಟ ಹಣವನ್ನು ಆ ಯೋಜನೆಗೆ ಪ್ರತ್ಯೇಕವಾಗಿ ಬಳಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಸೂಕ್ತವಾದ ನಿಯಂತ್ರಣವಿಲ್ಲ. ಇದು ಸಂಭಾವ್ಯವಾಗಿ ಪ್ರಸ್ತುತ ಹೊಣೆಗಾರಿಕೆಗಳು, ಸ್ವತ್ತುಗಳು ಮತ್ತು ಆದಾಯದ ವಸ್ತು ತಪ್ಪು ಹೇಳಿಕೆಗೆ ಕಾರಣವಾಗಬಹುದು. **3) ವ್ಯಾಪಾರ ಮತ್ತು ಇತರ ಪಾವತಿಗಳು** ಎ) ಕಂಪನಿಯು ಸಾಲಗಾರರಿಂದ ಬಾಕಿಗಳ ದೃಢೀಕರಣವನ್ನು ಪಡೆಯುವ ಯಾವುದೇ ವ್ಯವಸ್ಥೆಯನ್ನು ಹೊಂದಿಲ್ಲ. ಬಿ) ಸಾಲಗಾರರ ಎಲ್ಲಾ ಅಗತ್ಯ ವಿವರಗಳನ್ನು ಸೇರಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಕಂಪನಿಯು ಸೂಕ್ತ ನಿಯಂತ್ರಣ ಕ್ರಮಗಳನ್ನು ಹೊಂದಿಲ್ಲ. ಸಿ) ಎಂಎಸ್‌ಎಂಇ ಕಾಯ್ದೆ, 2006 ರ ಅಡಿಯಲ್ಲಿ ಯಾವುದೇ ಸಾಲದಾತರು ನೋಂದಾಯಿಸಿಕೊಂಡಿದ್ದಾರೆಯೇ ಎಂದು ಗುರುತಿಸಲು ಕಂಪನಿಗೆ ಸೂಕ್ತ ನಿಯಂತ್ರಣಗಳಿಲ್ಲ. **4) ವೇತನಗಳು** ಎ) ಯೋಜನೆಗಳಿಗೆ ಮಾನವಶಕ್ತಿಯನ್ನು ಪೂರೈಸುವ ಪಕ್ಷಗಳು/ ಗುತ್ತಿಗೆದಾರರಿಂದ ಬಿಲ್‌ಗಳು/ ಇನ್‌ವಾಯ್ಸ್‌ಗಳಂತಹ ಯಾವುದೇ ಬಾಹ್ಯ ಸಾಕ್ಷ್ಯಗಳನ್ನು ಕಂಪನಿಯು ಸ್ವೀಕರಿಸುವುದಿಲ್ಲ. ಆಂತರಿಕವಾಗಿ	ಮತ್ತು ಆರ್ಥಿಕವಾಗಿ ಪೂರ್ಣಗೊಂಡ ಎಲ್ಲಾ ಕಾಮಗಾರಿಗಳಿಗೆ ಉಪ-ವಿಭಾಗ ಕಚೇರಿಗಳಿಂದ ಅಂತಿಮ ಬಿಲ್‌ಗಳನ್ನು ಪಡೆಯುವ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ. ಈ ವಿಭಾಗವು ಪೂರ್ಣಗೊಂಡ ಕಾಮಗಾರಿಗಳ ಅಂತಿಮ ಬಿಲ್‌ಗಳನ್ನು ನಿಗದಿತ ಸಮಯದೊಳಗೆ ಪ್ರಧಾನ ಕಛೇರಿಗೆ ಸಲ್ಲಿಸಲಾಗಿದೆಯೆ ಎಂದು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಖಚಿತಪಡಿಸುತ್ತದೆ. ಅಂತಿಮ ಬಿಲ್‌ಗಳನ್ನು ಪಡೆಯಲು ಮತ್ತು ಎಲ್ಲಾ ವಿಷಯಗಳಲ್ಲಿ ಬಿಲ್ಲಗಳ ಸರಿಯಾದ ಪರಿಶೀಲನೆಯೊಂದಿಗೆ ನಿಗದಿತ ಸಮಯದೊಳಗೆ ಪ್ರಧಾನ ಕಛೇರಿಯಲ್ಲಿ ಲೆಕ್ಕಹಾಕಲು ಕಂಪನಿಯು ಸರಿಯಾದ ಕಾಳಜಿಯನ್ನು ತೆಗೆದುಕೊಳ್ಳುತ್ತದೆ. 2.a. ಮಂಜೂರಾದ ಅಂದಾಜು ವೆಚ್ಚದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಪ್ರಧಾನ ಕಛೇರಿಗಳಿಗೆ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ಪದೇ ಪದೇ ಸುತ್ತೋಲೆ ಸೂಚನೆಗಳನ್ನು ನೀಡಲಾಗುತ್ತಿದೆ. ಕ್ಷೇತ್ರ ಮಟ್ಟದಲ್ಲಿ ಅನಿವಾರ್ಯ ಸನ್ನಿವೇಶಗಳ ಕಾರಣದಿಂದಾಗಿ, ನಿಜವಾದ ವೆಚ್ಚವು ಅನುಮೋದಿತ ಅಂದಾಜುಗಳನ್ನು ಮೀರಿದರೆ, ಪ್ರಧಾನ ಕಚೇರಿಯು ಅಂತಹ ವೆಚ್ಚವನ್ನು ಅನುಮತಿಸಲು ಮತ್ತು ಅಂತಿಮ ಬಿಲ್‌ಗಳನ್ನು ಲೆಕ್ಕ ಪುಸ್ತಕಗಳಲ್ಲಿ ಲೆಕ್ಕಹಾಕಲು ಮತ್ತು ಹೆಚ್ಚುವರಿ ವೆಚ್ಚದ ಮಿತಿಯನ್ನು ಈ ಕೆಳಗಿನಂತೆ ಲೆಕ್ಕಹಾಕಲು ಸುತ್ತೋಲೆ ಸೂಚನೆಗಳನ್ನು ನೀಡಿದೆ:

ಕ್ರ. ಸಂ.	ಅಂದಾಜು ಮೊತ್ತ	ಮೀರಿದ ವೆಚ್ಚದ ಮಿತಿ (ರೂ.)
1	ರೂ. 10.00 ಲಕ್ಷಗಳವರೆಗಿನ ಕಾಮಗಾರಿ	2,000
2	ರೂ. 10.00 ಲಕ್ಷದಿಂದ ರೂ. 50.00 ಲಕ್ಷದವರೆಗಿನ ಕಾಮಗಾರಿಗಳು	10,000
3	ರೂ. 50.00 ಲಕ್ಷ ಮೇಲ್ಪಟ್ಟ ಕಾಮಗಾರಿ	20,000

ಮೇಲಿನ ಹೆಚ್ಚುವರಿ ಮಿತಿಯನ್ನು ಅನುಮತಿಸಿರುವುದರಿಂದ, ಪೂರ್ಣಗೊಂಡ ಕಾಮಗಾರಿಗಳ ಅಂತಿಮ ಬಿಲ್‌ಗಳನ್ನು ಉಪ-ವಿಭಾಗಗಳಿಗೆ ಲೆಕ್ಕ ಹಾಕಲಾಗುತ್ತಿದೆ.

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
	ರಚಿಸಲಾದ ವೋಚರ್‌ಗಳ ಆಧಾರದ ಮೇಲೆ ಕಂಪನಿಯು ಅಂತಹ ಪಾರ್ಟಿಗಳಿಗೆ/ಗುತ್ತಿಗೆದಾರರಿಗೆ ಪಾವತಿಯನ್ನು ಮಾಡುತ್ತದೆ. ಅಂತಹ ವಹಿವಾಟುಗಳ ಪ್ರಾಮಾಣಿಕತೆಯನ್ನು ಪರಿಶೀಲಿಸಲಾಗದ ಕಾರಣ ಇದು ವೆಚ್ಚದ ತಪ್ಪಾದ ಹೇಳಿಕೆಗೆ ಕಾರಣವಾಗಬಹುದು. **5) ಆಸ್ತಿ, ಪೀಠೋಪಕರಣ ಮತ್ತು ಯಂತ್ರೋಪಕರಣ** ಎ) ಪ್ರತಿ ವೈಯಕ್ತಿಕ ಆಸ್ತಿಗೆ ಸೂಕ್ತವಾದ ಮಾಹಿತಿಯೊಂದಿಗೆ ಸ್ಥಿರ ಆಸ್ತಿ ರಿಜಿಸ್ಟರ್‌ಗಳನ್ನು ಸಕಾಲಿಕ ಆಧಾರದ ಮೇಲೆ ನವೀಕರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಯಾವುದೇ ವ್ಯವಸ್ಥೆ ಇಲ್ಲ. ಬಿ) ಸ್ವತ್ತುಗಳನ್ನು ಬಂಡವಾಳಗೊಳಿಸಲಾಗಿದೆಯೆ ಮತ್ತು ಸಮಯಕ್ಕೆ ಸರಿಯಾಗಿ ಬಂಡವಾಳದ ಡಬ್ಲ್ಯುಐಪಿಯಿಂದ ಹೊರಹಾಕಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಕಂಪನಿಗೆ ಸೂಕ್ತವಾದ ನಿಯಂತ್ರಣಗಳಿಲ್ಲ. ಸಿ) ಪ್ರತಿ ವರದಿ ಮಾಡುವ ದಿನಾಂಕದಂದು ದುರ್ಬಲಗೊಂಡ ಯಾವುದೇ ಸ್ವತ್ತುಗಳನ್ನು ಗುರುತಿಸಲು ಕಂಪನಿಯು ಯಾವುದೇ ಕಾರ್ಯವಿಧಾನವನ್ನು ಹೊಂದಿಲ್ಲ. **6) ಇತರೆ** ಎ) ಹಣಕಾಸು ಹೇಳಿಕೆಗಳಲ್ಲಿನ ಅಳತೆ, ಪ್ರಸ್ತುತಿ ಮತ್ತು ಬಹಿರಂಗಪಡಿಸುವಿಕೆಗಳಿಗೆ ಸಂಬಂಧಿಸಿದಂತೆ ಕಂಪನಿಯು ಭಾರತೀಯ ಲೆಕ್ಕಪರಿಶೋಧನಾ ಮಾನದಂಡಗಳು ಅನುಗುಣವಾಗಿರಲು ಸೂಕ್ತ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಹೊಂದಿಲ್ಲ. ಬಿ) ಪ್ರಸ್ತುತ/ಪ್ರಸಕ್ತವಲ್ಲದ ಆಸ್ತಿಗಳು/ಹೊಣೆಗಾರಿಕೆಗಳನ್ನು ಗುರುತಿಸಲು ಕಂಪನಿಯು ಸೂಕ್ತ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಹೊಂದಿಲ್ಲ. ಸಿ) ಆದಾಯ ತೆರಿಗೆ ಕಾಯ್ದೆ, 1961 ರ ನಿಬಂಧನೆಗಳ ಪ್ರಕಾರ ತೆರಿಗೆಗಳನ್ನು ಮೂಲದಲ್ಲಿಯೇ ಕಡಿತ-ಗೊಳಿಸಲಾಗಿದೆಯೇ ಮತ್ತು ಪಾವತಿಯಾಗಿದೆಯೇ ಎಂದು	2.b. ಆದಾಗ್ಯೂ, ಕ್ಷೇತ್ರ ಮಟ್ಟದ ಅಧಿಕಾರಿಗಳು ಮಂಜೂರಾದ ಅಂದಾಜುಗಳಿಗಿಂತ ಹೆಚ್ಚಿನ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ವಹಿಸುವ ಏಜೆನ್ಸಿಗಳನ್ನು ಸಂಪರ್ಕಿಸುತ್ತಾರೆ. 2.c. ಬಿಡುಗಡೆ ಮಾಡಲಾದ ಅನುದಾನವನ್ನು ಟ್ರಸ್ಟ್ ಏಜೆನ್ಸಿಯು ಬಿಡುಗಡೆ ಮಾಡುವ ಯೋಜನೆಗಳಿಗೆ ಮಾತ್ರ ಬಳಸಿಕೊಳ್ಳುವಂತೆ ಪ್ರಧಾನ ಕಛೇರಿಯಿಂದ ಪದೇ ಪದೇ ಸುತ್ತೋಲೆ ಸೂಚನೆಗಳನ್ನು ನೀಡಲಾಗುತ್ತಿದೆ. ಕ್ಷೇತ್ರ ಮಟ್ಟದ ಅಧಿಕಾರಿಗಳು ನಿಧಿಯ ವೈವಿಧ್ಯೀಕರಣವನ್ನು ನಿಯಂತ್ರಿಸಲು ಪ್ರಧಾನ ಕಛೇರಿಯಲ್ಲಿ ಸರಿಯಾದ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 3.a.b.c. ವ್ಯಾಪಾರ ಪಾವತಿಗಳಿಗೆ ಸಂಬಂಧಿಸಿದ ಹಲವಾರು ವಹಿವಾಟುಗಳಿಂದಾಗಿ, ಕಂಪನಿಯು ಸಾಲದಾತರಿಂದ ಬಾಕಿಗಳ ದೃಢೀಕರಣವನ್ನು ಪಡೆಯುತ್ತಿಲ್ಲ ಮತ್ತು ಎಂಎಸ್‌ಎಂಇ ಕಾಯ್ದೆ, 2006 ರ ಅಡಿಯಲ್ಲಿ ನೋಂದಣಿಯ ವಿವರಗಳಿಗೆ ಸಂಬಂಧಿಸಿದಂತೆ ಸಾಲಗಾರರ ವಿವರಗಳನ್ನು ಪಡೆದಿಲ್ಲ. 4.a. ಕಂಪನಿಯು ಉಪಗುತ್ತಿಗೆ ನೀಡದೆ ಎಲ್ಲಾ ಕಾಮಗಾರಿಗಳನ್ನು ಇಲಾಖಾ ನಿಗಾದಲ್ಲಿ ಕೈಗೊಳ್ಳುತ್ತದೆ. ಗುಂಪು ನಾಯಕರ ಮೂಲಕ ಸ್ಥಳೀಯವಾಗಿ ಕಾರ್ಮಿಕರನ್ನು ತೊಡಗಿಸಿ-ಕೊಳ್ಳಲಾಗುತ್ತದೆ. ಗುಂಪಿನ ನಾಯಕನು ಇತರ ಸಹ ಕಾರ್ಮಿಕರೊಂದಿಗೆ ಕೆಲಸ ಮಾಡುವ ಕಾರ್ಮಿಕರಲ್ಲಿ ಒಬ್ಬನಾಗಿರುತ್ತಾನೆ. ಮಾಡಿದ ಕೆಲಸದ ಪ್ರಮಾಣವನ್ನು ಆಧರಿಸಿ ವೇತನವನ್ನು ಲೆಕ್ಕಹಾಕಲಾಗುತ್ತದೆ ಮತ್ತು ಅನ್ವಯವಾಗುವ ಟಿಡಿಎಸ್ ಅನ್ನು ಕಡಿತಗೊಳಿಸಿದ ನಂತರ ಗುಂಪಿನ ನಾಯಕನಿಗೆ ಒಟ್ಟು ವೇತನವನ್ನು ಪಾವತಿಸಲಾಗುತ್ತದೆ. ಗುಂಪಿನ ನಾಯಕರು ಪ್ರತಿಯಾಗಿ ವೇತನವನ್ನು ಸಹ ಕಾರ್ಮಿಕರಿಗೆ ವಿತರಿಸುತ್ತಾರೆ. ಕಾರ್ಯಸ್ಥಳದ ಉಸ್ತುವಾರಿ ವಹಿಸಿಕೊಂಡಿರುವ ಇಂಜಿನಿಯರ್, ಕಾರ್ಯಗತಗೊಳಿಸಿದ ಕೆಲಸದ ಪ್ರಮಾಣ, ಪ್ರತಿ

ಕ್ರ.ಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
	ಖಚಿತಪಡಿಸಿಕೊಳ್ಳಲು ಕಂಪನಿಯು ಸೂಕ್ತ ನಿಯಂತ್ರಣಗಳನ್ನು ಹೊಂದಿಲ್ಲ. ಡಿ) ಫಾರ್ಮ್ 26 ಎಎಸ್ ಪ್ರಕಾರ ಲೆಕ್ಕಪತ್ರ ನಿರ್ವಹಣೆ ಮತ್ತು ಆದಾಯ/ಟಿಡಿಎಸ್ ಸಮನ್ವಯಕ್ಕೆ ಸಂಬಂಧಿಸಿದಂತೆ ಕಂಪನಿಯು ಸೂಕ್ತ ನಿಯಂತ್ರಣಗಳನ್ನು ಹೊಂದಿದೆ. ಇ) ಕಂಪನಿಯು ಡಬ್ಲ್ಯುಐಪಿ ಮತ್ತು ಅಂತಿಮ ಬಿಲ್ ಮೌಲ್ಯದ ವಿರುದ್ಧ ಪಾವತಿಸಬೇಕಾದ ನಿಜವಾದ ಉತ್ಪಾದನಾ ಹೊಣೆಗಾರಿಕೆಯಲ್ಲದ ಕಾರಣ ಜಿಎಸ್‌ಟಿ ಉತ್ಪಾದನಾ ಹೊಣೆಗಾರಿಕೆಯನ್ನು ಲೆಕ್ಕಹಾಕಲು ಕಂಪನಿಗೆ ಸೂಕ್ತವಾದ ನಿಯಂತ್ರಣಗಳಿಲ್ಲ. ಎಫ್) ಸಿಜಿಎಸ್‌ಟಿ ಕಾಯ್ದೆ, 2017 ರ ಸೆಕ್ಷನ್ 9 (3) ರ ಪ್ರಕಾರ ರಿವರ್ಸ್ ಚಾರ್ಜ್ ಕಾರ್ಯವಿಧಾನದ ಅಡಿಯಲ್ಲಿ ಬರುವ ವಹಿವಾಟುಗಳನ್ನು ಗುರುತಿಸಲು ಕಂಪನಿಯು ವ್ಯವಸ್ಥೆಯನ್ನು ಹೊಂದಿಲ್ಲ. ಜಿ) ಕಂಪನಿಯು ಸ್ವೀಕರಿಸುವ ವಸ್ತುಗಳ ವಯಸ್ಸಾಗುವುದನ್ನು ಮೇಲ್ವಿಚಾರಣೆ ಮಾಡಲು ಸೂಕ್ತವಾದ ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ ಮತ್ತು ಸಾಲಗಾರರಿಂದ ದೃಢೀಕರಣಗಳನ್ನು ಪಡೆಯುವ ವ್ಯವಸ್ಥೆಯನ್ನು ಹೊಂದಿಲ್ಲ. ಎಚ್) ಅರ್ನೆಸ್ಟ್ ಮನಿ ಠೇವಣಿಗಳು (ಇಎಂಡಿ) ಮತ್ತು ಇತರ ಠೇವಣಿಗಳ ಸಮನ್ವಯ ಮತ್ತು ದೃಢೀಕರಣಕ್ಕಾಗಿ ಮತ್ತು ಅಂತಹ ಠೇವಣಿಗಳನ್ನು ಸಮಯೋಚಿತವಾಗಿ ರದ್ದುಗೊಳಿಸುವುದನ್ನು/ಹಿಂಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಸೂಕ್ತವಾದ ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. ಐ) ಹಣಕಾಸು ಹೇಳಿಕೆಗಳಲ್ಲಿ ವರದಿ ಮಾಡಿದ ದಿನಾಂಕದಂತೆ ಆಕಸ್ಮಿಕ ಹೊಣೆಗಾರಿಕೆಗಳ ನಿಬಂಧನೆ ಅಥವಾ ಬಹಿರಂಗಪಡಿಸುವಿಕೆಯನ್ನು ಲೆಕ್ಕಹಾಕಲು ಮತ್ತು ಬ್ಯಾಂಕ್ ಖಾತರಿಯ ಅಸ್ತಿತ್ವ ಮತ್ತು ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಸೂಕ್ತ ವ್ಯವಸ್ಥೆಯನ್ನು ಹೊಂದಿಲ್ಲ.	ಚದರ ಮೀಟರ್‌ಗೆ/ಘನ ಅಡಿಗೆ ದರದ ದಾಖಲೆಯಂತಹ ಎಲ್ಲಾ ವಿವರಗಳೊಂದಿಗೆ ಉದ್ಯೋಗದ ಕೆಲಸದ ಬಿಲ್ಗಳನ್ನು ತಯಾರಿಸುತ್ತಾರೆ. ಪಾವತಿಸಬೇಕಾದ ಒಟ್ಟು ವೇತನವನ್ನು ಜಾಬ್ ವರ್ಕ್ ಬಿಲ್‌ನಲ್ಲಿ ದಾಖಲಿಸಲಾಗುತ್ತದೆ. ಈ ಜಾಬ್ ವರ್ಕ್ ಬಿಲ್‌ಗೆ ಸೈಟ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಮತ್ತು ಗ್ರೂಪ್ ಲೀಡರ್ ಸಹಿ ಹಾಕುತ್ತಾರೆ, ಅವರು ನಿರ್ದಿಷ್ಟ ಕೆಲಸದಲ್ಲಿ ಪಾವತಿ ಸ್ವೀಕರಿಸುವವರು ಮತ್ತು ವಿತರಕರಾಗಿದ್ದಾರೆ. ಎಲ್ಲಾ ವೇತನ ಪಾವತಿಗಳನ್ನು ಕ್ರಾಸ್ ಚೆಕ್‌ಗಳ ಮೂಲಕ ಮಾಡಲಾಗುತ್ತದೆ. ಕಳೆದ ಹಲವಾರು ವರ್ಷಗಳಿಂದ ವೇತನವನ್ನು ಪಾವತಿಸುವ ಈ ವಿಧಾನವನ್ನು ಅನುಸರಿಸಲಾಗುತ್ತಿದೆ. ವೇತನದ ಪಾವತಿಯು ಪ್ರಮಾಣ ಪತ್ರದ ಪ್ರಕಾರವಾಗಿರುತ್ತದೆ. ಆದ್ದರಿಂದ, ಉದ್ಯೋಗದ ಕೆಲಸದ ಬಿಲ್ ವೇತನದ ಪಾವತಿಗೆ ಅಧಿಕೃತ ದಾಖಲೆಗಳಾಗಿವೆ. 5.a. ಕಂಪನಿಯು ನವೀಕರಿಸಿದ ಸ್ಥಿರ ಸ್ವತ್ತುಗಳ ನೋಂದಣಿಯನ್ನು ನಿರ್ವಹಿಸುತ್ತಿದೆ ಮತ್ತು ಯಾವಾಗ ಮತ್ತು ಯಾವಾಗ ಬಳಸಿದ ಸ್ವತ್ತುಗಳನ್ನು ಸಮಯೋಚಿತವಾಗಿ ಬಂಡವಾಳ ಮಾಡಲಾಗುತ್ತಿದೆ. ಕಂಪನಿಯು ಮುಂದಿನ ಹಣಕಾಸು ವರ್ಷದಲ್ಲಿ ಹಾನಿಗೊಳಗಾದ ಯಾವುದೇ ಸ್ವತ್ತುಗಳನ್ನು ಗುರುತಿಸುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಲೆಕ್ಕ ಹಾಕುತ್ತದೆ. 6.a. ಕಂಪನಿಗಳ (ಭಾರತೀಯ ಲೆಕ್ಕಪರಿಶೋಧನಾ ಮಾನದಂಡಗಳು) ನಿಯಮಗಳು, 2015ರ ಅಡಿಯಲ್ಲಿ ಅಧಿಸೂಚಿಸಲಾದ ಭಾರತೀಯ ಲೆಕ್ಕಪರಿಶೋಧನಾ ಮಾನದಂಡಗಳಿಗೆ (ಭಾರತೀಯ ಲೆಕ್ಕಪರಿಶೋಧನಾ ಮಾನದಂಡಗಳು) ಅನುಗುಣವಾಗಿ ಹಣಕಾಸು ಹೇಳಿಕೆಗಳನ್ನು ತಯಾರಿಸಲು ಕಂಪನಿಯು ಒಂದು ನೀತಿಯನ್ನು ಅನುಸರಿಸುತ್ತಿದೆ. 6.b. ಹಣಕಾಸು ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವ 1.4 ರ ಟಿಪ್ಪಣಿಗಳಲ್ಲಿ ಬಹಿರಂಗಪಡಿಸಿದಂತೆ ಗಮನಾರ್ಹ ಲೆಕ್ಕಪತ್ರ ನೀತಿಯಲ್ಲಿ, ಆಸ್ತಿ ಮತ್ತು

ಕ್ರಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
		ಹೊಣೆಗಾರಿಕೆಗಳ ಪ್ರಸ್ತುತ ಮತ್ತು ಪ್ರಸ್ತುತವಲ್ಲದ ವರ್ಗೀಕರಣವನ್ನು ಪ್ರಸ್ತುತಪಡಿಸುವ ಕಂಪನಿಯ ನೀತಿಯನ್ನು ಸೂಚಿಸಲಾಗಿದೆ. 6.c. ಸಂಬಂಧಿತರಿಗೆ ನಿಜವಾದ ಪಾವತಿಯನ್ನು ಮಾಡುವಾಗ ಮೂಲದಲ್ಲೇ ಆದಾಯ ತೆರಿಗೆಯನ್ನು ಕಡಿತಗೊಳಿಸುವ ಅಭ್ಯಾಸ ಮತ್ತು ಈ ಅಭ್ಯಾಸವನ್ನು ವರ್ಷಗಳ ಅವಧಿಯಲ್ಲಿ ಅನುಸರಿಸಲಾಗುತ್ತಿದೆ. ಆದಾಗ್ಯೂ, ಲೆಕ್ಕಪರಿಶೋಧನೆಯ ಪ್ರಕಾರ, ಸುತ್ತೋಲೆ ಸೂಚನೆಗಳನ್ನು ನೀಡುವ ಮೂಲಕ ಟಿಡಿಎಸ್ ನಿಬಂಧನೆಗಳನ್ನು ಜಾರಿಗೆ ತರಲಾಗುವುದು. ಈ ಪದ್ಧತಿಯನ್ನು 2022-23 ನೇ ಹಣಕಾಸು ವರ್ಷದಿಂದ ಕಟ್ಟುನಿಟ್ಟಾಗಿ ಅನುಸರಿಸಲಾಗುವುದು. 6.d. ಟಿಡಿಎಸ್ ಪ್ರಮಾಣಪತ್ರಗಳನ್ನು ಫಾರ್ಮ್-26 ಎ.ಎಸ್. ನೊಂದಿಗೆ ಸಮನ್ವಯಗೊಳಿಸಿದ ನಂತರ, ಖಾತೆಯ ಟಿಡಿಎಸ್ ಮೊತ್ತಕ್ಕೆ ಅಗತ್ಯವಾದ ನಮೂದುಗಳನ್ನು ನಿಯತಕಾಲಿಕವಾಗಿ ಖಾತೆ ಪುಸ್ತಕಗಳಲ್ಲಿ ನಮೂದಿಸಲಾಗುತ್ತಿದೆ. 6.e. ಕಾಮಗಾರಿ ವಹಿಸಿಕೊಡುವ ಏಜೆನ್ಸಿಗಳಿಂದ ಮುಂಗಡದ ಮೇಲಿನ ಜಿಎಸ್‌ಟಿ ಹೊಣೆಗಾರಿಕೆ, ಪ್ರಗತಿಯಲ್ಲಿರುವ ಕೆಲಸ ಮತ್ತು ಅಂತಿಮ ಬಿಲ್‌ಗಳ ಮೌಲ್ಯವನ್ನು ಜಿಎಸ್‌ಟಿ ರಿಟರ್ನ್ಸ್‌ಗಳೊಂದಿಗೆ ಸಮನ್ವಯಗೊಳಿಸಬೇಕು ಮತ್ತು ಸಮನ್ವಯದ ನಂತರ, 2021-22 ನೇ ಸಾಲಿನ ಜಿಎಸ್‌ಟಿಆರ್-9 ರಿಟರ್ನ್ಸ್‌ಗಳ ವಾರ್ಷಿಕ ಲೆಕ್ಕಪರಿಶೋಧನೆ ಮತ್ತು ಸಲ್ಲಿಕೆಯ ನಂತರ ಜಿಎಸ್‌ಟಿ ಹೊಣೆಗಾರಿಕೆಯ ನಿಖರವಾದ ಮೊತ್ತವನ್ನು ಲೆಕ್ಕಹಾಕಲಾಗುತ್ತದೆ. 6.f. ಮುಂದಿನ ಹಣಕಾಸು ವರ್ಷದಲ್ಲಿ ಸಿಜಿಎಸ್‌ಟಿ ಕಾಯ್ದೆ, 2017 ರ ಸೆಕ್ಷನ್ 9 (3) ರ ಪ್ರಕಾರ ರಿವರ್ಸ್ ಚಾರ್ಜ್ ಕಾರ್ಯವಿಧಾನದ ಅಡಿಯಲ್ಲಿ ಬರುವ ವಹಿವಾಟುಗಳನ್ನು ಕಂಪನಿಯು ಗುರುತಿಸುತ್ತದೆ. 6.g. ಕಂಪನಿಯು ವಿವಿಧ ಸರ್ಕಾರಿ ಇಲಾಖೆಗಳು ವಹಿಸಿರುವ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ ಮತ್ತು ವಹಿಸಿಕೊಡುವ ಏಜೆನ್ಸಿಗಳಿಂದ ಪಡೆದ

ಕ್ರಸಂ.	ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
		ಹಣಕ್ಕಿಂತ ಹೆಚ್ಚಾದ ಹೆಚ್ಚುವರಿ ವೆಚ್ಚ ಯಾವುದಾದರೂ ಇದ್ದರೆ, ಅದನ್ನು ಲೆಕ್ಕ ಪುಸ್ತಕಗಳಲ್ಲಿ ಸ್ವೀಕಾರಾರ್ಹವೆಂದು ಪರಿಗಣಿಸಲಾಗುತ್ತದೆ. ವ್ಯಾಪಾರದ ರಶೀದಿಗಳ ಅವಧಿಯನ್ನು ಒದಗಿಸಲು ಕಂಪನಿಯು ಬಳಿ ಸಾಕಷ್ಟು ದತ್ತಾಂಶವಿರಲಿಲ್ಲ. ಆದಾಗ್ಯೂ, ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಸ್ವೀಕರಿಸುವಿಕೆಯನ್ನು ಮೂರು ವರ್ಷಗಳಿಗಿಂತ ಕಡಿಮೆ ಮತ್ತು ಮೂರು ವರ್ಷಗಳಿಗಿಂತ ಹೆಚ್ಚು ಎಂದು ವರ್ಗೀಕರಿಸಲಾಗಿದೆ, ಅದರ ಪ್ರಕಾರ ಅಂಕಿಅಂಶಗಳನ್ನು ಟಿಪ್ಪಣಿ ನಂ.9 – ಟ್ರೇಡ್ ಸ್ವೀಕೃತಿಗಳಲ್ಲಿ ತೋರಿಸಲಾಗಿದೆ. 6.h. ಅರ್ನೆಸ್ಟ್ ಮನಿ ಠೇವಣಿಗಳು (ಇಎಂಡಿ) ಮತ್ತು ಇತರ ಠೇವಣಿಗಳ ಸಮನ್ವಯದ ಕಾರ್ಯವಿಧಾನ ವನ್ನು ಮತ್ತು ಅಂತಹ ಠೇವಣಿಗಳನ್ನು ಸಮಯೋಚಿತವಾಗಿ ರದ್ದುಗೊಳಿಸುವುದು/ ಹಿಂಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಮುಂಬರುವ ವರ್ಷಗಳಲ್ಲಿ ಬಲಪಡಿಸಲಾಗುವುದು. 6.i. ಟಿಪ್ಪಣಿ ಸಂಖ್ಯೆ:29ರಲ್ಲಿ ಬಹಿರಂಗಪಡಿಸಿರುವುದನ್ನು ಹೊರತುಪಡಿಸಿ ಬಾಕಿ ಇರುವ ಹೆಚ್ಚಿನ ಪ್ರಕರಣಗಳು ಸೇವಾ ವಿಷಯಗಳಲ್ಲಿ ಮತ್ತು ವಸ್ತು ಪೂರೈಕೆದಾರರಲ್ಲಿ ಕಂಪನಿಯ ವಿರುದ್ಧ ನೌಕರರು ಸಲ್ಲಿಸಿದ ಪ್ರಕರಣಗಳಿಗೆ ಸಂಬಂಧಿಸಿವೆ. ಕಂಪನಿಯ ವಿರುದ್ಧ ಸರಬರಾಜುದಾರರು ಸಲ್ಲಿಸಿದ ಐದು ಪ್ರಕರಣಗಳಲ್ಲಿ, ಕ್ಲೈಮ್ ರೂ.4,20,70,355/– ಮತ್ತು ಉಳಿದ ಪ್ರಕರಣಗಳಲ್ಲಿ, ಆಯಾ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿದ ನಂತರವೇ ಕಂಪನಿಯ ವಿರುದ್ಧದ ಹೊಣೆಗಾರಿಕೆಯನ್ನು ಕಂಡುಹಿಡಿಯಬಹುದು. ಹಣಕಾಸಿನ ಹೇಳಿಕೆಗಳಲ್ಲಿನ ಬಹಿರಂಗಪಡಿಸುವಿಕೆಯನ್ನು ಹಣಕಾಸು ವರ್ಷ 2022–23 ರಿಂದ ಮಾಡಲಾಗುತ್ತದೆ.

b) ವೃತ್ತಿಯಲ್ಲಿ ಕಂಪನಿ ಕಾರ್ಯದರ್ಶಿಯವರ ವರದಿ:

ಕಂಪನಿ ಕಾಯ್ದೆ 2013 ಸೆಕ್ಷನ್ 204ರಂತೆ ವೃತ್ತಿಯಲ್ಲಿ ಕಂಪನಿ ಕಾರ್ಯದರ್ಶಿ ನೀಡುವ ಲೆಕ್ಕ ಪರಿಶೋಧನಾ ವರದಿ ನಮ್ಮ ಕಂಪನಿಗೆ ಅನ್ವಯವಾಗುವುದಿಲ್ಲ.

11. ಸೆಕ್ಷನ್ 186ರ ಅನ್ವಯ ಮಾಡಿರುವ ಸಾಲ, ಖಾತರಿ ಅಥವಾ ಹೂಡಿಕೆ ಮಾಡಿರುವ ವಿವರಗಳು:

ಕಂಪನಿ ಕಾಯ್ದೆ 2013 ಸೆಕ್ಷನ್ 186ರ ಪ್ರಕಾರ ಯಾವುದೇ ಸಾಲ, ಖಾತರಿ ಅಥವಾ ಉಳಿಕೆ ಪ್ರಸಕ್ತ ವರದಿ ವರ್ಷದಲ್ಲಿ ಇರುವುದಿಲ್ಲ.

12. ಇಂಧನ ಸಂರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ. ತಾಂತ್ರಿಕತೆ ಅಳವಡಿಕೆ, ವಿದೇಶಿ ವಿನಿಮಯಗಳಿಗೆ ಮತ್ತು ವೆಚ್ಚ:

A) ಇಂಧನ ಉಳಿತಾಯ

a	ಇಂಧನ ಉಳಿತಾಯದ ಪರಿಣಾಮ ಮತ್ತು ತೆಗೆದುಕೊಂಡ ಕ್ರಮ	ನಿಗಮವು ಸಿವಿಲ್ ಇಂಜಿನಿಯರಿಂಗ್ ಕಂಪನಿಯಾದ್ದರಿಂದ ನಿಗಮಕ್ಕೆ ಹೆಚ್ಚು ಇಂಧನದ ಅವಶ್ಯಕತೆ ಇರುವುದಿಲ್ಲ ಆದ್ದರಿಂದ ಹೆಚ್ಚು ಬಂಡವಾಳ ಹೂಡುವ ಅಗತ್ಯ ಕಂಡು ಬಂದಿಲ್ಲ ಹಾಗೂ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಪ್ರಸ್ತಾಪವನ್ನು ಪರಿಗಣಿಸಲಾಗಿಲ್ಲ.
b	ಬದಲಿ ಇಂಧನ ಉಪಯೋಗಿಸಲು ತೆಗೆದುಕೊಂಡ ಕ್ರಮ	ಇಲ್ಲ
c	ಇಂಧನ ಉಳಿಸಲು ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ವಿವರ	ಇಲ್ಲ

B) ತಾಂತ್ರಿಕತೆ ಅಳವಡಿಕೆ

a	ತಾಂತ್ರಿಕ ಅಳವಡಿಕೆಗೆ ತೆಗೆದುಕೊಂಡ ಕ್ರಮದ ವಿವರ	ಆಡಳಿತ ಮಂಡಳಿಯು ವರದಿಯಲ್ಲಿ ಹೇಳುವಂತಹ ತಾಂತ್ರಿಕತೆ ಯಾವುದು ಇರುವುದಿಲ್ಲ
b	ವಸ್ತುಗಳ ಸುಧಾರಣೆ, ವೆಚ್ಚನಿಯಂತ್ರಣ, ವಸ್ತುಗಳ ಅಭಿವೃದ್ಧಿ, ಬದಲಿವಸ್ತುಗಳ ಆಮದಿನಿಂದಾದ ಲಾಭಗಳು	ಇಲ್ಲ
c	ಕಳೆದ 3ವರ್ಷದಲ್ಲಿ ಆಮದು ಮಾಡಿಕೊಂಡ ತಂತ್ರಾಂಶ (a) ಆಮದು ಮಾಡಿಕೊಂಡ ತಂತ್ರಾಂಶದ ವಿವರ (b) ಆಮದು ಮಾಡಿದ ವರ್ಷ (c) ತಂತ್ರಾಂಶ ಪೂರ್ಣ ಬಳಕೆಯಾಗಿದೆಯೆ (d) ಪೂರ್ಣ ಬಳಕೆಯಾಗದಿದ್ದಲ್ಲಿ ಯಾವ ಕ್ಷೇತ್ರದಲ್ಲಿ ಬಳಸಿಕೊಂಡಿಲ್ಲ ಮತ್ತು ಅದಕ್ಕೆ ಕಾರಣ	ಇಲ್ಲ
d	ಸಂಶೋಧನೆ ಮತ್ತು ಅಭಿವೃದ್ಧಿಗೆ ಖರ್ಚಾದ ಮೊತ್ತ	ಇಲ್ಲ

C) ವಿದೇಶಿ ವಿನಿಮಯದ ಗಳಿಕೆ ಮತ್ತು ಬಳಕೆ

a	ವರದಿ ದಿನಾಂಕದವರೆಗೆ ವಿದೇಶಿ ವಿನಿಮಯದ ಒಳಹರಿವಿಕೆಯ ವಿವರ	ಇಲ್ಲ
b	ವಿದೇಶಿ ವಿನಿಮಯದ ಹೊರ ಹರಿವಿಕೆಯ ವಿವರ	ಇಲ್ಲ

13. ನಿರ್ದೇಶಕರ ಹೊಣೆಗಾರಿಕೆ ತಃಖ್ತೆ

ಕಂಪನಿ ಕಾಯ್ದೆ 2013 ಸೆಕ್ಷನ್ 134 ಉಪ ನಿಬಂಧನೆ (5)ರ ಪ್ರಕಾರ ಹಾಗೂ ಉಪ ನಿಬಂಧನೆ (3) (ಸಿ) ಪ್ರಕಾರ ನಿಗಮದ ಹಣಕಾಸು ತ:ಖ್ತೆಗಳ ಬಗ್ಗೆ ನಿರ್ದೇಶಕರ ಹೊಣೆಗಾರಿಕೆ ವರದಿ ಈ ಕೆಳಗಿನಂತಿದೆ.

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಾಗ ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟಗಳನ್ನು ಅನುಸರಿಸಲಾಗಿದೆ ಹಾಗೂ ಪಾಲಿಸುತ್ತಿದ್ದ ನಿಯಮದಲ್ಲಿ ಬದಲಾವಣೆಗಳಾಗಿದ್ದಲ್ಲಿ ಅಗತ್ಯವಾದ ವಿವರಣೆ ಕೊಡಲಾಗಿದೆ.

ಬಿ) ನಿರ್ದೇಶಕರು ಕಂಪನಿಯ ನೈಜ ಪರಿಸ್ಥಿತಿ ಹಾಗೂ ನಿಖರವಾದ ಹಾಗೂ ಪಾರದರ್ಶಕತೆ ಹಾಗೂ ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟದ ವಿವರಗಳನ್ನು ತಿಳಿಸಲು ಸರಿಯಾದ ಲೆಕ್ಕಪತ್ರದ ನಿಯಮಗಳನ್ನು ಆಯ್ಕೆ ಮಾಡಿದ್ದು ಹಾಗೂ ಅವುಗಳನ್ನು ಸತತವಾಗಿ ಉಪಯೋಗಿಸುತ್ತಿದ್ದು ಹಾಗೂ ಅಂದಾಜುಗಳನ್ನು ಹಾಗೂ ತೀರ್ಮಾನಗಳನ್ನು ಸಮರ್ಪಕವಾಗಿ ತೆಗೆದುಕೊಳ್ಳಲಾಗಿದೆ.

(ಸಿ) ಕಂಪನಿಯ ಆಸ್ತಿಗಳನ್ನು ರಕ್ಷಿಸುವ ಮತ್ತು ಮೋಸ ಮತ್ತು ಇತರೆ ಅಕ್ರಮಗಳನ್ನು ನಿವಾರಿಸುವ ಮತ್ತು ಪತ್ತೆಹಚ್ಚುವ ಸಲುವಾಗಿ ಕಂಪನಿ ಕಾಯಿದೆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ಮತ್ತು ಸಾಕಷ್ಟು ಜಾಗರೂಕತೆಯನ್ನು ವಹಿಸಲಾಗಿದೆ.

(ಡಿ) ಚಾಲ್ತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ.

(ಇ) ಅನ್ವಯಿಸುವ ವಿವಿಧ ಕಾಯಿದೆಗಳ ಅಧಿನಿಯಮಗಳನ್ನು ಪಾಲಿಸಲು ನಿರ್ದೇಶಕರು ಸೂಕ್ತ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದು, ಆ ಪದ್ಧತಿಗಳು ಸಾಕಷ್ಟು ಹಾಗೂ ಪರಿಣಾಮಕಾರಿಯಾಗಿ ಚಾಲ್ತಿಯಲ್ಲಿರುತ್ತದೆ.

14. ಕೇಂದ್ರ ಸರ್ಕಾರಕ್ಕೆ ವರದಿ ಮಾಡಿರುವ ವಿವರಗಳ ಹೊರತುಪಡಿಸಿ, ಕಂಪನಿ ಕಾಯ್ದೆ 2013 ನಿಬಂಧನೆ 143 ಉಪ ನಿಬಂಧನೆ 12ರಂತೆ ಲೆಕ್ಕಪರಿಶೋಧಕರು ವರದಿ ಮಾಡಿರುವ ವಂಚನೆಗಳ ವಿವರಗಳು.

ಕಂಪನಿ ಕಾಯ್ದೆ 2013 ನಿಬಂಧನೆ 143 ಉಪ ನಿಬಂಧನೆ 12ರಂತೆ ಲೆಕ್ಕಪರಿಶೋಧಕರು ವರದಿ ಮಾಡಿರುವಂತೆ ಯಾವುದೇ ವಂಚನೆಗಳ ಪ್ರಕರಣಗಳು ವರದಿಯಾಗಿರುವುದಿಲ್ಲ..

15. ಸದರಿ ಆರ್ಥಿಕ ವರ್ಷದ ಕೊನೆಗೊಂಡ ದಿನದಿಂದ ಈ ವರದಿ ನೀಡಿರುವ ದಿನಾಂಕದವರೆಗೆ ನಿಗಮದ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರಿರುವ ದಂಡಗಳು, ಶಿಕ್ಷೆ, ಬದ್ಧತೆಗಳು.

ಸದರಿ ಆರ್ಥಿಕ ವರ್ಷದಿಂದ ಈ ವರದಿ ನೀಡಿರುವ ದಿನಾಂಕದವರೆಗೆ ನಿಗಮದ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರಿರುವ ದಂಡಗಳು, ಶಿಕ್ಷೆ, ಬದ್ಧತೆಗಳು ಯಾವುದೂ ಇರುವುದಿಲ್ಲ.

16. ಆಡಳಿತ ಮಂಡಳಿಯ ಅಭಿಪ್ರಾಯದ ಪ್ರಕಾರ ನಿಗಮದ ಅಸ್ಥಿತ್ವಕ್ಕೆ ದಕ್ಕೆ ಬರುವಂತಹ ಅಪಾಯಗಳನ್ನು ತಡೆಗಟ್ಟಲು ಸೂಕ್ತವಾದ ನಿಯಮಗಳನ್ನು ರೂಪಿಸಿ, ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸುವ ಬಗ್ಗೆ ನಿರ್ದೇಶಕರ ಹೇಳಿಕೆ.

ನಿಗಮದ ಅಸ್ಥಿತ್ವಕ್ಕೆ ದಕ್ಕೆ ಬರುವಂತಹ ಅಪಾಯಗಳನ್ನು ತಡೆಗಟ್ಟಲು ಸೂಕ್ತವಾದ ನಿಯಮಗಳನ್ನು ರೂಪಿಸಿ, ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸುವ ಬಗ್ಗೆ ಇನ್ನೂ ನಿಯಮ ರೂಪಿಸಬೇಕಾಗಿದೆ.

17. ಸಂಸ್ಥೆಯ ಸಾಮಾಜಿಕ ಜವಾಬ್ದಾರಿ ಕುರಿತು ವರದಿಯ ಅಡಿಯಲ್ಲಿ ಈ ವರ್ಷದಲ್ಲಿ ಕಂಪನಿಯ ನಿರ್ದೇಶಕರು/ಪ್ರಮುಖ ನಿರ್ವಹಣೆಕಾರರು ಅಭಿವೃದ್ಧಿಪಡಿಸಿದ ಹೇಳಿಕೆಗಳು.

ಈ ಕುರಿತು ಕಂಪನಿ ಕಾಯ್ದೆ 2013 ಸೆಕ್ಷನ್ 135(4)ರಲ್ಲಿ ಪ್ರಸ್ತಾಪಡಿಸಿರುವವರು ನಿಗದಿತ ನಮೂನೆಯಲ್ಲಿ ವಿವರಗಳನ್ನು ಅನುಬಂಧ –1ರಲ್ಲಿ ಒದಗಿಸಿದೆ.

18. ಪ್ರಸ್ತುತ ವರ್ಷದಲ್ಲಿ ನಿರ್ದೇಶಕರು / ಪ್ರಮುಖ ನಿರ್ವಹಣಾಧಿಕಾರಿಗಳ ನೇಮಕ ಅಥವಾ ರಾಜೀನಾಮೆ ವಿವರ.

ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಮಂಡಳಿ ನಿರ್ದೇಶಕರುಗಳಲ್ಲಿ ಈ ಕೆಳಗಿನಂತೆ ಬದಲಾವಣೆ ಮಾಡಲಾಗಿರುತ್ತದೆ.

ಪ್ರಸಕ್ತ ವರ್ಷದ ನಿರ್ದೇಶಕರು ನೇಮಕಾತಿ / ಬದಲಾವಣೆಗಳ ವಿವರ ಹೀಗಿದೆ.

ನೇಮಕಾತಿ:

- ಶ್ರೀ **ಶ್ರೀನಿವಾಸ ಹೆಚ್. ಮಾರಂಗಪ್ಪನವರ್,** ನಿರ್ದೇಶಕರು, (ಗ್ರಾಮೀಣ ಮೂಲ ಸೌಕರ್ಯ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – 01 ಇವರನ್ನು ಕಂಪನಿಯ ನಿರ್ದೇಶಕರಾಗಿ ದಿನಾಂಕ: 20.07.2021 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
- ಶ್ರೀ **ಶ್ರೀಕೃಷ್ಣ ಎನ್. ಬುಗಟ್ಯಾಗೋಳ,** ವಿಶೇಷ ಅಧಿಕಾರಿ, ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಮತ್ತು ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು – 560 001 ಇವರನ್ನು ಕಂಪನಿಯ ನಿರ್ದೇಶಕರಾಗಿ ದಿನಾಂಕ: 20.07.2021 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
- ಶ್ರೀ **ಬಿ.ಹೆಚ್. ಅನಿಲ್‌ಕುಮಾರ್,** ಭಾ.ಆ.ಸೇ., ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರನ್ನು ಕಂಪನಿಯ ನಿರ್ದೇಶಕರಾಗಿ ದಿನಾಂಕ: 22.02.2022 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

- **ಡಾ. ಶಮ್ಲಾ ಇಕ್ಬಾಲ್,** ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರನ್ನು ಕಂಪನಿಯ ನಿರ್ದೇಶಕರಾಗಿ ದಿನಾಂಕ: 22.02.2022 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
- **ಶ್ರೀ ದಯಾನಂದ. ಕೆ.ಎ.,** ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರನ್ನು ಕಂಪನಿಯ ನಿರ್ದೇಶಕರಾಗಿ ದಿನಾಂಕ: 11.03.2022 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ನಿರ್ದೇಶಕರ ಅವಧಿ ಅಂತ್ಯಗೊಂಡಿರುವುದು:

- **ಡಾ. ಭೂವನಹಳ್ಳಿ ನಾಗರಾಜ್,** ನಿರ್ದೇಶಕರು, (ಗ್ರಾಮೀಣ ಮೂಲ ಸೌಕರ್ಯ) ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂಪನಿಯ ನಿರ್ದೇಶಕರು ಇವರನ್ನು ದಿನಾಂಕ:20.07.2021 ರಿಂದ ಜಾರಿಗೆ ಬರುವಂತೆ ಅಧಿಕಾರವು ಅಂತ್ಯಗೊಂಡಿರುತ್ತದೆ.
- **ಶ್ರೀ ಪುರುಷೋತ್ತಮ್ ಸಿಂಗ್.ಬಿ.ಹೆಚ್.,** ಕೆ.ಟಿ.ಎಸ್., ವಿಶೇಷ ಅಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕಂಪನಿಯ ನಿರ್ದೇಶಕರು ಇವರನ್ನು ದಿನಾಂಕ: 20.07.2021 ರಿಂದ ಜಾರಿಗೆ ಬರುವಂತೆ ಅಧಿಕಾರವು ಅಂತ್ಯಗೊಂಡಿರುತ್ತದೆ.
- **ಡಾ.ರಜನೀಶ್ ಗೋಯಲ್,** ಭಾ.ಆ.ಸೇ., ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಕಂಪನಿಯ ನಿರ್ದೇಶಕರು ಇವರನ್ನು ದಿನಾಂಕ: 22.02.2022 ರಿಂದ ಜಾರಿಗೆ ಬರುವಂತೆ ಅಧಿಕಾರವು ಅಂತ್ಯಗೊಂಡಿರುತ್ತದೆ.
- **ಶ್ರೀ ಬಿ.ಹೆಚ್. ಅನಿಲ್‌ಕುಮಾರ್,** ಭಾಆಸೇ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ಯಮಗಳ ಇಲಾಖೆ ಕಂಪನಿಯ ನಿರ್ದೇಶಕರು ಇವರನ್ನು ದಿನಾಂಕ: 22.02.2022 ರಿಂದ ಜಾರಿಗೆ ಬರುವಂತೆ ಅಧಿಕಾರವು ಅಂತ್ಯಗೊಂಡಿರುತ್ತದೆ.
- **ಡಾ. ರವಿಕುಮಾರ್ ಸುರಪುರ,** ಭಾಆಸೇ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕಂಪನಿಯ ನಿರ್ದೇಶಕರು ಇವರನ್ನು ದಿನಾಂಕ: 11.03.2022 ರಿಂದ ಜಾರಿಗೆ ಬರುವಂತೆ ಅಧಿಕಾರವು ಅಂತ್ಯಗೊಂಡಿರುತ್ತದೆ.

ಪೂರ್ಣಾವಧಿ ಕಂಪನಿ ಕಾರ್ಯದರ್ಶಿ ನೇಮಕಕ್ಕೆ ಸಂಬಂಧಿಸಿದಂತೆ ನಿಯಮಗಳು 2014 (ನಿರ್ವಾಹಕ ಸಿಬ್ಬಂದಿ ನೇಮಕಾತಿ ಮತ್ತು ಸಂಭಾವನೆ) ನಿಯಮ 8ಎ ರ ಜೊತೆಗೆ ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 203ರ ಪ್ರಕಾರ ಕಂಪನಿಗೆ ಅನ್ವಯಿಸುತ್ತದೆ ಎಂದು ಆಡಳಿತ ಮಂಡಳಿಯು ವರದಿ ನೀಡಿರುತ್ತದೆ. ಆದಾಗ್ಯೂ ಕಂಪನಿಯು ಈ ವರದಿ ವರ್ಷದಲ್ಲಿ ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಂಡಿರುವುದಿಲ್ಲ.

19. ಆಡಳಿತ ಮಂಡಳಿಯ ಸಮಿತಿಗಳು

ಈ ಕೆಳಕಾಣಿಸಿದ ಸಮಿತಿಗಳನ್ನು ಈ ವರದಿ ವರ್ಷದಲ್ಲಿ ನೇಮಕ ಮಾಡಿದೆ.

ಸಿ.ಎಸ್.ಆರ್. ಸಮಿತಿ

ಕಂಪನಿಯ ಸಿಎಸ್‌ಆರ್ ಚಟುವಟಿಕೆಗಳನ್ನು ಕೈಗೊಳ್ಳಲು, ಸಿಎಸ್‌ಆರ್ ನಿಧಿಯನ್ನು ಪಡೆದುಕೊಳ್ಳಲು ಬಂದ ಅರ್ಜಿಗಳು/ಪತ್ರಗಳನ್ನು ಪರಿಶೀಲಿಸಿ ದಿನಾಂಕ: 06.05.2021, 29.07.2021 ಮತ್ತು 28.03.2022ರಂದು ಜರುಗಿದ ಸಿಎಸ್‌ಆರ್ ಸಮಿತಿ ಸಭೆಯಲ್ಲಿ ಸಿಎಸ್‌ಆರ್ ನಿಧಿಯನ್ನು ಕೋರಿ ಬಂದಿರುವ ಅರ್ಜಿ ಪತ್ರವನ್ನು ಪರಿಗಣಿಸಲು ಈ ಕೆಳಕಂಡ ಸಿಎಸ್‌ಆರ್ ಸಮಿತಿಯ ಸದಸ್ಯರುಗಳಿದ್ದರು.

ಶ್ರೀ ಗಂಗಾಧರಸ್ವಾಮಿ. ಜಿ.ಎಂ. ಭಾಅಸೇ – ಅಧ್ಯಕ್ಷರು
ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್

ಶ್ರೀ ವಿಜಯಕುಮಾರ್ ಚವಡಣ್ಣನವರ್ – ಸದಸ್ಯರು
ನಿರ್ದೇಶಕರು, ಕೆಆರ್‌ಐಡಿಎಲ್

ಶ್ರೀ ಶ್ರೀಕೃಷ್ಣ ಎನ್. ಬುಗಟ್ಯಾಗೋಳ – ಸದಸ್ಯರು
ನಿರ್ದೇಶಕರು, ಕೆಆರ್‌ಐಡಿಎಲ್

ಶ್ರೀ ಶ್ರೀನಿವಾಸ ಹೆಚ್. ಮಾರಂಗಪ್ಪನವರ್ – ಸದಸ್ಯರು
ನಿರ್ದೇಶಕರು, ಕೆಆರ್‌ಐಡಿಎಲ್

ಶ್ರೀ ಮಹದೇವ್ – ಸದಸ್ಯ ಕಾರ್ಯದರ್ಶಿ
ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್

ದಿನಾಂಕ: 18.02.2022 ರಿಂದ ಅನ್ವಯವಾಗುವಂತೆ ಸಿಎಸ್‌ಆರ್ ಸಮಿತಿಯು ಪುನರ್‌ರಚಿಸಲಾಗಿದ್ದು, ಈ ಕೆಳಗಿನಂತೆ ಸದಸ್ಯರುಗಳಿರುತ್ತಾರೆ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು – ಅಧ್ಯಕ್ಷರು
ಆರ್‌ಡಿ&ಪಿಆರ್ ಇಲಾಖೆ ಮತ್ತು ನಿರ್ದೇಶಕರು, ಕೆಆರ್‌ಐಡಿಎಲ್

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ – ಸದಸ್ಯರು

ವಿಶೇಷ ಅಧಿಕಾರಿ & ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಜಿಲ್ಲಾ ಪಂಚಾಯತ್, ಆರ್ಥಿಕ ಇಲಾಖೆ ಮತ್ತು – ಸದಸ್ಯರು
ನಿರ್ದೇಶಕರು, ಕೆಆರ್‌ಐಡಿಎಲ್

ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್ ಪ್ರಧಾನ ಕಚೇರಿ – ಸದಸ್ಯರು

20. ಪ್ರಸಕ್ತ ವರ್ಷದಲ್ಲಿ ನಿಗಮದ ಸಹಕಾರಿ ಅಥವಾ ಸಹಯೋಗದ ಅಥವಾ ಸಹಚರ ನಿಗಮಗಳ ಹೆಸರುಗಳು.

ಆಡಳಿತ ಮಂಡಳಿಯು ನಿಗಮದ ಸಹಕಾರಿ ಅಥವಾ ಸಹಯೋಗದ ಅಥವಾ ಸಹಚರ ಕಂಪನಿಗಳು ಯಾವುದೂ ಇಲ್ಲ ಎಂದು ವರದಿಸಿರುತ್ತಾರೆ.

21. ನಿಯಂತ್ರಕರಿಂದ ಅಥವಾ ನ್ಯಾಯಾಲಯಗಳು ಅಥವಾ ಟ್ರಿಬ್ಯುನಲ್‌ಗಳು ನೀಡಿದ ತೀರ್ಪಿನನ್ವಯ ನಿಗಮದ ಅಸ್ಥಿತ್ವ ಮತ್ತು ಮುಂದುವರಿಕೆ ಮೇಲೆ ಬೀರುವ ಪರಿಣಾಮಗಳು.

ನಿಯಂತ್ರಕರಿಂದ ಅಥವಾ ನ್ಯಾಯಾಲಯಗಳು ಅಥವಾ ಟ್ರಿಬ್ಯುನಲ್‌ಗಳು ನೀಡಿದ ತೀರ್ಪಿನನ್ವಯ ನಿಗಮದ ಅಸ್ತಿತ್ವ ಮತ್ತು ಮುಂದುವರಿಕೆ ಮೇಲೆ ಬೀರುವ ಪರಿಣಾಮಗಳು ಯಾವುದೂ ಇಲ್ಲ.

22. ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದಡಿ ತಡೆಗಟ್ಟಲು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಸ್ವೀಕರಿಸಿದ ಮತ್ತು ವಿಲೇವಾರಿ ಮಾಡಿದ ದೂರಿನ ವಿವರಗಳು. ಲೈಂಗಿಕ ಕಿರುಕುಳ ತಡೆಯುವಿಕೆ, ನಿರ್ಮೂಲನೆ ಹಾಗೂ ಬಗೆಹರಿಸುವ ಕಾಯ್ದೆ 2013ರ ಪ್ರಕಾರ ನಿಗಮವು ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಯುವ ನಿಯಮ ರೂಪಿಸಬೇಕು ಹಾಗೂ ಆಂತರಿಕ ದೂರು ನಿವಾರಣಾ ಸಮಿತಿಯನ್ನು ಕಾನೂನಿನ ಪ್ರಕಾರ ರಚಿಸಿ ಎಲ್ಲಾ (ಖಾಯಂ, ಗುತ್ತಿಗೆ, ತಾತ್ಕಾಲಿಕ, ತರಬೇತಿ) ನೌಕರರನ್ನು ಈ ನಿಯಮದಡಿ ದೂರು ನೀಡಲು ಅವಕಾಶ ಕಲ್ಪಿಸಬೇಕು.

ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಲು ಲೈಂಗಿಕ ಕಿರುಕುಳ ತಡೆಯುವಿಕೆ, ನಿರ್ಮೂಲನೆ ಹಾಗೂ ಬಗೆಹರಿಸುವ ಕಾಯ್ದೆ 2013 ದಿನಾಂಕ 09.12.2013ರಿಂದ ಜಾರಿಗೆ ಬಂದಿರುತ್ತದೆ. ಆಂತರಿಕ ದೂರು ನಿವಾರಣಾ ಸಮಿತಿಯ ಪ್ರಕಾರ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಆಗಿದ್ದ ಲೈಂಗಿಕ ಕಿರುಕಳ ಬಗ್ಗೆ ದೂರುಗಳನ್ನು ಪರಿಶೀಲಿಸಿ ಅದರ ಬಗ್ಗೆ ಕ್ರಮವಿಡುವುದು. ಸಮಿತಿಯು ಚಾಲನೆಯಲ್ಲಿದ್ದು, ಯಾವುದೇ ದೂರುಗಳು ವರದಿಯ ವರ್ಷದಲ್ಲಿ ಸ್ವೀಕೃತಿಯಾಗಿರುವುದಿಲ್ಲ.

23. ಕಂಪನಿಯ ಕಾಯ್ದೆ 2013 ನಿಬಂಧನೆ 177 ಉಪ ನಿಬಂಧನೆ (10)ರ ಪ್ರಕಾರ ಜಾಗೃತ ದಳ ನಿಯೋಜಿಸಿ ನಿರ್ದೇಶಕರು ಹಾಗೂ ನೌಕರರು ನಿಗಮದ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಲು ವೇದಿಕೆ ನಿರ್ಮಿಸಬೇಕು.

ಕಂಪನಿಯ ಕಾಯ್ದೆ 2013 ನಿಬಂಧನೆ 177 ಉಪ ನಿಬಂಧನೆ (10)ರ ಪ್ರಕಾರ ಜಾಗೃತ ದಳ ನಿಯೋಜಿಸಿ ನಿರ್ದೇಶಕರು ಹಾಗೂ ನೌಕರರು ನಿಗಮದ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಲು ವೇದಿಕೆ ನಿರ್ಮಿಸುವ ನಿಬಂಧನೆ ಈ ಸಂಸ್ಥೆಗೆ ಅನ್ವಯಿಸುವುದಿಲ್ಲ.

24. ಕಂಪನಿ ಕಾಯ್ದೆ ಪರಿಚ್ಛೇಧ Vರ ಪ್ರಕಾರ ಪಡೆದ ಠೇವಣಿಗಳ ವಿವರ.

ಕಂಪನಿ ಕಾಯ್ದೆ ಪರಿಚ್ಛೇಧ Vರ ಪ್ರಕಾರ ಪಡೆದ ಠೇವಣಿಗಳ ವಿವರ ಯಾವುದೂ ಇಲ್ಲ.

25. ಕಾಯಿದೆಯ ಅಧ್ಯಾಯ 5ರ ಅಗತ್ಯತೆಗಳಿಗೆ ಅನುಗುಣವಾಗಿಲ್ಲದ ಠೇವಣಿಗಳ ವಿವರಗಳು

ಕಾಯಿದೆಯ ಅಧ್ಯಾಯ 5ರ ಅಗತ್ಯತೆಗಳಿಗೆ ಅನುಗುಣವಾಗಿಲ್ಲದ ಯಾವುದೇ ಠೇವಣಿಗಳನ್ನು ವರ್ಷದಲ್ಲಿ ಸ್ವೀಕರಿಸಲಾಗಿಲ್ಲ.

26. ಆರ್ಥಿಕ ತ:ಖ್ತೆಗಳ ಬಗ್ಗೆ ಸಮರ್ಥನೀಯ ಆಂತರಿಕ ಆರ್ಥಿಕ ನಿಯಂತ್ರಣದ ಬಗ್ಗೆ ವಿವರಗಳು.

ನಿಗಮದಲ್ಲಿ ಆರ್ಥಿಕ ತ:ಖ್ತೆಗಳ ತಯಾರಿಕೆಯಲ್ಲಿ ಆಸ್ತಿಗಳ ಸಂರಕ್ಷಣೆಯಲ್ಲಿ, ವಂಚನೆಗಳ ತಡೆಗಟ್ಟುವಿಕೆ ಹಾಗೂ ಶೋಧನೆಯಲ್ಲಿ ಮತ್ತು ಲೆಕ್ಕಪತ್ರಗಳಲ್ಲಿ ತಪ್ಪುಗಳು, ಕರಾರುತನ ಹಾಗೂ ಪೂರ್ಣಗೊಳಿಸುವಿಕೆಯಲ್ಲಿ ಸಾಕಷ್ಟು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ತರಲಾಗಿದೆ. ಆದಾಗ್ಯೂ ಕಂಪನಿಯ ಗಾತ್ರ ಮತ್ತು ಪರಿಮಾಣಕ್ಕೆ ಅನುಗುಣವಾಗಿ ಆಂತರಿಕ ಆರ್ಥಿಕ ನಿಯಂತ್ರಣ ವ್ಯವಸ್ಥೆಯನ್ನು ಮುಂದೆ ಬಲಪಡಿಸಲಾಗುವುದು

27. ವ್ಯಕ್ತಿಗತ ನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಪ್ರಗತಿಯನ್ನು ಆಡಳಿತ ಮಂಡಳಿಯೇ ಮೌಲ್ಯ ಮಾಪನ ಮಾಡುವ ವ್ಯವಸ್ಥೆ.

ವ್ಯಕ್ತಿಗತ ನಿರ್ದೇಶಕರ, ಕಮಿಟಿಗಳ ಹಾಗೂ ಆಡಳಿತ ಮಂಡಳಿಯ ಪ್ರಗತಿಯನ್ನು ಕಂಪನಿಯು ಮೌಲ್ಯ ಮಾಪನ ಮಾಡಬೇಕಾಗಿದ್ದು, ಅದನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅನುಷ್ಠಾನಗೊಳಿಸಲಾಗುವುದು.

28. ನಿಗಮವು ಈ ವರದಿ ದಿನಾಂಕದವರೆಗೆ ಬೇರೆ ಬೇರೆ ಹಕ್ಕಿನ ಈಕ್ವಿಟಿ ಷೇರುಗಳನ್ನು ನೀಡಿರುವ ವಿವರಗಳು:

ಕಂಪನಿ ಕಾಯ್ದೆ 2013 ನಿಬಂಧನೆ 43, (ಷೇರು ಬಂಡವಾಳ ಮತ್ತು ಡಿಬೆಂಚರು)ರ ನಿಬಂಧನೆ 4ರ ಉಪ ನಿಬಂಧನೆ (4)ರ ಪ್ರಕಾರ ನಿಗಮವು ಈ ವರದಿ ದಿನಾಂಕದವರೆಗೆ ಯಾವುದೇ ಬೇರೆ ಬೇರೆ ಹಕ್ಕಿನ ಈಕ್ವಿಟಿ ಷೇರುಗಳನ್ನು ನೀಡಿರುವುದಿಲ್ಲ.

29. ಈ ವರದಿ ದಿನಾಂಕದವರೆಗೆ ಸ್ವೆಟ್ ಈಕ್ವಿಟಿ ಷೇರು ನೀಡಿರುವ ವಿವರಗಳು:

ಕಂಪನಿಗಳ (ಷೇರು ಬಂಡವಾಳ ಮತ್ತು ಡಿಬೆಂಚರ್) ನಿಯಮಗಳು, 2014 ರ ನಿಯಮ 8 ರ ಉಪ–ನಿಯಮ (13) ದೊಂದಿಗೆ ಓದಿಕೊಂಡಂತೆ ಕಂಪನಿಯ ಕಾಯ್ದೆ 2013 ನಿಬಂಧನೆ 54 ಉಪ ನಿಬಂಧನೆ (13) ನಿಯಮ 8ರ ಪ್ರಕಾರ ಈ ವರದಿ ದಿನಾಂಕದವರೆಗೆ ಯಾವುದೇ ಸ್ವೆಟ್ ಈಕ್ವಿಟಿ ಷೇರು ನೀಡಿರುವುದಿಲ್ಲ.

30. ಇಎಸ್‌ಓಪಿ ಯೋಜನೆ ವಿವರ:

ಕಂಪನಿ ಕಾಯ್ದೆ 2013 ನಿಬಂಧನೆ 62 (1) (ಬಿ) ಉಪ ನಿಬಂಧನೆ (9) ನಿಯಮ 12ರ ಕಂಪನಿಗಳ ರೂಲ್ 2014 (ಷೇರು ಬಂಡವಾಳ ಮತ್ತು ಡಿಬೆಂಚರ್) ಪ್ರಕಾರ ಯಾವುದೇ ಷೇರುಗಳನ್ನು ನಿಗಮದ ನೌಕರರಿಗೆ ಇಎಸ್‌ಓಪಿ ಯೋಜನೆಯಡಿ ನೀಡಿಲ್ಲವೆಂದು ಆಡಳಿತ ಮಂಡಳಿಯು ವರದಿಯಲ್ಲಿ ತಿಳಿಸುತ್ತದೆ.

31. ಕಂಪನಿ (ಆಡಳಿತ ನಿರ್ವಹಣೆ, ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ತಿದ್ದುಪಡಿ ನಿಯಮ, 2016 ಅನ್ನು ಓದಿಕೊಂಡಂತೆ ಕಂಪನಿ (ಆಡಳಿತ ನಿರ್ವಹಣೆ, ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮ 2014 ಮತ್ತು ನಿಯಮ 5 (2)ರ ಕೆಳಗೆ ನೌಕರರ ವಿವರ:

ಕಂಪನಿ (ಆಡಳಿತ ನಿರ್ವಹಣೆ, ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ತಿದ್ದುಪಡಿ ನಿಯಮ 2016 ಅನ್ನು ಓದಿಕೊಂಡಂತೆ ಕಂಪನಿ (ಆಡಳಿತ ನಿರ್ವಹಣೆ, ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮ 2014 ಮತ್ತು ನಿಯಮ 5 (2)ರ ಕೆಳಗೆ ನೌಕರರ ವಿವರಗಳು ಯಾವುದೂ ಇರುವುದಿಲ್ಲ.

32. ನೌಕರರ ಮತ್ತು ಆಡಳಿತ ಮಂಡಳಿಯ ಬಾಂಧವ್ಯ:

ನೌಕರರ ಮತ್ತು ಆಡಳಿತ ಮಂಡಳಿಯ ಬಾಂಧವ್ಯ ಸದರಿ ವರ್ಷದಲ್ಲಿ ಸೌಹಾರ್ದಯುತವಾಗಿತ್ತು. 31.03.2022ರ ಅಂತ್ಯಕ್ಕೆ 612 ನೌಕರರು ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಲಿಪಿಕ ಸಿಬ್ಬಂದಿ ಹಾಗೂ ಅಧಿಕಾರಿಗಳ ವಿವರ ಕೆಳಗಿನಂತಿದೆ.

ಕ್ರ.ಸಂ.	ವಿವರ	ಪ್ರಸಕ್ತ ವರ್ಷ	ಹಿಂದಿನ ವರ್ಷ
1	ಅಧಿಕಾರಿಗಳು	137	133
2	ಇತರ ಸಿಬ್ಬಂದಿ	475	538

33. ಲೆಕ್ಕಪರಿಶೋಧಕರು:

2021–22ನೇ ಸಾಲಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಲು ಮಹಾಲೇಖಪಾಲರು, ಭಾರತ ಸರ್ಕಾರ ರವರು ಕಂಪನಿ ಕಾಯ್ದೆ 2013 ಸೆಕ್ಷನ್ 139 ಪರಿಚ್ಛೇದ (5)ರಡಿ ಮೆ॥ ಕೆ.ಪಿ. ರಾವ್ & ಕಂ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ರವರನ್ನು ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಿಸಲಾಗಿದೆ.

34. ಕಂಪನಿಯಿಂದ ಅನ್ವಯವಾಗುವ ಕಾರ್ಯದರ್ಶಿ ಮಾನದಂಡಗಳ ಅನುಸರಣೆ:

ಕಂಪನಿ ಕಾಯ್ದೆ 2013 ಸೆಕ್ಷನ್ 118 ಪರಿಚ್ಛೇದ (10)ರಡಿ ಭಾರತ ಸರ್ಕಾರದಿಂದ ಅನುಮೋದನೆಗೊಂಡ ಹಾಗೂ ಭಾರತೀಯ ಕಂಪನಿ ಕಾರ್ಯದರ್ಶಿಗಳ ಇನ್ಸ್‌ಟಿಟ್ಯೂಟ್‌ರವರಿಂದ ನೀಡಲ್ಪಟ್ಟ ಕಾರ್ಯದರ್ಶಿಗಳ ಮಾನದಂಡಗಳ ಅನ್ವಯವಾಗುವ ವಿಧಿಗಳೊಂದಿಗೆ ಕಂಪನಿಯು ಅನುಸರಣೆಯಾಗಿರುತ್ತದೆಂದು ತಿಳಿಸಿದೆ.

35 ವರ್ಷದಲ್ಲಿ ಸಲ್ಲಿಸಲಾದ ಅರ್ಜಿಯ ವಿವರಗಳು ಅಥವಾ ದಿವಾಳಿತನ ಮತ್ತು ದಿವಾಳಿತನ ಕೋಡ್, 2016 (31 of 2016) ಅಡಿಯಲ್ಲಿ ಬಾಕಿ ಉಳಿದಿರುವ ಯಾವುದೇ ಪ್ರಕ್ರಿಯೆಯ ವಿವರಗಳು ಮತ್ತು ಹಣಕಾಸಿನ ವರ್ಷದ ಕೊನೆಯಲ್ಲಿ ಅವರ ಸ್ಥಿತಿಯೊಂದಿಗೆ.

ನಿಮ್ಮ ನಿರ್ದೇಶಕರ ಮಂಡಳಿಯು ಕಂಪನಿಯು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಅಥವಾ ಯಾವುದೇ ಪ್ರಕ್ರಿಯೆಯು ದಿವಾಳಿತನ ಮತ್ತು ದಿವಾಳಿತನ ಕೋಡ್, 2016 (2016ರ 31) ಅಡಿಯಲ್ಲಿ ವರದಿಯ ಅಡಿಯಲ್ಲಿ ವರ್ಷದಲ್ಲಿ ಬಾಕಿ ಉಳಿದಿಲ್ಲ ಎಂದು ವರದಿ ಮಾಡಿದೆ.

36. ಒಂದು ಬಾರಿಯ ಇತ್ಯರ್ಥದ ಸಮಯದಲ್ಲಿ ಮಾಡಿದ ಮೌಲ್ಯಮಾಪನದ ಮೊತ್ತ ಮತ್ತು ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಳ್ಳುವಾಗ ಮಾಡಿದ ಮೌಲ್ಯಮಾಪನದ ನಡುವಿನ ವ್ಯತ್ಯಾಸದ ವಿವರಗಳು ಮತ್ತು ಅದರ ಕಾರಣಗಳು.

ಕಂಪನಿಯು ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಯಾವುದೇ ರೀತಿಯ ಸಾಲವನ್ನು ಪಡೆದಿಲ್ಲ ಎಂದು ನಿಮ್ಮ ನಿರ್ದೇಶಕರ ಮಂಡಳಿ ವರದಿ ಮಾಡುತ್ತದೆ ಮತ್ತು ಅದ್ದರಿಂದ, ಈ ಬಹಿರಂಗಪಡಿಸುವಿಕೆಯು ಕಂಪನಿಗೆ ಅನ್ವಯಿಸುವುದಿಲ್ಲ.

37. ಕಾಸ್ಟ್ ಆಡಿಟ್ ದಾಖಲೆಗಳ ನಿರ್ವಹಣೆ:

ನಿಮ್ಮ ನಿರ್ದೇಶಕರ ವರದಿಯಂತೆ ಕಂಪನಿ ಕಾಯ್ದೆ 2013 ಸೆಕ್ಷನ್ 148 ಪರಿಚ್ಛೇದ (1)ರ ಒದಗಣೆಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದಿಂದ ಸೂಚಿಸಿದಂತೆ ವೆಚ್ಚ ದಾಖಲೆಗಳ ನಿರ್ವಹಣೆಯು ಕಂಪನಿಗೆ ಅನ್ವಯಿಸುವುದಿಲ್ಲ.

38. ಕೃತಜ್ಞತೆಗಳು:

ನಿರ್ದೇಶಕರುಗಳು ಭಾರತ ಸರ್ಕಾರಕ್ಕೆ, ಕರ್ನಾಟಕ ಸರ್ಕಾರ, ಸರ್ಕಾರದ ಇಲಾಖೆಗಳಿಗೆ, ಮಾನ್ಯ ಶಾಸಕರುಗಳಿಗೆ, ಶಾಸಕಾಂಗ ಸಮಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ಹಣಕಾಸು ಇಲಾಖೆಗೆ, ಜಿಲ್ಲಾ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತಾವು ನೀಡಿದ ಸಹಕಾರ ಮಾರ್ಗದರ್ಶನ ಮತ್ತು ಬೆಂಬಲಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಈ ರೀತಿಯ ಸಹಕಾರ ಮತ್ತು ಬೆಂಬಲ ಇಲ್ಲದಿದ್ದಲ್ಲಿ ಪ್ರಸಕ್ತ ವರ್ಷದಲ್ಲಿನ ಪ್ರಗತಿ ಮಾಡಲಾಗುತ್ತಿರಲಿಲ್ಲವೆಂದು ತಿಳಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ ಗ್ರಾಹಕರು, ಬ್ಯಾಂಕಿನವರು, ಸಲಹೆಗಾರರು, ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು ಮತ್ತು ಅಕೌಂಟೆಂಟ್ ಜೆನರಲ್ ಲೆಕ್ಕಪರಿಶೋಧಕರು ಮತ್ತು ನೌಕರರು ನಿಗಮಕ್ಕೆ ತಮ್ಮ ಅಮೂಲ್ಯವಾದ

ಬೆಂಬಲ ಹಾಗೂ ಸಹಕಾರ ನೀಡಿರುವುದಕ್ಕೆ ಪ್ರಶಂಸಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಸಹ ಇದೇ ರೀತಿ ಬೆಂಬಲ ನಿರೀಕ್ಷಿಸಲಾಗುವುದೆಂದು ನಿರ್ದೇಶಕರು, ಷೇರುದಾರರಾದ ಕರ್ನಾಟಕ ಸರ್ಕಾರಕ್ಕೆ ತಮ್ಮ ಧನ್ಯವಾದಗಳನ್ನು ತಿಳಿಸಿರುತ್ತಾರೆ.

ಆಡಳಿತ ಮಂಡಳಿಯ ಪರವಾಗಿ,

ಸಹಿ/-	ಸಹಿ/-
(ಹಿರೇಮಠ ಎಂ.ಜಿ., ಭಾ.ಆ.ಸೇ.)	**(ರುದ್ರೇಶ್ .ಎಂ)**
ವ್ಯವಸ್ಥಾಪಕ ನಿರ್ದೇಶಕರು	ಅಧ್ಯಕ್ಷರು
ಡಿಐಎನ್ ಸಂಖ್ಯೆ: 07610396	ಡಿಐಎನ್ ಸಂಖ್ಯೆ: 01633249

ಸ್ಥಳ: ಬೆಂಗಳೂರು
ದಿನಾಂಕ: 27.09.2022

ಅನುಬಂಧ–1

ಸಿಎಸ್‌ಆರ್ ಚಟುವಟಿಕೆಗಳ ವಾರ್ಷಿಕ ವರದಿಯ ಸ್ವರೂಪವು 2020ರ ಏಪ್ರಿಲ್ 1ನೇ ದಿನದಂದು ಅಥವಾ ನಂತರ ಪ್ರಾರಂಭವಾಗುವ ಆರ್ಥಿಕ ವರ್ಷದ ಮಂಡಳಿಗಳ ವರದಿಯಲ್ಲಿ ಸೇರಿಸಬೇಕು.

1. ಆರ್ಥಿಕ ವರ್ಷ 2021–22ನೇ ಸಾಲಿನ ಕಂಪನಿಯ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ವಾರ್ಷಿಕ ವರದಿ

ಅ) ಕಂಪನಿಯ ಕಾರ್ಯ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಸೂಕ್ತವಾದ ಸಾಮಾಜಿಕ ಹೊಣೆಗಾರಿಕೆ ಕುರಿತು ತನ್ನದೇ ಆದ ನೀತಿ ಹೊಂದಿರಬೇಕು.

ಆ) ಕಂಪನಿಯ ಕಾರ್ಯ ಚಟುವಟಿಕೆಗಳು ರಾಜ್ಯಾದ್ಯಂತ ನಡೆಯುವುದರಿಂದ ಈ ಯೋಜನೆಯಡಿ ಫಲಾನುಭವಿಗಳು ಸಹ ರಾಜ್ಯಾದ್ಯಂತದಿಂದ ಇರಬೇಕು.

ಇ) ಕಂಪನಿ ತನ್ನ ಸಾಮಾಜಿಕ ಹೊಣೆಗಾರಿಕೆ ಕಾರ್ಯಗಳ ಮುಖಾಂತರ ಸರ್ಕಾರದ ಒಂದು ಅಧೀನ ಸಂಸ್ಥೆಯಾಗಿ ತನ್ನ ಬಗ್ಗೆ ಸಮುದಾಯದ ಸದಾಭಿಪ್ರಾಯಗಳಿಸುವಂತಿರಬೇಕು.

ಈ) ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ ನೀಡಲಾದ ನಿಧಿ/ಅನುದಾನದ ಸದ್ಬಳಕೆಯಾಗಲು ಸಂಸ್ಥೆ ಮತ್ತು ಫಲಾನುಭವಿ ಸಂಸ್ಥೆಯ ಮಧ್ಯ ಸೂಕ್ತ ಒಡಂಬಡಿಕೆ ಮಾಡಿಕೊಳ್ಳಬೇಕು.

ಉ) ಫಲಾನುಭವಿಗಳಿಂದ ಹಣಬಳಕೆಯಾಗಿರುವ ಕುರಿತು ಲೆಕ್ಕಪರಿಶೋಧಕರವರಿಂದ ನೀಡಲ್ಪಟ್ಟ ಪ್ರಮಾಣ ಪತ್ರ ಪಡೆದುಕೊಳ್ಳಬೇಕು.

ಊ) ಸಿಎಸ್‌ಆರ್ ನೀತಿಗೆ ಹಸಿವು ನಿವಾರಣೆಯ ಅಂಶವನ್ನು ಸೇರ್ಪಡೆಗೊಳಿಸಬೇಕು ಮತ್ತು ಇದನ್ನು ಕಂಪನಿ ಕಾಯ್ದೆ 2013 ಷೆಡ್ಯೂಲ್ 7ಕ್ಕೆ ಮಾರ್ಪಾಟು ಉಂಟಾದಲ್ಲಿ ಅದರಂತೆ ಮಾರ್ಪಾಡುಗೊಳಿಸಬೇಕು.

2. ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ಸಮಿತಿ

ದಿನಾಂಕ: 01.04.2021 ರಿಂದ 17.02.2022 ರವರೆಗೆ ಸಿಎಸ್‌ಆರ್ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ.

ಕ್ರ ಸಂ.	ನಿರ್ದೇಶಕರ ಹೆಸರು	ಪದನಾಮ	ವರ್ಷದಲ್ಲಿ ನಡೆದ ಸಿಎಸ್‌ಆರ್ ಸಭೆ ಸಂಖ್ಯೆ	ವರ್ಷದಲ್ಲಿ ನಡೆದ ಸಿಎಸ್‌ಆರ್ ಸಭೆಯಲ್ಲಿ ಹಾಜರಾದ ಸಂಖ್ಯೆ
1	**ಶ್ರೀ ಗಂಗಾಧರಸ್ವಾಮಿ. ಜಿ.ಎಂ.** ಭಾಆಸೆ ವ್ಯವಸ್ಥಾಪಕ ನಿರ್ದೇಶಕರು	ಅಧ್ಯಕ್ಷರು	02	02
2	**ಶ್ರೀ ವಿಜಯಕುಮಾರ ಚವಡಣ್ಣನವರ್** ಮುಖ್ಯ ಅಭಿಯಂತರರು (ಪಿಆರ್‌ಇಡಿ)	ಸದಸ್ಯರು	02	02
3	**ಡಾ. ಭುವನಹಳ್ಳಿ ನಾಗರಾಜ್** ನಿರ್ದೇಶಕರು, ಗ್ರಾಮೀಣ ಮೂಲಸೌಕರ್ಯ ಮತ್ತು ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಪದನಿಮಿತ್ತ ಜಂಟಿ ಕಾರ್ಯದರ್ಶಿ	ಸದಸ್ಯರು	01	01
4	**ಶ್ರೀ ಶ್ರೀಕೃಷ್ಣ ಎನ್. ಬುಗಟ್ಯಾಗೋಳ** ವಿಶೇಷ ಅಧಿಕಾರಿ (ಜಿಲ್ಲಾ ಪಂಚಾಯತ್) ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಸದಸ್ಯರು	01	01

5	**ಶ್ರೀ ಶ್ರೀನಿವಾಸ ಹೆಚ್. ಮಾರಂಗಪ್ಪನವರ್** ನಿರ್ದೇಶಕರು (ಗ್ರಾಮೀಣಾಭಿವೃದ್ಧಿ) ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ, ಆರ್‌ಡಿ&ಪಿಆರ್ ಇಲಾಖೆ,	ಸದಸ್ಯರು	01	01
6	**ಶ್ರೀ ಮಹದೇವ್** ಮುಖ್ಯ ಹಣಕಾಸು ಅಧಿಕಾರಿ ಕೆಆರ್‌ಐಡಿಎಲ್	ಸದಸ್ಯ ಕಾರ್ಯದರ್ಶಿಗಳು	02	02

ದಿನಾಂಕ: 18.02.2022 ರಿಂದ ಅನ್ವಯವಾಗುವಂತೆ ಸಿಎಸ್‌ಆರ್ ಸಮಿತಿಯು ಪುನರ್‌ರಚಿಸಲಾಗಿದ್ದು, ಈ ಕೆಳಗಿನಂತೆ ಸದಸ್ಯರುಗಳಿರುತ್ತಾರೆ:

ಕ್ರ. ಸಂ.	ನಿರ್ದೇಶಕರ ಹೆಸರು	ಪದನಾಮ	ವರ್ಷದಲ್ಲಿ ನಡೆದ ಸಿಎಸ್‌ಆರ್ ಸಭೆ ಸಂಖ್ಯೆ	ವರ್ಷದಲ್ಲಿ ನಡೆದ ಸಿಎಸ್‌ಆರ್ ಸಭೆಯಲ್ಲಿ ಹಾಜರಾದ ಸಂಖ್ಯೆ
1	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್‌ಡಿ&ಪಿಆರ್ ಇಲಾಖೆ ಮತ್ತು ನಿರ್ದೇಶಕರು, ಕೆಆರ್‌ಐಡಿಎಲ್	ಸಮಿತಿಯ ಅಧ್ಯಕ್ಷರು ಮತ್ತು ನಿರ್ದೇಶಕರು ಕೆಆರ್‌ಐಡಿಎಲ್	01	01
2	ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್	ಸದಸ್ಯರು	01	01
3	ವಿಶೇಷ ಅಧಿಕಾರಿ & ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಆರ್ಥಿಕ ಇಲಾಖೆ ಮತ್ತು ನಿರ್ದೇಶಕರು, ಕೆಆರ್‌ಐಡಿಎಲ್	ಸದಸ್ಯರು	01	01
4	ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್	ಸದಸ್ಯ ಕಾರ್ಯದರ್ಶಿ	01	01

3. ಸಿಎಸ್‌ಆರ್ ಸಮಿತಿ ಸಂರಚನೆಯ, ಸಿಎಸ್‌ಆರ್ ನೀತಿ ಮತ್ತು ಸಿಎಸ್‌ಆರ್ ಯೋಜನೆಗಳ ಕುರಿತು ಮಂಡಳಿ ಅನುಮೋದಿಸಿರುವಂತೆ ಮತ್ತು ಬಹಿರಂಗಪಡಿಸಿರುವಂತೆ ವಿವರಗಳನ್ನೊಳಗೊಂಡ ವೆಬ್‌ಲಿಂಕ್ ಅನ್ನು ಕಂಪನಿಯ ವೆಬ್‌ಸೈಟ್ www.kridl.org ರಲ್ಲಿ ಒದಗಿಸಿದೆ.

4. ಕಂಪನಿಗಳ (ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ನೀತಿ) ನಿಯಮಗಳ 2014ರ ನಿಯಮ 8ರ ಉಪನಿಯಮ (3)ರನ್ವಯ ಸಂಸ್ಥೆ ಕೈಗೊಂಡ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ಪರಿಣಾಮ ವಿವರಿಸದ ವಿವರಗಳನ್ನು ಒದಗಿಸಿದೆ. **ಅನ್ವಯಿಸುವುದಿಲ್ಲ.**

5.ಎ. ಸೆಕ್ಷನ್ 135(5)ರನ್ವಯ ಕಂಪನಿಯ ಸರಾಸರಿ ನಿವ್ವಳ ಲಾಭ :

(ಕೋಟಿ ರೂಪಾಯಿಗಳಲ್ಲಿ)

ವರ್ಷ	ನಿವ್ವಳ ಲಾಭ (ಕೋಟಿ ರೂಪಾಯಿಗಳಲ್ಲಿ)	3 ವರ್ಷದ ಸರಾಸರಿ (ಕೋಟಿ ರೂಪಾಯಿಗಳಲ್ಲಿ)	ಸಿಎಸ್‌ಆರ್‌ಗಾಗಿ ಲಭ್ಯವಿರುವ ಹಣ ಶೇಖರಣೆ (ಕೋಟಿ ರೂಪಾಯಿಗಳಲ್ಲಿ)
2018-19	429.22	-	-
2019-20	487.20	-	-
2020-21	393.31	-	-
TOTAL	**1309.73**	**436.58**	**8.73**

(ಬಿ) ಸೆಕ್ಷನ್ 135 ರ ಉಪವಿಭಾಗ (5) ರ ಪ್ರಕಾರ ಕಂಪನಿಯ ಸರಾಸರಿ ನಿವ್ವಳ ಲಾಭದ ಶೇ. 2ರಷ್ಟು : **ರೂ. 873.15 ಲಕ್ಷಗಳು.**

(ಸಿ) ಹಿಂದಿನ ಹಣಕಾಸು ವರ್ಷಗಳ ಸಿಎಸ್‌ರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಉಂಟಾಗುವ ಹೆಚ್ಚುವರಿ : ಇಲ್ಲ

(ಡಿ) ಹಣಕಾಸು ವರ್ಷಕ್ಕೆ, ಯಾವುದಾದರೂ ಇದ್ದರೆ, ಹೊಂದಿಸಲು ಅಗತ್ಯವಾದ ಮೊತ್ತ : ಇಲ್ಲ

(ಇ) ಹಣಕಾಸು ವರ್ಷದ ಒಟ್ಟು ಸಿಎಸ್‌ರ್ ಬಾಧ್ಯತೆ [(ಬಿ) + (ಸಿ)–(ಡಿ)] : ರೂ. 873.15 ಲಕ್ಷ

6. (ಎ) ಸಿಎಸ್‌ಆರ್ ಯೋಜನೆಗಳಿಗೆ ಖರ್ಚು ಮಾಡಿದ ಮೊತ್ತ (ನಡೆಯುತ್ತಿರುವ ಯೋಜನೆ ಮತ್ತು ನಡೆಯುತ್ತಿರುವ ಯೋಜನೆಯನ್ನು ಹೊರತುಪಡಿಸಿ) : ರೂ. 914.54 ಲಕ್ಷ

(ಬಿ) ಆಡಳಿತಾತ್ಮಕ ಓವರ್‌ಹೆಡ್‌ಗಳಲ್ಲಿ ಖರ್ಚು ಮಾಡಿದ ಮೊತ್ತ : ಇಲ್ಲ

(ಸಿ) ಅನ್ವಯವಾಗಿದ್ದರೆ, ಪರಿಣಾಮದ ಮೌಲ್ಯಮಾಪನಕ್ಕಾಗಿ ಖರ್ಚು ಮಾಡಿದ ಮೊತ್ತ. : ಇಲ್ಲ

(ಡಿ) ಹಣಕಾಸು ವರ್ಷಕ್ಕೆ ಖರ್ಚು ಮಾಡಿದ ಒಟ್ಟು ಮೊತ್ತ [(ಎ) + (ಬಿ) + (ಸಿ)] : ರೂ. 914.54 ಲಕ್ಷ

(ಇ) ಆರ್ಥಿಕ ವರ್ಷದಲ್ಲಿ ವೆಚ್ಚವಾದ/ವೆಚ್ಚವಾಗದಿರುವ ಸಿಎಸ್‌ಆರ್ ಹಣ:

(ರೂ.ಗಳಲ್ಲಿ)

ಆರ್ಥಿಕ ವರ್ಷದಲ್ಲಿ ವೆಚ್ಚ ಮಾಡಲಾದ ಒಟ್ಟು ಹಣ (ರೂ. ಲಕ್ಷಗಳಲ್ಲಿ)	ವೆಚ್ಚವಾಗದೆ ಇರುವ ಒಟ್ಟು ಹಣ (ರೂ.ಗಳಲ್ಲಿ)				
	ಸೆಕ್ಷನ್ 135(6)ರಂತೆ ವೆಚ್ಚವಾಗದ ಸಿಎಸ್‌ಆರ್‌ಗೆ ವರ್ಗಾವಣೆಯಾದ ಮೊತ್ತ		ಸೆಕ್ಷನ್ 135(5)ಕ್ಕೆ ಉಪನಿಯಮ 2ರಂತೆ ಷೆಡ್ಯೂಲ್ 7ರಡಿ ಯಾವುದಾದರೂ ನಿಧಿಗೆ ವರ್ಗಾಯಿಸಲಾದ ಮೊತ್ತ		
	ಮೊತ್ತ	ವರ್ಗಾವಣೆಯಾದ ದಿನಾಂಕ	ನಿಧಿಯ ಹೆಸರು	ಮೊತ್ತ	ವರ್ಗಾವಣೆಯಾದ ದಿನಾಂಕ
914.54	NIL	NA	NA	NIL	NA

(ಎಫ್) ಹೆಚ್ಚುವರಿ ಮೊತ್ತ, ಯಾವುದಾದರೂ ಇದ್ದಲ್ಲಿ : ಇಲ್ಲ

ಕ್ರ.ಸಂ.	ವಿವರ	ಮೊತ್ತ (ರೂ. ಲಕ್ಷಗಳಲ್ಲಿ)
1)	ಸೆಕ್ಷನ್ 135 (5) ರ ಪ್ರಕಾರ ಕಂಪನಿಯ ಸರಾಸರಿ ನಿವ್ವಳ ಲಾಭದ ಎರಡು ಪ್ರತಿಶತ	873.15
2)	ಹಣಕಾಸು ವರ್ಷಕ್ಕೆ ಖರ್ಚು ಮಾಡಿದ ಒಟ್ಟು ಮೊತ್ತ	914.54
3)	ಹಣಕಾಸು ವರ್ಷಕ್ಕೆ ಖರ್ಚು ಮಾಡಿದ ಹೆಚ್ಚುವರಿ ಮೊತ್ತ [(2)–(1)]	41.39

ಅನುಬಂಧ – II

ಕಾಯಿದೆ–9ರ ಎಸ್‌ಎಸ್–1 ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಭಾಗವಹಿಸಿರುವ ಬಗ್ಗೆ

1	2021–22ರಲ್ಲಿ ನಡೆದ ಸಭೆಯ ಸಂಖ್ಯೆಗಳು	7
2	2021–22ರಲ್ಲಿ ನಡೆದ ಸಭೆಯ ದಿನಾಂಕಗಳು	20.04.2021, 31.07.2021, 25.10.2021, 03.12.2021, 13.12.2021, 20.01.2022 ಮತ್ತು 30.03.2022

3. ನಿರ್ದೇಶಕರು ಭಾಗವಹಿಸಿದ ಸಭೆಯ ಸಂಖ್ಯೆ

ಕ್ರ.ಸಂ.	ನಿರ್ದೇಶಕರು ಹೆಸರು	ಭಾಗವಹಿಸಿದ ಸಭೆಯ ಸಂಖ್ಯೆ
1	ಶ್ರೀ. ಎಂ.ರುದ್ರೇಶ್	7
2	ಡಾ. ರಜನೀಶ್ ಗೋಯೆಲ್, ಐ.ಎ.ಎಸ್.,	1
3	ಶ್ರೀ. ಗಂಗಾಧರಸ್ವಾಮಿ ಜಿ.ಎಂ., ಐ.ಎ.ಎಸ್.,	7
4	ಶ್ರೀ ಬಿ.ಹೆಚ್.ಅನಿಲ್ ಕುಮಾರ್, ಐ.ಎ.ಎಸ್.,	4
5	ಶ್ರೀ ರಾಕೇಶ್ ಸಿಂಗ್, ಐ.ಎ.ಎಸ್.,	5
6	ಶ್ರೀ ಎಲ್.ಕೆ. ಅತೀಕ್, ಐ.ಎ.ಎಸ್.,	7
7	ಡಾ. ರವಿಕುಮಾರ್ ಸುರಪುರ, ಐ.ಎ.ಎಸ್.,	–
8	ಶ್ರೀ ದಯಾನಂದ ಕೆ.ಎ., ಐ.ಎ.ಎಸ್.,	1
9	ಡಾ. ಶಮ್ಲಾ ಇಕ್ಬಾಲ್, ಐ.ಎ.ಎಸ್.,	–
10	ಶ್ರೀ. ವಿಜಯಕುಮಾರ್ ಚವಡಣ್ಣನವರ್	7
11	ಡಾ.ಭೂವನಹಳ್ಳಿ ನಾಗರಾಜ್	1
12	ಶ್ರೀ ಶ್ರೀನಿವಾಸ್ ಹೆಚ್ ಮಾರಂಗಪ್ಪನವರ್	6
13	ಶ್ರೀ ಪುರುಷೋತ್ತಮ ಸಿಂಗ್, ಬಿ.ಹೆಚ್.	–
14	ಶ್ರೀ ಶ್ರೀಕೃಷ್ಣ ಎನ್ ಬುಗಟ್ಯಾಗೋಳ	4
15	ಶ್ರೀ ಬಿ.ಮಲ್ಲಿಕಾರ್ಜುನ	7
16	ಶ್ರೀ ಸುರೇಶಗೌಡ ಇ ಪಾಟೀಲ್	7

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

31ನೇ ಮಾರ್ಚ್ 2022 ಅಂತ್ಯಗೊಂಡ ವರ್ಷದ ಆರ್ಥಿಕ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಕಂಪನಿಗಳ

ಅಧಿನಿಯಮ–2013, 143(6)(ಬಿ)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು
ಮಹಾಲೆಕ್ಕ ಪರಿಶೋಧಕರು ಮಾಡಿರುವ ಟೀಕೆ ಟಿಪ್ಪಣಿಗಳು

ಕಂಪನಿಗಳ ಅಧಿನಿಯಮ 2013ರ ಮೇರೆಗೆ ನಿಯಮಿಸಿರುವ ಏಕೀಕೃತ ಹಣಕಾಸು ವರದಿಯ ಚೌಕಟ್ಟಿಗೆ ಅನುಗುಣವಾಗಿ 2022ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇವರ ಹಣಕಾಸಿನ ವಿವರ ಪಟ್ಟಿಗಳನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ 139(5)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಾಹಾಲೇಖಪಾಲಕರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರು. ಅವರ ವೃತ್ತಿ ಸಂಸ್ಥೆಯಾದ ಭಾರತದ ಅನುಸಾರವಾಗಿ ಸ್ವತಂತ್ರ ಚಾರ್ಟರ್ಡ್ ಅಕೌಂಟೆಂಟರು ಗೊತ್ತುಪಡಿಸಿರುವ ಲೆಕ್ಕ ಪರಿಶೋಧನೆ ಮತ್ತು ಖಾತ್ರಿ ಮಾನಕಗಳಿಗೆ ಲೆಕ್ಕಪರಿಶೋಧನೆಯನ್ನು ಆಧರಿಸಿ ಕಂಪನಿಗಳ ಅಧಿನಿಯಮ, 143ನೇ ಪ್ರಕರಣದ ಮೇರೆಗೆ ಈ ಹಣಕಾಸಿನ ವಿವರ ಪಟ್ಟಿಗಳನ್ನು ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಲು ಜವಾಬ್ದಾರರಾಗಿದ್ದಾರೆ. ಇದನ್ನು ಅವರು ನಿರ್ವಹಿಸಿದ್ದಾರೆಂದು ತಿಳಿಸಲಾಗಿದೆ. ಕಾಯಿದೆಯ ಸೆಕ್ಷನ್ 143(10)ರ ಅಡಿಯಲ್ಲಿ ಸೂಚಿಸಲಾದ ಲೆಕ್ಕಪರಿಶೋಧನೆಯ ಮಾನದಂಡಗಳಿಗೆ ಅನುಗುಣವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇಲೆ 8ನೇ ಸೆಪ್ಟೆಂಬರ್ 2022 ಮತ್ತು 26ನೇ ಸೆಪ್ಟೆಂಬರ್ 2022 ದಿನಾಂಕದ ಅವರ ಹಿಂದಿನ ಆಡಿಟ್ ವರದಿಯನ್ನು ರದ್ದುಗೊಳಿಸಿದ್ದು, 29ನೇ ಸೆಪ್ಟೆಂಬರ್ 2022 ದಿನಾಂಕದಂದು ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯ ಮೂಲಕ ಇದನ್ನು ಪೂರ್ಣಗೊಳಿಸಲಾಗಿದೆ.

ನಾನು ಭಾರತದ ಮಹಾಲೇಖಪಾಲರು ಮತ್ತು ಲೆಕ್ಕಪರಿಶೋಧಕರ ಪರವಾಗಿ 2013ರ ಕಂಪನಿಗಳ ಕಾಯಿದೆ 143(6)(ಎ)ರ ಅನ್ವಯ 31ನೇ ಮಾರ್ಚ್ 2021 ಕೊನೆಗೊಂಡ ವರ್ಷದ ಬಗ್ಗೆ ಕರ್ನಾಟಕ ರೂರಲ್ ಇನ್ ಫ್ರಾ ಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ ಹಣಕಾಸಿನ ವಿವರಪಟ್ಟಿಗಳನ್ನು ಇದರ ಆರ್ಥಿಕ ವಿವರದ ತಃಖ್ತೆ ಬಗ್ಗೆ ಪೂರಕ ಲೆಕ್ಕ ಪರಿಶೋಧನೆ ನಡೆಸಿದ್ದೇನೆ, ಸದರಿ ಪೂರಕ ಲೆಕ್ಕ ಪರಿಶೋಧನೆಯನ್ನು ಶಾಸನಬದ್ಧ ಲೆಕ್ಕ ಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಪರಾಮರ್ಶೆ ಮಾಡದೆ ಸ್ವತಂತ್ರವಾಗಿ ಮಾಡಲಾಗಿದೆ. ಈ ನನ್ನ ಕಾರ್ಯವು ಶಾಸನಬದ್ಧ ಲೆಕ್ಕಪರಿಶೋಧಕರ ವಿಚಾರಣೆಗಳಿಗೆ ಮತ್ತು ಕಂಪನಿಯ ಸಿಬ್ಬಂದಿಯ ವಿಚಾರಣೆಗಳಿಗೆ ಹಾಗೂ ಕೆಲವು ಲೆಕ್ಕಪತ್ರದ ದಾಖಲೆಗಳ ಆಯ್ದ ಪರಿಶೀಲನೆಗೆ ಪ್ರಮುಖವಾಗಿ ಸೀಮಿತವಾಗಿದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ಮಾಡಿದ ಪರಿಷ್ಕರಣೆಗಳ ದೃಷ್ಟಿಯಿಂದ, ನನ್ನ ಕೆಲವು ಲೆಕ್ಕ ಪರಿಶೋಧನೆಗಳನ್ನು ಜಾರಿಗೆ ತರಲು ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ಎತ್ತಿದ ಅವಲೋಕನಗಳು, ನಾನು ನೀಡಲು ಯಾವುದೇ ಹೆಚ್ಚಿನ ಕಾಮೆಂಟ್‌ಗಳನ್ನು ಹೊಂದಿಲ್ಲ ಅಥವಾ ಕಾಯಿದೆಯ ಸೆಕ್ಷನ್ 143(6) (ಬಿ) ಅಡಿಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ಪೂರಕವಾಗಿದೆ.

ಭಾರತದ ಕಂಟೋಲರ್ ಮತ್ತು ಅಡಿಟರ್ ಜನರಲ್ ಪರವಾಗಿ

ಸಹಿ/–
ಶಾಂತಿ ಪ್ರಿಯಾ ಎಸ್
ಪ್ರಿನ್ಸಿಪಾಲ್ ಅಕೌಂಟೆಂಟ್ ಜನರಲ್
(ಆಡಿಟ್–1)
ಕರ್ನಾಟಕ, ಬೆಂಗಳೂರು

ದಿನಾಂಕ : 30ನೇ ಸೆಪ್ಟೆಂಬರ್ 2022

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಯಮಿತದ ಸದಸ್ಯರ ಗಮನಕ್ಕೆ

(ಸಿಐಎನ್: ಯು75112ಕೆಎ1974ಎಸ್‌ಜಿಸಿ002613)

ಅರ್ಹತೆ ಹೊಂದಿದ ಅಭಿಪ್ರಾಯ:

ನಾವು ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ (ಕಂಪನಿ ಎಂದು ಕರೆಯಲ್ಪಡುತ್ತದೆ)ದ 31ನೇ ಮಾರ್ಚ್ 2022ರ ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ಹೇಳಿಕೆ ಮತ್ತು ನಂತರ ಕೊನೆಗೊಂಡ ವರ್ಷದ ನಗದು ಹರಿವಿನ ಹೇಳಿಕೆ ಮತ್ತು ಗಮನಾರ್ಹ ಲೆಕ್ಕಪತ್ರ ನೀತಿಗಳ ಸಾರಾಂಶ ಮತ್ತು ಇತರ ವಿವರಣಾತ್ಮಕ ಮಾಹಿತಿ ಸೇರಿದಂತೆ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳನ್ನು ಒಳಗೊಂಡಿರುತ್ತದೆ.

ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಲಭ್ಯವಿರುವ ಮಾಹಿತಿಯ ಪ್ರಕಾರ ಹಾಗೂ ನಮಗೆ ನೀಡಿದ ವಿವರಣೆಗಳ ಅನುಸಾರ ತಿಳಿಸುವುದೇನೆಂದರೆ, ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಕಂಡಿಕೆಯಲ್ಲಿ ವಿವರಿಸಿರುವ ವಿಚಾರದ ಪರಿಣಾಮಗಳ ಹೊರತಾಗಿ, ಕಂಪನಿಗಳ ಕಾಯ್ದೆ 2013ರಂತೆ ಹಣಕಾಸಿನ ವಿವರಣೆಯು ಅಗತ್ಯವಾದ ರೀತಿಯಲ್ಲಿ ಅಧಿನಿಯಮದಂತೆ ಅವಶ್ಯಕವಾದ ಮಾಹಿತಿಯನ್ನು ನೀಡುವುದು ಮತ್ತು ಈ ಕೆಳಕಂಡ ವಿಚಾರಗಳ ಸಂಬಂಧದಲ್ಲಿ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕಗಾರಿಕೆ ನೀತಿಗಳಿಗೆ ಅನುಸಾರವಾಗಿ ನೈಜ ಮತ್ತು ನ್ಯಾಯೋಚಿತ ಚಿತ್ರಣವನ್ನು ನೀಡುವುದು. 31ನೇ ಮಾರ್ಚ್ 2022ರಂದು ಇದ್ದಂತೆ ಆಯವ್ಯಯ ಪಟ್ಟಿ ಹಾಗೂ ಇದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ನಗದು ಹರಿಯುವಿಕೆ ಮತ್ತು ಸಂಸ್ಥೆಯ ಲಾಭಗಳ ವಿವರಣೆ ವಿಚಾರವಾಗಿ ಪಡೆದಿರುತ್ತದೆ ಹಾಗೂ 8ನೇ ಸೆಪ್ಟೆಂಬರ್ 2022 ಮತ್ತು 26ನೇ ಸೆಪ್ಟೆಂಬರ್ 2022ರಂದು ವರದಿಯನ್ನು ಸಲ್ಲಿಸಲಾಗಿರುತ್ತದೆ. **ತರುವಾಯ ಭಾರತದ ಕಂಟ್ರೋಲರ್ ಮತ್ತು ಆಡಿಟ್ ಜನರಲ್ (ಸಿಎಜಿ) ಅವರ ಅವಲೋಕನಗಳ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧನಾ ವರದಿಯು ಪರಿಷ್ಕರಣೆಗೆ ಒಳಗಾಗಿದೆ. ಇದು 8ನೇ ಸೆಪ್ಟೆಂಬರ್ 2022 ಮತ್ತು 26ನೇ ಸೆಪ್ಟೆಂಬರ್ 2022ರ ನಮ್ಮ ಹಿಂದಿನ ವರದಿಯನ್ನು ಸೂಪರ್‌ಸೀಡ್ ಮಾಡಲಾಗಿರುತ್ತದೆ.**

ಅರ್ಹ ಅಭಿಪ್ರಾಯಕ್ಕೆ ಆಧಾರ :

ನಾವು ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 143(10)ರಡಿ ಗೊತ್ತುಪಡಿಸಲಾದ ಲೆಕ್ಕಪರಿಶೋಧನಾ ಮಾನದಂಡಗಳನುಸಾರ (ಸ್ಟ್ಯಾಂಡರ್ಡ್ಸ್ ಆಫ್ ಆಡಿಟಿಂಗ್) ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಯನ್ನು ಅದರಂತೆ ನಡೆಸಿದ್ದೇವೆ. ಸದರಿ ಮಾನದಂಡಗಳಡಿ ನಮ್ಮ ವರದಿಯ "ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು" ಭಾಗದಲ್ಲಿ ನಮ್ಮ ಜವಾಬ್ದಾರಿಗಳನ್ನು ಮತ್ತಷ್ಟು ವಿವರಿಸಲಾಗಿದೆ. ನಾವು ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ಕಂಪನಿಗಳ ಕಾಯ್ದೆ–2013ರ ಉಪನಿಯಮಗಳಡಿ ಮತ್ತು ಅದರಡಿ ಬರುವ ನಿಯಮಗಳಂತೆ ಸ್ವತಂತ್ರ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸೂಕ್ತವಾಗಿರುವ ನೈತಿಕ ಅಗತ್ಯತೆಗಳ ಸಮೇತ ಹೊರಡಿಸಿರುವ "ನೈತಿಕ ಸಂಹಿತೆ" ಅನುಸಾರ ಕಂಪನಿಯ ಸ್ವತಂತ್ರ ಲೆಕ್ಕಪರಿಶೋಧಕರಾಗಿದ್ದೇವೆ. ಅಲ್ಲದೆ ನಾವು ಈ ಅಗತ್ಯತೆಗಳು ಮತ್ತು ನೈತಿಕ ಸಂಹಿತೆಯನುಸಾರ ನಮ್ಮ ಇತರ ನೈತಿಕ ಜವಾಬ್ದಾರಿಗಳನ್ನು ಪೂರೈಸಿದ್ದೇವೆ. ಸ್ವತಂತ್ರ ಹಣಕಾಸು ಹೇಳಿಕೆಗಳ ಮೇಲೆ ನಮ್ಮ ಅರ್ಹ ಅಭಿಪ್ರಾಯ ಆಧಾರ ಒದಗಿಸಲು ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಸಾಕ್ಷಿಯು ಸಾಕಷ್ಟು ಮತ್ತು ಸೂಕ್ತವಾಗಿದೆ ಎಂದು ನಾವು ನಂಬುತ್ತೇವೆ.

1) ಬ್ಯಾಲೆನ್ಸ್ ಶೀಟ್ ಆಸ್ತಿ ವಿಭಾಗದಲ್ಲಿ ಪ್ರಗತಿಯಾದ ಕೆಲಸವನ್ನು ರೂ.16,40,357.80 ಲಕ್ಷ ಎಂದು ತೋರಿಸಲಾಗಿದೆ. ಬ್ಯಾಲೆನ್ಸ್ ಶೀಟ್‌ನ ಇತರೆ ಚಾಲ್ತಿ ಹೊಣೆಗಾರಿಕೆಗಳ ಭಾಗದಲ್ಲಿ ಸಂಬಂಧಿಸಿದ ಏಜೆನ್ಸಿಗಳಿಂದ ಸ್ವೀಕರಿಸಿದ ಮೊತ್ತ ರೂ. 16,73,721.30 ಲಕ್ಷ ಎಂದು ಹೊಣೆಗಾರಿಕೆಯಡಿ ತೋರಿಸಲಾಗಿದೆ. ಮುಂಗಡ ಪಡೆದ ಅನುದಾನ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿ ಮೊತ್ತ ಎರಡು ಸಹ ಭೌತಿಕ ಕಾಮಗಾರಿ ಪೂರ್ಣ ಹಾಗೂ ಅಂತಿಮ ಬಿಲ್ಲುಗಳ ಮೇಲೆ ಹೊಂದಾಣಿಕೆ ಮಾಡಲಾಗಿದೆ.

ಇದರಿಂದಾಗಿ ನಮ್ಮ ಅಭಿಪ್ರಾಯದಲ್ಲಿ ಎರಡು ಮೊತ್ತಗಳು ಅಧಿಕವಾಗಿ ತೋರಿಸಲ್ಪಟ್ಟಿವೆ. ವಿವರಗಳ ಅಲಭ್ಯತೆಯಿಂದಾಗಿ ನಿಖರವಾಗಿ ಹೆಚ್ಚಾಗಿರುವ ಮೊತ್ತ ಎಷ್ಟು ಎಂದು ಹೇಳಲಾಗುತ್ತಿಲ್ಲ.

2) ಈ ಕೆಳಕಾಣಿಸಿದ ಮೊತ್ತಗಳಿಗೆ ಪಾರ್ಟಿಗಳವಾರು ವಿವರಗಳು ಇರುವುದಿಲ್ಲ ಹಾಗೂ ಯಾರಿಂದ ಬರಬೇಕು/ಯಾರಿಗೆ ಕೊಡಬೇಕು ಎನ್ನುವ ವಿವರಗಳು ಇಲ್ಲದಿರುವುದರಿಂದ ಈ ಖಾತೆಯ ಮೊತ್ತದ ನಿಖರತೆಯ ಕುರಿತು ಅಭಿಪ್ರಾಯ ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ.

(ರೂ. ಲಕ್ಷಗಳಲ್ಲಿ)

ಖಾತೆ	ವಿವರಗಳ	ಡೆಬಿಟ್/ಕ್ರೆಡಿಟ್	31-03-2022ರಲ್ಲಿದ್ದಂತೆ
ಟ್ರೇಡ್ ಪಾವತಿ ಆಗಬೇಕಿರುವುದು	ಇತರೆ ಸಾಲಗಾರರು (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	57.62
ಇತರೇ ಹಣಕಾಸು ಆಸ್ತಿಗಳು	ಕೆಆರ್‌ಐಡಿಎಲ್‌ನಿಂದ ಪಾವತಿಯಾದ ಇಎಂಡಿ (ವಿವರಗಳು ಪತ್ತೆಯಾಗಬೇಕಿದೆ)	ದಾಣಿಕೆ	289.20
ಇತರ ಚಾಲ್ತಿಯೇತರ ಆಸ್ತಿಗಳು	ಮುಂಗಡ (ವಿವರಗಳು ಪತ್ತೆಯಾಗಬೇಕಿದೆ)	ದಾಣಿಕೆ	172.55
ಇತರ ಚಾಲ್ತಿಯಲ್ಲದ ಆಸ್ತಿಗಳು	ಚಾಲ್ತಿಯಲ್ಲದ ಮುಂಗಡ (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	38.66
ಇತರ ಹಣಕಾಸು ಋಣಭಾರಗಳು	ಎಸ್‌ಡಿ ನೌಕರರು (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	15.68
ಇತರ ಹಣಕಾಸು ಋಣಭಾರಗಳು	ಸಂಗ್ರಹವಾದ ಇಎಂಡಿ (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	3.69
ಇತರ ಚಾಲ್ತಿಯೇತರ ಋಣಭಾರಗಳು	ರಹಸ್ಯ ಸ್ವೀಕೃತಿಗಳು (ವಿವರಗಳು ಪತ್ತೆಯಾಗಬೇಕಿದೆ)	ಋಣಿಕೆ	5879.31
ಇತರ ಹಣಕಾಸು ಸ್ವತ್ತುಗಳು	ಇತರೆ ಭದ್ರತಾ ಠೇವಣಿಗಳು (ವಿವರಗಳು ಪತ್ತೆಯಾಗಬೇಕಿದೆ)	ದಾಣಿಕೆ	4.53
ಇತರ ಹಣಕಾಸು ಸ್ವತ್ತುಗಳು	ನೇಮಕಗೊಂಡ ಏಜೆನ್ಸಿಯೊಂದಿಗೆ ಭದ್ರತಾ ಠೇವಣಿಗಳು (ವಿವರಗಳು ಪತ್ತೆಯಾಗಬೇಕಿದೆ)	ದಾಣಿಕೆ	16.72

3) ಟಿಪ್ಪಣಿ ಸಂಖ್ಯೆ 29ರಲ್ಲಿ ನಮೂದಿಸಿದ ದಾವೆಗಳ ವಿವರಗಳನ್ನು ಬಿಟ್ಟು ಇನ್ನಿತರ ದಾವೆಗಳಿಂದ ಕಂಪನಿಗೆ ಆಗಬಹುದಾದ ವೆಚ್ಚವನ್ನು ಅಂದಾಜು ಮಾಡಿಲ್ಲ, ಭಾರತೀಯ ಲೆಕ್ಕಪತ್ರ ಗುಣಮಟ್ಟ (Ind. AS) 37 'ಒದಗಣೆ, ಸಂಭವನೀಯ ಹೊಣೆಗಾರಿಕೆ ಮತ್ತು ಸಂಭವನೀಯ ಆಸ್ತಿ' ಅನ್ವಯ ಕಂಪನಿ ಡಿಸ್‌ಕ್ಲೋಸರ್ ನಿಯಮವನ್ನು ಸಂಸ್ಥೆ ಪಾಲಿಸಿಲ್ಲ. ವಿವರ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಇದರ ಮೊತ್ತವನ್ನು ನಾವು ಲೆಕ್ಕಿಸಿಲ್ಲ.

4) ಸ್ವೀಕರಿಸಲಾದ ಮುಂಗಡಗಳು, ಪ್ರಗತಿಯಲ್ಲಿರುವ ಕಾಮಗಾರಿ ಮತ್ತು ಅಂತಿಮ ಬಿಲ್ ಮೌಲ್ಯಗಳ ಮೇಲೆ ಜಿಎಸ್‌ಟಿ ಬಾಧ್ಯತೆಗಳನ್ನು ಜಿಎಸ್‌ಟಿ ರಿಟರ್ನ್ಸ್‌ಗಳೊಂದಿಗೆ ಮರುಹೊಂದಾಣಿಕೆ ಮಾಡಿರುವುದಿಲ್ಲ. ಆ ಕಾರಣ ಕಂಪನಿಯು ಜಿಎಸ್‌ಟಿ ಋಣಬಾಧ್ಯತೆಯ ಕುರಿತು ನಿಖರವಾದ ಮೊತ್ತವನ್ನು ಖಚಿತಪಡಿಸಲಾಗುತ್ತಿಲ್ಲ. ಕಂಪನಿಯು ಈ ಬಾಧ್ಯತೆಯ ಮೊತ್ತ ಖಚಿತಪಡಿಸಲಾಗುತ್ತಿಲ್ಲದಿರುವುದರಿಂದ ನಮಗೆ ಲಾಭ ಮತ್ತು ನಷ್ಟದ ಹೇಳಿಕೆ ಮತ್ತು ಬಾಕಿ ತ:ಖ್ತೆಯ ಮೇಲೆ ಅದರಿಂದ ಪರಿಣಾಮ ಉಂಟಾಗುವುದನ್ನು ಖಚಿತ ಪಡಿಸಲು ಸಾಧ್ಯವಾಗಿರುವುದಿಲ್ಲ.

5) ಕಂಪನಿಯು ಖಾತೆಯ ಪುಸ್ತಕಗಳ ಪ್ರಕಾರ ಮತ್ತು GSTR-2A/3B ಪ್ರಕಾರ GST ಅಡಿಯಲ್ಲಿ ಸ್ವೀಕರಿಸಬಹುದಾದ ಇನ್‌ಪುಟ್ ತೆರಿಗೆ (ITC) ಅನ್ನು ಸಮನ್ವಯಗೊಳಿಸಿಲ್ಲ. ಕಂಪನಿಯು ಕ್ಲೈಮ್ ಮಾಡಬಹುದಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಮೊತ್ತವನ್ನು ಖಚಿತಪಡಿಸದ ಕಾರಣ, ಲಾಭ ಮತ್ತು ನಷ್ಟದ ಹೇಳಿಕೆ ಮತ್ತು ಬ್ಯಾಲೆನ್ಸ್ ಶೀಟ್‌ನ ಮೇಲಿನ ಪರಿಣಾಮವನ್ನು ಕಂಡುಹಿಡಿಯಲು ನಮಗೆ ಸಾಧ್ಯವಾಗುತ್ತಿಲ್ಲ.

6) ಕಂಪನಿಯು ಆದಾಯ ತೆರಿಗೆ ಕಾಯ್ದೆಯ ನಿಬಂಧನೆಗಳನುಸಾರ ಮೂಲದಲ್ಲೇ ತೆರಿಗೆ ಕಡಿತಗೊಳಿಸಿರುವುದಿಲ್ಲ. ಅಂದರೆ ಲೆಕ್ಕಪುಸ್ತಕದಲ್ಲಿ ಆದಾಯ ತೆರಿಗೆ ಕಡಿತಕ್ಕೆ ಅವಕಾಶ ಮಾಡಿರುವಾಗ ಆದಾಯ ತೆರಿಗೆಯನ್ನು ಕಡಿತಗೊಳಿಸಬಹುದಾಗಿತ್ತು ಅಥವಾ ವಾಸ್ತವ ಮೊತ್ತ ಪಾವತಿ ಮಾಡಿದಾಗ, ಇವೆರಡರಲ್ಲಿ ಯಾವುದು ಮೊದಲು ಆಗ ಆದಾಯ ತೆರಿಗೆ ಕಡಿತಗೊಳಿಸಬೇಕು. ಇದರಿಂದ ಹಣಕಾಸು ಹೇಳಿಕೆಯ ಮೇಲೆ ಉಂಟಾಗುವ ಪರಿಣಾಮದ ಬಗ್ಗೆ ಖಚಿತವಾಗಿ ಹೇಳಲಾಗದು.

7) ಲಾಭ ಮತ್ತು ನಷ್ಟ ಹಾಗೂ ಮಜೂರಿನ ಹೇಳಿಕೆಯಲ್ಲಿ ಖರ್ಚು ಹಾಕಲಾದ ಮಜೂರಿಯ ಒಟ್ಟು ಮೊತ್ತ ರೂ. 16,444.89 ಲಕ್ಷಗಳು. ಈ ಎಲ್ಲ ಪಾವತಿಗಳನ್ನು ಆಂತರಿಕವಾಗಿ ಸೃಜಿಸಲಾದ ವೋಚರ್‌ಗಳ ಆಧಾರದಲ್ಲಿ ಮಾಡಲಾಗಿದೆ ಮತ್ತು ಈ ಮೊತ್ತ ಸ್ವೀಕೃತಿಯಾಗಿರುವುದಕ್ಕೆ ಸ್ವೀಕೃತಿದಾರರದಿಂದ ಪಡೆದಿರುವ ದಾಖಲೆಯ ಪುರಾವೆ ಇರುವುದಿಲ್ಲ. ಈ ಪಾವತಿಗಳ ಮೂರ್ತಸ್ವರೂಪದ ಕಾರಣ ಇಂತಹ ಪಾವತಿಗಳು ಹಣಕಾಸು ಹೇಳಿಕೆಗಳಲ್ಲಿ ಭೌತಿಕ ತಪ್ಪು ಹೇಳಿಕೆಗೆ ಕಾರಣವಾಗುವುದೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ.

8) ಕಂಪನಿಗಳ ಕಾಯ್ದೆ 2013 ರ (ತಿದ್ದುಪಡಿ ಮಾಡಿದಂತೆ) ಷೆಡ್ಯೂಲ್–IIIರ ಪ್ರಕಾರ ವ್ಯಾಪಾರದ ಸ್ವೀಕಾರಾರ್ಹತೆಗಳು ಮತ್ತು ವ್ಯಾಪಾರ ಪಾವತಿಗಳ ವಯಸ್ಸನ್ನು ಕಂಪನಿಯು ಬಹಿರಂಗಪಡಿಸಿಲ್ಲ, ಏಕೆಂದರೆ ಅವರು ಒದಗಿಸಲು ಸಾಕಷ್ಟು ಡೇಟಾವನ್ನು ಹೊಂದಿಲ್ಲ.

9) ಕಂಪನಿಯು ವಿಮಾ ಪಾವತಿಗಳನ್ನು ವೆಚ್ಚ ಮತ್ತು ಪೂರ್ವಪಾವತಿ ವೆಚ್ಚಗಳು (ಆಸ್ತಿ) ಎಂದು ವರ್ಗೀಕರಿಸಿಲ್ಲ, ಚಾಲ್ತಿ ಸ್ವತ್ತಿನ ಅಂಡರ್ ಸ್ಟೇಟ್‌ಮೆಂಟ್‌ನಲ್ಲಿ ಮತ್ತು ರೂ. 107.79 ಲಕ್ಷಗಳ ಲಾಭಾಂಶದ ಓವರ್ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಲಾಗಿದೆ. **ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.**

10) ಗ್ರಾಚ್ಯುಯಿಟಿ ವೆಚ್ಚಗಳ ಅಂಡರ್ ಸ್ಟೇಟ್‌ಮೆಂಟ್ ಮತ್ತು ರೂ. 1091.13 ಲಕ್ಷಗಳ ಚಾಲ್ತಿಯಲ್ಲದ ಸ್ವತ್ತುಗಳ ಓವರ್ ಸ್ಟೇಟ್‌ಮೆಂಟ್‌ನಲ್ಲಿ ನೀಡಲಾಗಿದ್ದು, ಆಕ್ಚುರಿಯಲ್ ಮೌಲ್ಯಮಾಪನ ವರದಿಯ ಪ್ರಕಾರ ಗ್ರ್ಯಾಚುಯಿಟಿ ಫಂಡ್ ಬ್ಯಾಲೆನ್ಸ್ ಮತ್ತು ಹೊಣೆಗಾರಿಕೆಗಳ ನಡುವೆ ವ್ಯತ್ಯಾಸವಿದೆ. **ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.**

11) ಕಂಪನಿಯು ಮರಳು, ಜೆಲ್ಲಿ, ಮುರ್ರಂ, ರಬ್ಬಲ್ ಮುಂತಾದ ವಸ್ತುಗಳನ್ನು ಕ್ಲೋಸಿಂಗ್ ಸ್ಟಾಕ್‌ನಲ್ಲಿ ಸೇರಿಸಿಲ್ಲ. ಮತ್ತು ಅವುಗಳನ್ನು ಬಳಸಲಾದ ಸಾಮಗ್ರಿಗಳೆಂದು ಪರಿಗಣಿಸಲಾಗುತ್ತದೆ. ಇದನ್ನು ಅಕೌಂಟಿಂಗ್ ಪಾಲಿಸಿಯಲ್ಲಿ ಉಲ್ಲೇಖಿಸಲಾಗಿಲ್ಲ, ಆದ್ದರಿಂದ ಭಾರತೀಯ ಲೆಕ್ಕಪತ್ರ ಮಾನದಂಡ–2ರ ಪ್ರಕಾರ ವಿಚಲನೆಗೊಂಡಿದೆ. **ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.**

12) ಕಟ್ಟಡವನ್ನು ನಿರ್ಮಿಸಿ ಆಕ್ರಮಿಸಿಕೊಂಡಿದ್ದರೂ ಸಹ ಕಂಪನಿಗೆ ಭೂಮಿಯನ್ನು ವರ್ಗಾಯಿಸದ ಕಾರಣ ಕಂಪನಿಯು ಗುಲ್ಬರ್ಗಾದಲ್ಲಿನ ಸ್ಥಿರ ಆಸ್ತಿಯನ್ನು ಬಂಡವಾಳಗೊಳಿಸಿಲ್ಲ. ಇದು ಬಂಡವಾಳದ ಡಬ್ಲ್ಯುಐಪಿಯ ಓವರ್ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಲಾಗಿದೆ ಮತ್ತು ರೂ. 91.77 ಕೋಟಿ ರೂ. ಗಳ ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳ ಅಂಡರ್ ಸ್ಟೇಟ್‌ಮೆಂಟ್‌ನಲ್ಲಿ ನೀಡಲಾಗಿದೆ. ಅಲ್ಪಾವಧಿಯ ಸವಕಳಿಯನ್ನು ಲೆಕ್ಕ ಹಾಕಲಾಗಿಲ್ಲ, ಇದು ಲಾಭದ ಓವರ್ ಸ್ಟೇಟ್‌ಮೆಂಟ್‌ಗೆ ಕಾರಣವಾಗುತ್ತದೆ. **ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.**

13) ಕಂಪನಿಯು ಬೆಂಗಳೂರಿನ ಗ್ರಾಮೀಣಾಭಿವೃದ್ಧಿ ಭವನದಲ್ಲಿರುವ ಸ್ಥಿರ ಆಸ್ತಿಯನ್ನು ಬಂಡವಾಳಗೊಳಿಸಿಲ್ಲ ಮತ್ತು ಕಟ್ಟಡವನ್ನು ನಿರ್ಮಿಸಿ ಆಕ್ರಮಿಸಿಕೊಂಡಿದ್ದರೂ ಸಹ ಭೂಮಿಯ ನೋಂದಣಿ ಪ್ರಕ್ರಿಯು ಬಾಕಿ ಇರುವುದರಿಂದ ರೂ. 596.75 ಲಕ್ಷ ಗಳನ್ನು ಮುಂಗಡವೆಂದು ತೋರಿಸಲಾಗಿದೆ. ಇದು ಮುಂಗಡಗಳ ಓವರ್ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಲಾಗಿದ್ದು, ರೂ. 566.75 ಲಕ್ಷಗಳ ಆಸ್ತಿ, ಸ್ಥಾವರ ಮತ್ತು ಯಂತ್ರೋಪಕರಣಗಳ ಅಂಡರ್ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಲು ಕಾರಣವಾಗಿದೆ ಹಾಗೂ ಸವಕಳಿಯ ಅಲ್ಪಾವಧಿ ಲೆಕ್ಕಾಚಾರದಿಂದಾಗಿ ರೂ. 9.45 ಲಕ್ಷಗಳು ಆದಾಯದ ಓವರ್ ಸ್ಟೇಟ್‌ಮೆಂಟ್‌ನಲ್ಲಿ ನೀಡಲಾಗಿದೆ. **ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.**

14) ಕಂಪನಿಯು 'ಈಕ್ವಿಟಿಯಲ್ಲಿನ ಬದಲಾವಣೆಗಳ ಹೇಳಿಕೆ' ಯನ್ನು ಟಿಪ್ಪಣಿ ಸಂಖ್ಯೆ. 25 ರಲ್ಲಿ ನೀಡಲಾಗಿದ್ದು, ಇದು ಭಾರತೀಯ ಲೆಕ್ಕಪತ್ರಗಳ ಮಾನದಂಡಗಳು–1 ರೊಂದಿಗೆ ಅನುಗುಣವಾಗಿರುವುದಿಲ್ಲ. **ಕಂಪನಿಯ ಹಣಕಾಸು ಹೇಳಿಕೆಗಳ ಬಗ್ಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಅವರ ಅವಲೋಕನಗಳ ಪರಿಣಾಮವಾಗಿ ಈ ಅರ್ಹತೆಯನ್ನು ಮಾಡಲಾಗಿದೆ.**

ಗಮನಾರ್ಹ ವಿಚಾರ:

1) ಕಂಪನಿಯು ವಾಣಿಜ್ಯ ವ್ಯವಹಾರಗಳಿಂದ ಸ್ವೀಕರಿಸಬಹುದಾದ, ವಾಣಿಜ್ಯ ವಹಿವಾಟುಗಳಿಗಾಗಿ ಪಾವತಿ ಮಾಡಬೇಕಾಗಿರುವ ಮತ್ತು ಇತರ ಸಂಸ್ಥೆಗಳಿಂದ ದೃಢೀಕರಣ ಪಡೆದುಕೊಳ್ಳುವ ವ್ಯವಸ್ಥೆ ಹೊಂದಿರುವುದಿಲ್ಲ.

2) ಹಣಕಾಸು ಹೇಳಿಕೆಗಳಿಗೆ ಮುಂದುವರಿದು ಟಿಪ್ಪಣಿ 34 ಮತ್ತು ಟಿಪ್ಪಣಿ 35ರಲ್ಲಿ ಪ್ರಸ್ತಾಪಪಡಿಸಿರುವ ಕಂಪನಿಯು ಕೆಳಗೆ ವಿವರಿಸಿರುವಂತೆ ಕೆಲವು ನಿರ್ದಿಷ್ಟ ಯೋಜನೆಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಮಾಡಲಾದ ನಿರ್ದಿಷ್ಟ ವಹಿವಾಟುಗಳನ್ನು ಲೆಕ್ಕಪುಸ್ತಕದಲ್ಲಿ ದಾಖಲು ಮಾಡಿರುವುದಿಲ್ಲ.

ಎ) ಜಬಲ್‌ಪುರ ಯೋಜನೆ:

ನಿಗಮವು 2005ರಲ್ಲಿ ಜಬಲಪುರದಲ್ಲಿ ವಿತರಣಾ ನಾಲಾ ಕಾಮಗಾರಿ ಕೈಗೊಂಡಿದೆ. ಮುಂಗಡ ಠೇವಣಿಯಾಗಿ ರೂ. 201.29 ಲಕ್ಷಗಳನ್ನು ಪಾವತಿ ಮಾಡಿದೆ. ಕಾರ್ಯನಿರ್ವಹಣಾ ಭದ್ರತಾ ಠೇವಣಿ, ಮುಂಗಡ ಠೇವಣಿಯೊಂದಿಗೆ ಭದ್ರತಾ ಠೇವಣಿ, ಮುಂಗಡ ಠೇವಣಿಯೊಂದಿಗೆ ಹೆಚ್ಚುವರಿ ಭದ್ರತಾ ಠೇವಣಿಗಳನ್ನು ಕಾಮಗಾರಿ ವಹಿಸಿಕೊಟ್ಟ ಸಂಸ್ಥೆಯು ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳ್ಳದಿರುವ ಮೇರೆಗೆ ಮುಟ್ಟುಗೋಲು ಹಾಕಿಕೊಂಡಿದೆ. ಈ ಮುಟ್ಟುಗೋಲು ವಿಷಯವು ಕಂಪನಿಯ ಕಾಮಗಾರಿ ನಿರ್ವಹಣಾ ಹಕ್ಕು ಮೊತ್ತ ಆದಾಯವೆಂದು ಪರಿಗಣಿಸಿರುವ ರೂ. 5.24 ಕೋಟಿಗಳೊಂದಿಗೆ ಇತ್ಯರ್ಥಕ್ಕಾಗಿ ಕಂಪನಿಯು ಮಧ್ಯಸ್ಥಗಾರಿಕೆಗಾಗಿ ಗೌರವಾನ್ವಿತ ಮಧ್ಯಪ್ರದೇಶ ಮಧ್ಯಸ್ಥ ನ್ಯಾಯಾಧೀಕರಣ, ಭೂಪಾಲ್ ಇವರ ಮುಂದೆ ಇರುವುದು. ಕಂಪನಿಯು ಮುಂದಿನ ಕ್ರಮಕ್ಕಾಗಿ ಗೌರವಾನ್ವಿತ ಮಧ್ಯಸ್ಥ ನ್ಯಾಯಾಧೀಕರಣದ ನಿರ್ಣಯಕ್ಕಾಗಿ ಕಾದಿರುವುದು.

ಬಿ) ರಾಯಚೂರು ಪ್ರಕರಣ :

ರಾಯಚೂರು ಜಿಲ್ಲೆಯ ಕೆಲವು ಪ್ರತಿನಿಧಿಗಳು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ (ಆರ್‌ಡಿಪಿಆರ್) ಸಚಿವರಿಗೆ ದೂರು ಸಲ್ಲಿಸಿ ಜಿಲ್ಲೆಯಲ್ಲಿ **"ಕೆಆರ್‌ಐಡಿಎಲ್"** ಸಂಸ್ಥೆಗೆ ತಮ್ಮ ಕಾಮಗಾರಿಗಳನ್ನು ವಹಿಸಿಕೊಟ್ಟ ವಿವಿಧ ಸಂಸ್ಥೆಗಳ ಕಾಮಗಾರಿಗಳು ಅರ್ಧವಾಗಿದ್ದು, ಹಲವಾರು ವರ್ಷಗಳಿಂದ ಪೂರ್ಣಗೊಳ್ಳದೆ ಬಾಕಿ ಇರುವವು ಎಂದು ದೂರು ಸಲ್ಲಿಸಿರುತ್ತಾರೆ. ಈ ದೂರುಗಳ ಆಧಾರದ ಮೇಲೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ವಿಚಾರಣಾ ಸಮಿತಿ ರಚಿಸಿರುವರು. ಕಾಮಗಾರಿಯ ಕಾರ್ಯಗತದಲ್ಲಿ ಉಂಟಾದ ವಿಳಂಬಕ್ಕೆ ಕಂಪನಿಯ ಅಧಿಕಾರಿಗಳು ಅನುದಾನದ ದುರುಪಯೋಗವೇ ಕಾರಣವಾಗಿದ್ದು, ತದನಂತರ ಕರ್ನಾಟಕ ಸರ್ಕಾರವು ನ್ಯಾಯಾಂಗ ವಿಚಾರಣೆಗೆ ಆಯೋಗ ರಚಿಸಿದೆ. ಆಯೋಗದ ವರದಿಗಾಗಿ ಕಾಯಲಾಗಿದೆ.

3) ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿ 11ರೆಡೆಗೆ ನಾವು ಗಮನ ಸೆಳೆಯುತ್ತೇವೆ. ರೂ. 5,432.25 ಲಕ್ಷಗಳನ್ನು ವಿಶದಿಕರಿಸಿರುವಂತೆ ಇಎ/ಕರ್ನಾಟಕ ಸರ್ಕಾರ ಇವರಿಂದ ಜಿಎಸ್‌ಟಿಯಾಗಿ ಸ್ವೀಕರಿಸಬೇಕಾಗಿದೆ. ಕಂಪನಿಯಿಂದ ಪಾವತಿ ಮಾಡಲಾದ ಈ ವ್ಯತ್ಯಾಸದ ಮೊತ್ತವನ್ನು ಮರುವಸೂಲು ಮಾಡುವ ಕಂಪನಿಯ ಸಾಮರ್ಥ್ಯದ ಬಗ್ಗೆ ನಾವು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ.

4) ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿ ಸಂಖ್ಯೆ 15ರೆಡೆಗೆ ನಾವು ಗಮನ ಸೆಳೆಯುತ್ತೇವೆ. ಕಂಪನಿಯು ದಿ: 31ನೇ ಮಾರ್ಚ್ 2022ರಲ್ಲಿದ್ದಂತೆ ನೌಕರರಿಗಾಗಿ ಎಕ್ಸ್‌ಗ್ರೇಸಿಯಾ (ನಿವೃತ್ತಿ ಉಪದಾನ) ಆಗಿ ರೂ. 753.20 ಲಕ್ಷಗಳಿಗೆ ಅವಕಾಶ ಮಾಡಿದೆ. ಈ ಮೊತ್ತವು ಕರ್ನಾಟಕ ಸರ್ಕಾರದ ಅನುಮೋದನೆಯ ಷರತ್ತಿಗೆ ಒಳಪಟ್ಟಿದೆ.

5) ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿ 17ರೆಡೆಗೆ ನಾವು ಗಮನಸೆಳೆಯುತ್ತೇವೆ. ಕಂಪನಿಯು ಮಾಡಿದ್ದ ವ್ಯವಹಾರಗಳಿಗಾಗಿ ಪಾವತಿ ಮಾಡಬೇಕಾಗಿರುವ ಒಟ್ಟು ಮೊತ್ತ ರೂ. 65,936.73 ಲಕ್ಷಗಳನ್ನು "ಎಂಎಸ್‌ಎಂಇ"ಗೆ ಬಾಕಿ ಮತ್ತು "ಇತರರಿಗೆ ಬಾಕಿ" ಎಂದು ವರ್ಗೀಕರಣ ಮಾಡಿರುವುದಿಲ್ಲ.

6) ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿ ಸಂಖ್ಯೆ 36ರೆಡೆಗೆ ನಾವು ಗಮನ ಸೆಳೆಯುತ್ತೇವೆ. ಕಂಪನಿಯು ಈ ವರ್ಷದಲ್ಲಿ ರೂ. 413.13 ಲಕ್ಷಗಳ ಮೊತ್ತಕ್ಕೆ ಸರಕುಗಳ ಕೊರತೆಯನ್ನು ಗುರುತಿಸಿದೆ. 31ನೇ ಮಾರ್ಚ್ 2022ರಲ್ಲಿದ್ದಂತೆ ಸರಕುಗಳ ಕೊರತೆ ಬಾಬ್ತಿನಡಿ ವಸೂಲಾತಿಯಾಗಬೇಕಿರುವ ಒಟ್ಟು ಮೊತ್ತ ರೂ. 1973.84 ಲಕ್ಷಗಳಾಗಿದೆ.

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವನ್ನು ಅರ್ಹಪಡಿಸಿರುವುದಿಲ್ಲ.

ಹಣಕಾಸು ಹೇಳಿಕೆಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿಗಳು

ಕಂಪನಿಯ ನಿರ್ದೇಶಕ ಮಂಡಳಿಯು ಕಂಪನಿ ಕಾಯ್ದೆ 2013ರ ಸೆಕ್ಷನ್ 134(5)ರಲ್ಲಿ ವಿವರಿಸಿರುವಂತೆ ವಿಷಯಗಳಿಗೆ ಜವಾಬ್ದಾರಿಯಾಗಿರುತ್ತದೆ. ಅದರಂತೆ ಕಂಪನಿಯ ಆರ್ಥಿಕ ಸ್ಥಿತಿ ಮತ್ತು ಹಣಕಾಸು ಕಾರ್ಯನಿರ್ವಹಣೆ ಕಂಪನಿ ಕಾಯ್ದೆಯ ಸೆಕ್ಷನ್ 133ರಡಿ ಗೊತ್ತುಪಡಿಸಿರುವ ಲೆಕ್ಕನಿರ್ವಹಣ ಮಾನದಂಡಗಳು ಒಳಗೊಂಡಂತೆ ಸಾಮಾನ್ಯವಾಗಿ ಅಂಗೀಕರಿಸಲಾದ ಲೆಕ್ಕನಿರ್ವಹಣಾ ತತ್ವಗಳನುಸಾರ ಪ್ರಾಮಾಣಿಕ ಮತ್ತು ಚಿತ್ರ ನೀಡುವ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ಜವಾಬ್ದಾರಿಯು ಕಾಯ್ದೆಯನುಸಾರ ಸಾಕಷ್ಟು ರೀತಿಯಲ್ಲಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಿಸುವ ಮೂಲಕ ಕಂಪನಿ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆ ಅಥವಾ ಮೋಸಗಾರಿಕೆ ಹಾಗೂ ಇತರ ಅಕ್ರಮಗಳನ್ನು ತಡೆಯುವುದು ಮತ್ತು ಪತ್ತೆಹಚ್ಚುವುದು. ಸೂಕ್ತರೀತಿಯ ಲೆಕ್ಕನಿರ್ವಹಣಾ ನೀತಿಗಳ ಆಯ್ಕೆ ಮತ್ತು ಅನ್ವಯಿಸುವಿಕೆ, ತೀರ್ಮಾನಗಳನ್ನು ತೆಗೆದುಕೊಳ್ಳುವುದು ಮತ್ತು ಸಕಾರಣವಾದ ಮತ್ತು ಪ್ರಾಮಾಣಿಕವಾದ ಅಂದಾಜುಗಳನ್ನು ಮಾಡುವುದು, ಲೆಕ್ಕನಿರ್ವಹಣಾ ದಾಖಲೆಗಳು ನಿಖರತೆ ಮತ್ತು ಪೂರ್ಣತೆಯನ್ನು ದೃಢೀಕರಿಸುವಂತೆ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗಲು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಮಾಡುವುದು. ಇವುಗಳು ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ಪ್ರಸ್ತುತಪಡಿಸಲು ತಕ್ಕದಾಗಿರುವುದರೊಂದಿಗೆ ಅವುಗಳು ನೈಜ ಮತ್ತು ಸರಿಯಾದ ಚಿತ್ರ ನೀಡುವಂತೆ ಮತ್ತು ವಂಚನೆ ಅಥವಾ ತಪ್ಪುಗಳಿಂದಾಗಿ ಭೌತಿಕ ದೋಷಪೂರಿತ ಹೇಳಿಕೆಗಳಿಂದ ಮುಕ್ತವಾಗಿರುವಂತೆ ಇರಬೇಕು.

ಆಡಳಿತ ಮಂಡಳಿಯು ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವ ದಿಶೆಯಲ್ಲಿ ಕಂಪನಿಯು ಕಾರ್ಯನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯ ಹೊಂದಿದೆ ಎಂಬುದರ ಬಗ್ಗೆ ಲೆಕ್ಕ ಹಾಕುವ ಕಾರ್ಯನಿರ್ವಹಿಸಿಕೊಂಡು ಹೋಗುವ ಸಂಸ್ಥೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ಅಂಶಗಳನ್ನು ವಿಶದಿಕರಿಸುವುದು ಮತ್ತು ಕಾರ್ಯನಿರ್ವಹಿಸಿಕೊಂಡು ಹೋಗುವ ಸಂಸ್ಥೆ ಎಂಬುದಕ್ಕೆ ಲೆಕ್ಕನಿರ್ವಹಣ ಆಧಾರದಲ್ಲಿ ಅಂದಾಜು ಮಾಡುವ ಜವಾಬ್ದಾರಿ ಹೊಂದಿರುತ್ತದೆ. ಇವೆಲ್ಲವನ್ನು ಆಡಳಿತ ಮಂಡಳಿಯು ವಿಭಾಗವನ್ನು ಬರಖಾಸ್ತುಗೊಳಿಸುವ ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ಅಥವಾ ಇದನ್ನು ಮಾಡದೇ ಬೇರೆ ಪರ್ಯಾಯವೇ ಇಲ್ಲ ಎಂದು ಮನವರಿಕೆಯಾಗದ ಹೊರತು ಮಾಡಬಹುದಾಗಿದೆ.

ನಿರ್ದೇಶಕ ಮಂಡಳಿಯು ಕಂಪನಿಯ ಹಣಕಾಸು ವರದಿಗಾರಿಕೆಯ ವಿಧಾನದ ಮೇಲುಸ್ತುವಾರಿ ಮಾಡುವ ಜವಾಬ್ದಾರಿ ಹೊಂದಿರುತ್ತದೆ.

ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು:

ನಮ್ಮ ಧ್ಯೇಯವು ಹಣಕಾಸು ಹೇಳಿಕೆಯು ಇಡೀಯಾಗಿ ತಪ್ಪು ಹೇಳಿಕೆಯಿಂದ ತಪ್ಪು ಅಥವಾ ವಂಚನೆಯಿಂದ ಮುಕ್ತವಾಗಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ಪಡೆಯುವುದು ಮತ್ತು ನಮ್ಮ ಅಭಿಪ್ರಾಯದೊಂದಿಗೆ ಲೆಕ್ಕಪರಿಶೋಧಿತ ವರದಿ ನೀಡುವುದಾಗಿದೆ. ಸಕಾರಣವಾದ ಭರವಸೆಯು ಒಂದು ಉನ್ನತ ಮಟ್ಟದ ಭರವಸೆ. ಆದರೆ ಅದು ಲೆಕ್ಕನಿರ್ವಹಣಾ ಮಾನದಂಡಗಳನುಸಾರ ನಡೆಸಲಾದ ಲೆಕ್ಕಪರಿಶೋಧನೆಯು ಯಾವಾಗಲೂ ಭೌತಿಕ ತಪ್ಪು ಹೇಳಿಕೆ ಉಂಟಾದಾಗ ಅದನ್ನು ಪತ್ತೆ ಮಾಡುವುದು ಎಂಬುದಕ್ಕೆ ಸ್ಪಷ್ಟ ಭರವಸೆ ಅಲ್ಲ. ದೋಷಪೂರಿತ ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉಂಟಾಗಬಹುದು ಮತ್ತು ಅವುಗಳನ್ನು ಒಂದೊಂದಾಗಿ ಅಥವಾ ಸರಾಸರಿಯ ವಸ್ತುಗಳೆಂದು ಪರಿಗಣಿಸಲಾಗುವುದು. ಅವುಗಳನ್ನು ಹಣಕಾಸು ಹೇಳಿಕೆಗಳ ಆಧಾರವಾಗಿ ಬಳಕೆದಾರರು ತೆಗೆದುಕೊಳ್ಳುವ ಆರ್ಥಿಕ ನಿರ್ಣಯಗಳಿಗೆ ತಕ್ಕಮಟ್ಟದಲ್ಲಿ ಪ್ರಭಾವ ಬೀರುತ್ತವೆ ಎಂದು ನಿರೀಕ್ಷಿಸಲಾಗುತ್ತದೆ.

ಲೆಕ್ಕನಿರ್ವಹಣಾ ಗುಣಮಟ್ಟಗಳನುಸಾರ ಕೈಗೊಂಡ ಲೆಕ್ಕಪರಿಶೋಧನೆಯ ಭಾಗವಾಗಿ ನಾವು ವೃತ್ತಿಪರ ತೀರ್ಮಾನವನ್ನು ಮತ್ತು ವೃತ್ತಿಯ ಸಂದೇಹಿತನವನ್ನು ಲೆಕ್ಕಪರಿಶೋಧನೆಯ ಉದ್ದಕ್ಕೂ ನಿರ್ವಹಿಸುತ್ತೇವೆ. ಅಲ್ಲದೆ ನಾವು,

- ಹಣಕಾಸು ಹೇಳಿಕೆಗಳ ಭೌತಿಕ ತಪ್ಪು ಹೇಳಿಕೆಗಳ ಅಪಾಯವನ್ನು ಗುರುತಿಸುತ್ತೇವೆ ಮತ್ತು ಅಂದಾಜಿಸುತ್ತೇವೆ. ಈ ಅಪಾಯಕ್ಕೆ ಕಾರಣವಾಗಿರುವ ವಂಚನೆ ಅಥವಾ ತಪ್ಪು ಕುರಿತು ರೂಪುರೇಷೆ ಮತ್ತು ಲೆಕ್ಕಪರಿಶೋಧನೆಯ ವಿಧಾನವನ್ನು ಅನುಸರಿಸುತ್ತೇವೆ. ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವಾಗಿ ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನೆಯ ಪುರಾವೆ ಪಡೆಯುವುದು. ಈ ಅಪಾಯವು ವಂಚನೆಯಿಂದ ಉಂಟಾದ ಭೌತಿಕ ದೋಷಪೂರಿತ ಹೇಳಿಕೆಯನ್ನು ಪತ್ತೆ ಮಾಡದಿದ್ದಲ್ಲಿ ಅದು ತಪ್ಪಿನಿಂದ ಉಂಟಾದ ದೋಷಕ್ಕಿಂತ ಹೆಚ್ಚು ಅಪಾಯಕಾರಿ. ಏಕೆಂದರೆ ವಂಚನೆಯು ಶಾಮೀಲತೆ, ನಕಲು ಮಾಡುವಿಕೆ, ಉದ್ದೇಶಪೂರ್ವಕವಾಗಿ ಕೈಬಿಡುವುದು, ತಪ್ಪಾಗಿ ತೋರಿಸುವಿಕೆ ಅಥವಾ ಆಂತರಿಕ ನಿಯಂತ್ರಣಗಳನ್ನು ಒಳಗೊಂಡಿರುತ್ತದೆ.

- ಪ್ರಸಕ್ತ ಸನ್ನಿವೇಶದಲ್ಲಿ ಸೂಕ್ತವೆನಿಸಿದ ಲೆಕ್ಕಪರಿಶೋಧನಾ ರೂಪುರೇಷೆಗಳನ್ನು ತಯಾರಿಸಲು ಲೆಕ್ಕಪರಿಶೋಧನೆಗೆ ಸೂಕ್ತವಾದ ಆಂತರಿಕ ನಿಯಂತ್ರ ಬಗ್ಗೆ ಒಂದು ತಿಳುವಳಿಕೆ ಹೊಂದುವುದು. ಕಾಯ್ದೆಯ ಸೆಕ್ಷನ್ 143(3)(1)ರಡಿ ನಾವು ವಿಭಾಗವು ಈಗ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆ ಹೊಂದಿರುವ ಮತ್ತು ಅದು ಪರಿಣಾಮಕಾರಿಯಾಗಿ ಆ ನಿಯಂತ್ರಣಗಳು ಕಾರ್ಯಗತವಾಗುತ್ತಿವೆಯೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಜವಾಬ್ದಾರರಾಗಿರುತ್ತೇವೆ.

- ಆಡಳಿತ ಮಂಡಳಿಯಿಂದ ಬಳಸಲಾದ ಲೆಕ್ಕನಿರ್ವಹಣಾ ನೀತಿಗಳ ಪ್ರಸ್ತುತತೆ ಮತ್ತು ಲೆಕ್ಕನಿರ್ವಹಣಾ ಅಂದಾಜೀಕರಣ ಸಕಾರಣತ್ವ ಮತ್ತು ಸಂಬಂಧಿತ ವಿಶದಿಕರಣದ ಮೌಲ್ಯಮಾಪನ ಮಾಡುತ್ತೇವೆ.

- ಲೆಕ್ಕನಿರ್ವಹಣೆ ಆಧಾರವಾಗಿ ಕಾರ್ಯನಿರ್ವಹಿಸಿಕೊಂಡು ಹೋಗುವ ಸಂಸ್ಥೆಯು ಆಡಳಿತ ಮಂಡಳಿಯ ಬಳಕೆಯ ಪ್ರಸ್ತುತತೆಯ ಕುರಿತು ನಿರ್ಣಯ ಮತ್ತು ಪಡೆದಿರುವ ಲೆಕ್ಕಪರಿಶೋಧನೆಯ ಪುರಾವೆ ಆಧಾರದಲ್ಲಿ ಸಂಸ್ಥೆಯು ಕಾರ್ಯನಿರ್ವಹಿಸಿಕೊಂಡು ಹೋಗುವ ಸಂಸ್ಥೆಯು ಸಾಮರ್ಥ್ಯದ ಬಗ್ಗೆ ಅನುಮಾನ ಉಂಟು ಮಾಡುವ ಯಾವುದಾದರೂ ಘಟನೆ ಮತ್ತು ಸ್ಥಿತಿಗಳು ಭೌತಿಕ ಅನಿಶ್ಚಯತೆ ಇದೆಯೇ ಎಂಬುದರ ಬಗ್ಗೆ ಅಂತಿಮ ನಿರ್ಣಯಕ್ಕೆ ಬರುತ್ತೇವೆ. ಒಂದು ವೇಳೆ ನಾವು ಭೌತಿಕ ಅನಿಶ್ಚತತೆ ಇದೆಯೆಂದು ನಿರ್ಣಯಿಸಿದಲ್ಲಿ ನಾವು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಸಂಬಂಧಿತ ಹಣಕಾಸು ಹೇಳಿಕೆಗಳಲ್ಲಿ ಪ್ರಸ್ತುತಪಡಿಸಿದವುಗಳೆಡೆಗೆ ಅಥವಾ ಅಂತಹ ಪ್ರಸ್ತುತಪಡಿಸಿದವುಗಳು ನಮ್ಮ ಅಭಿಪ್ರಾಯ ಬದಲಿಸಲು ತಕ್ಕಷ್ಟಿಲ್ಲವೆಂಬುದೆರೆಡೆಗೆ ಗಮನ ಸೆಳೆಯುತ್ತೇವೆ. ನಮ್ಮ ತೀರ್ಮಾನಗಳಿಗೆ ಅದೂವರೆಗೂ ಲೆಕ್ಕಪರಿಶೋಧನೆಗಾಗಿ ಪಡೆಯಲಾದ ಲೆಕ್ಕಪರಿಶೋಧನಾ ಪುರಾವೆಗಳು ಆಧಾರವಾಗಿರುತ್ತದೆ. ಆದಾಗ್ಯೂ ಭವಿಷ್ಯದ ಘಟನೆಗಳು ಅಥವಾ ಸನ್ನಿವೇಶಗಳು ಸಂಸ್ಥೆಯು ಕಾರ್ಯನಿರ್ವಹಿಸಿಕೊಂಡು ಹೋಗುವ ಸಂಸ್ಥೆ ಎಂಬ ಪರಿಗಣನೆಯನ್ನು ಸ್ಥಗಿತಗೊಳಿಸುವುದಕ್ಕೆ ಕಾರಣವಾಗಬಹುದು.

- ಒಟ್ಟಾರೆ ಸಾದರಪಡಿಸುವಿಕೆ, ಹಣಕಾಸು ಹೇಳಿಕೆಗಳ ರಚನೆ ಮತ್ತು ವಸ್ತುವಿಷಯ ಪ್ರಸ್ತುತಪಡಿಸಿರುವಿಕೆಯು ಸೇರಿದಂತೆ ಮತ್ತು ಹಣಕಾಸು ಹೇಳಿಕೆಗಳು ಚಾಲ್ತಿಯಲ್ಲಿರುವ ವಹಿವಾಟುಗಳನ್ನು ಮತ್ತು ಘಟನೆಗಳನ್ನು ನ್ಯಾಯೋಚಿತ ಸಾದರಪಡಿಸುವಿಕೆ ಸಾಧಿಸುವ ರೀತಿಯಲ್ಲಿ ಪ್ರತಿನಿಧಿಸುತ್ತವೆಯೇ? ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುತ್ತೇವೆ.

ಅಲ್ಲದೆ ನಾವು ಆಡಳಿತದ ಜವಾಬ್ದಾರಿ ಹೊತ್ತಿರುವವರಿಗೆ ಇತರ ವಿಷಯಗಳೊಂದಿಗೆ ಯೋಜನಾ ವ್ಯಾಪ್ತಿ ಮತ್ತು ಲೆಕ್ಕಪರಿಶೋಧನೆಯ ಸಮಯ ಮತ್ತು ನಮ್ಮ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಗುರುತಿಸಲಾದ ಪ್ರಮುಖ ಲೆಕ್ಕಪರಿಶೋಧನಾ ಶೋಧನೆಗಳನ್ನು ತಿಳಿಸುತ್ತೇವೆ.

ಅಂತೆಯೇ ನಾವು ಆಡಳಿತದ ಜವಾಬ್ದಾರಿ ಹೊತ್ತಿರುವವರಿಗೆ ಸ್ವಾತಂತ್ರ್ಯದ ಬಗ್ಗೆ ಸೂಕ್ತ ನೈತಿಕ ಅಗತ್ಯತೆಗಳೊಂದಿಗೆ ನಾವು ಕ್ರೂಢೀಕರಿಸಿದ ಹೇಳಿಕೆಯನ್ನು ಒದಗಿಸುತ್ತೇವೆ ಮತ್ತು ಅವುಗಳೊಂದಿಗೆ ನಾವು ಸ್ವಾತಂತ್ರ್ಯಕ್ಕೆ ಪ್ರಭಾವ ಎಂದು ಸಕಾರವಾಗಿ ಯೋಚಿಸಿರುವ ಎಲ್ಲ ಸಂಬಂಧಗಳನ್ನು ಮತ್ತು ಇತರ ವಿಷಯಗಳನ್ನು ಮತ್ತು ಎಲ್ಲಿ ಅನ್ವಯಿಸುತ್ತವೆ ಸಂಬಂಧಿತ ಸಂರಕ್ಷತೆಗಳನ್ನು ತಿಳಿಸುತ್ತೇವೆ.

ಆಡಳಿತದ ಜವಾಬ್ದಾರಿ ಹೊತ್ತಿರುವವರ ಮಾಹಿತಿಗೆ ತಂದಿರುವ ವಿಷಯಗಳಿಂದ ನಾವು ಪ್ರಸಕ್ತ ವರ್ಷದ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಅತ್ಯಂತ ಪ್ರಮುಖವಾದ ಆ ಅಂಶಗಳೆಂದು ತೀರ್ಮಾನಿಸುತ್ತೇವೆ. ಮತ್ತು ಆ ಮೇರೆಗೆ ಅವುಗಳು ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳಾಗಿದೆ. ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಅವುಗಳು ಸಾರ್ವಜನಿಕವಾಗಿ ಬಹಿರಂಗಪಡಿಸುವಿಕೆಯನ್ನು ಕಾನೂನು ಮತ್ತು ನಿಯಮಗಳು ನಿರ್ಬಂಧಿಸಿದ ಹೊರತು ವಿವರಿಸುತ್ತೇವೆ ಅಥವಾ ತೀರ ಪ್ರಬಲ ಮತ್ತು ವಿರಳ ಸನ್ನಿವೇಶದಲ್ಲಿ ನಾವು ಈ ವಿಷಯವನ್ನು ನಮ್ಮ ವರದಿಯಲ್ಲಿ ಸಂವಹನ ಮಾಡಬಾರದೆಂದು ನಿರ್ಣಯಿಸುತ್ತೇವೆ. ಏಕೆಂದರೆ ಅದರಿಂದ ಉಂಟಾಗುವ ಪ್ರತಿಕೂಲ ಪರಿಣಾಮಗಳು ಅಂತಹ ಸಂವಹನಗಳಿಂದ ಸಾರ್ವಜನಿಕ ಹಿತಾಸಕ್ತಿ ಲಾಭಗಳನ್ನು ಕಡೆಗಣಿಸುತ್ತವೆ.

ಇತರ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಕುರಿತ ವರದಿ

1. ಭಾರತ ಸರ್ಕಾರದ ಕಂಪನಿಗಳ (ಸ್ವತಂತ್ರ ಲೆಕ್ಕಪರಿಶೋಧಕರ ವರದಿ) ಕಾಯಿದೆ 2016ರ ಉಪ ವಿಭಾಗ (11), ವಿಭಾಗ 143ರ ಪ್ಯಾರಾ 3 ಮತ್ತು 4 ರ ಪ್ರಕಾರ ಕೊಡಬೇಕಾದ ಮಾಹಿತಿಗಳ ಹೇಳಿಕೆಯನ್ನು ಅಡಕ–ಎ ರಲ್ಲಿ ಕೊಡಲಾಗಿದೆ.

2. ಕಾಯಿದೆಯ ವಿಭಾಗ 143(3)ರ ಪ್ರಕಾರ, ನಾವು ವರದಿ ನೀಡುವುದೇನೆಂದರೆ,

   ಎ) ಮೇಲಿನ ಅರ್ಹತೆಯ ಅಭಿಪ್ರಾಯ ಪ್ಯಾರಾದ ಆಧಾರದಲ್ಲಿ ತಿಳಿಸಿರುವ ಅಂಶಗಳನ್ನು ಹೊರತುಪಡಿಸಿ, ನಮ್ಮ ತಿಳಿವು ಮತ್ತು ಅರಿವಿಗೆ ಗೊತ್ತಾದಂತೆ ಆಡಿಟ್‌ಗೆ ಅಗತ್ಯವಾದ ಎಲ್ಲ ಮಾಹಿತಿ ಮತ್ತು ವಿವರಣೆ ಪಡೆದಿದ್ದೇವೆ.

   ಬಿ) ಮೇಲಿನ ಅರ್ಹತೆಯ ಅಭಿಪ್ರಾಯ ಪ್ಯಾರಾದ ಆಧಾರದಲ್ಲಿ ತಿಳಿಸಿರುವ ಅಂಶಗಳ ಸಾಧ್ಯತೆಯ ಪರಿಣಾಮಗಳನ್ನು ಹೊರತುಪಡಿಸಿ, ಕಾನೂನಿನಂತೆ ಇಡಬೇಕಾದ ದಾಖಲೆ ಮತ್ತು ಲೆಕ್ಕಪತ್ರ ಪುಸ್ತಕಗಳನ್ನು ಕಂಪನಿ ಇಟ್ಟಿದೆ. ಈ ಬಗ್ಗೆ ಸಂಬಂಧಿಸಿದ ಪುಸ್ತಕಗಳನ್ನು ನಾವು ಪರಿಶೀಲಿಸಿದ್ದೇವೆ.

   ಸಿ) ಬ್ಯಾಲೆನ್ಸ್ ಶೀಟ್ ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಹಣ ಹರಿವು ಹೇಳಿಕೆಗಳು ಲೆಕ್ಕ ಪುಸ್ತಕದಲ್ಲಿ ಇದ್ದಂತೆ ಇವೆ.

   ಡಿ) ಮೇಲಿನ ಅರ್ಹತೆಯ ಅಭಿಪ್ರಾಯ ಪ್ಯಾರಾದ ಆಧಾರದಲ್ಲಿ ತಿಳಿಸಿರುವ ಅಂಶಗಳನ್ನು ಹೊರತುಪಡಿಸಿ, ನಮ್ಮ ಅಭಿಪ್ರಾಯದಲ್ಲಿ, ಖಾಯಂ ಆದ ಹಣಕಾಸಿನ ವಿವರಣೆಗಳು ಕಂಪನಿಗಳ (ಲೆಕ್ಕಗಳು) ನಿಯಮಗಳು, ಅಧಿನಿಯಮದ ಪ್ರಕರಣ 133ರ ಅನ್ವಯ ಮೇಲೆ ತಿಳಿಸಿರುವ ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಹಣ ಹರಿವಿನ ಬಗ್ಗೆ ನಿಗದಿಪಡಿಸಿರುವ ಲೆಕ್ಕಪತ್ರದ ಮಾನದಂಡಗಳ ಅನುಸಾರವಾಗಿವೆ.

   ಇ) ನಿರ್ದೇಶಕರ ಅನರ್ಹಗೊಳಿಸುವ ಸಂಬಂಧ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 463 (ಇ) ದಿನಾಂಕ: 05.06.2015ರ ಆಧಾರದ ಮೇಲೆ ಅಧಿನಿಯಮದ ಪ್ರಕರಣ 164ರ ಉಪ ಪ್ರಕರಣ (2)ರ ಅನ್ವಯ ಅಗತ್ಯತೆ ಇದ್ದು, ಸರ್ಕಾರದ ಕಂಪನಿಯಾಗಿರುವುದರಿಂದ ಈ ಕಂಪನಿಗೆ ಅನ್ವಯವಾಗುವುದಿಲ್ಲ.

   ಎಫ್) ಕಂಪನಿಯ ಆರ್ಥಿಕ ವರದಿಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಅರ್ಹತೆ ಹಾಗೂ ಆ ರೀತಿಯ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಸಂಬಂಧ ಕೋಷ್ಟಕ–ಬಿ ರಲ್ಲಿನ ಪ್ರತ್ಯೇಕ ವರದಿಯಲ್ಲಿ ನೋಡಬಹುದು.

ಜಿ) ನಿರ್ದೇಶಕರ ಸಂಭಾವನೆ ಸಂಬಂಧ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 463 (ಇ) ದಿನಾಂಕ: 05.06.2015ರ ಆಧಾರದ ಮೇಲೆ ಅಧಿನಿಯಮದ ಪ್ರಕರಣ 197ರ ಅನ್ವಯ ಅಗತ್ಯತೆ ಇದ್ದು, ಸರ್ಕಾರದ ಕಂಪನಿಯಾಗಿರುವುದರಿಂದ ಈ ಕಂಪನಿಗೆ ಅನ್ವಯವಾಗುವುದಿಲ್ಲ.

ಹೆಚ್) ಕಂಪನಿಗಳ (ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನ್ವಯದ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವುದರಿಂದ ಇತರ ವಿಚಾರಗಳ ಸಂಬಂಧ ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ನೀಡಿರುವ ವಿವರಣೆಗಳಂತೆ ತಿಳಿಸುವುದೇನೆಂದರೆ;

i) ಕಂಪನಿಯು ತನ್ನ ಹಣಕಾಸಿನ ವಿವರಣೆಯಲ್ಲಿ ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯಗಳು ಟಿಪ್ಪಣಿ ಸಂಖ್ಯೆ 29 ಮತ್ತು 39ರಲ್ಲಿ ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಯಾವುದೇ ರೀತಿಯ ಪರಿಣಾಮ ಬೀರಿರುವುದೇ ಎಂಬುದನ್ನು ಕಂಪನಿ ತಿಳಿಸಿರುವುದಿಲ್ಲ.

ii) ಮೂಲ ಗುತ್ತಿಗೆಗಳು ಸೇರಿದಂತೆ ದೀರ್ಘಾವಧಿಯ ಗುತ್ತಿಗೆಗಳು ಯಾವುದೇ ಇದ್ದಲ್ಲಿ ಅದರಲ್ಲಿ ಮುಂದೆ ಉಂಟಾಗಬಹುದಾದ ನಷ್ಟಗಳಿಗೆ ಯಾವುದೇ ಕಾನೂನಿನ ಅನ್ವಯ ಅಥವಾ ಲೆಕ್ಕಪತ್ರಗಳ ಗುಣಮಟ್ಟದ ಮಾನದಂಡಗಳ ಅನ್ವಯ ಅಗತ್ಯವಾದಂತೆ ಕಂಪನಿಯು ಒದಗಣೆ ಮಾಡಿದೆ.

iii) ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾವಣೆ ಮಾಡಬೇಕಾಗಿದ್ದ ಷೇರುದಾರರಿಗೆ ಡಿವಿಡೆಂಡ್‌ನ ಹಣವನ್ನು ವರ್ಗಾವಣೆ ಮಾಡುವುದರಲ್ಲಿ ಯಾವುದೇ ವಿಳಂಬ ಉಂಟಾಗಿರುವುದಿಲ್ಲ.

iv) ಎ) ಆಡಳಿತ ಮಂಡಳಿಯು ತನ್ನ ಜ್ಞಾನ ಮತ್ತು ನಂಬಿಕೆಯ ಅನುಸಾರವಾಗಿ, ಟಿಪ್ಪಣಿಗಳಲ್ಲಿ ತಿಳಿಸಿರುವಂತೆ ಅದನ್ನು ಪ್ರತಿನಿಧಿಸಿದೆ–ಟಿಪ್ಪಣಿ ಸಂಖ್ಯೆ. 41 (i) ಮಧ್ಯಸ್ಥಗಾರನು, ನೇರವಾಗಿ ಅಥವಾ ಪರೋಕ್ಷವಾಗಿ, ಕಂಪನಿಯ ಮೂಲಕ ಅಥವಾ ಅದರ ಪರವಾಗಿ ಗುರುತಿಸಲಾದ ಇತರ ವ್ಯಕ್ತಿಗಳಿಗೆ ಅಥವಾ ಘಟಕಗಳಿಗೆ ಸಾಲ ನೀಡತಕ್ಕದ್ದು ಅಥವಾ ಹೂಡಿಕೆ ಮಾಡತಕ್ಕದ್ದು ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂಥವುಗಳನ್ನು ಒದಗಿಸತಕ್ಕದ್ದಲ್ಲ ಎಂಬ ತಿಳುವಳಿಕೆಯೊಂದಿಗೆ ("ಮಧ್ಯವರ್ತಿಗಳು") ವಿದೇಶಿ ಘಟಕಗಳನ್ನು ಒಳಗೊಂಡಂತೆ ಯಾವುದೇ ಇತರ ವ್ಯಕ್ತಿಗಳಿಗೆ (ಗಳು) ಅಥವಾ ಘಟಕಗಳಿಗೆ ಕಂಪನಿಯು ಯಾವುದೇ ಹಣವನ್ನು ಮುಂಗಡವಾಗಿ ನೀಡಿರಬಾರದು ಅಥವಾ ಸಾಲ ನೀಡಿರಬಾರದು ಅಥವಾ ಹೂಡಿಕೆ ಮಾಡಿರಬಾರದು (ಎರವಲು ಪಡೆದ ನಿಧಿಗಳಿಂದ ಅಥವಾ ಷೇರು ಪ್ರೀಮಿಯಮ್ ಅಥವಾ ಯಾವುದೇ ಇತರ ಮೂಲಗಳಿಂದ ಅಥವಾ ರೀತಿಯ ನಿಧಿಗಳಿಂದ).

ಬಿ) ಆಡಳಿತವು ತನ್ನ ಜ್ಞಾನ ಮತ್ತು ನಂಬಿಕೆಯ ಅನುಸಾರವಾಗಿ, ಖಾತೆಗಳ ಟಿಪ್ಪಣಿಗಳಲ್ಲಿ ಬಹಿರಂಗಪಡಿಸಿದಂತೆ–ಖಾತೆಗಳಿಗೆ ಟಿಪ್ಪಣಿ–ಟಿಪ್ಪಣಿ ಸಂಖ್ಯೆ. 41 (ii) ಯಾವುದೇ ವ್ಯಕ್ತಿ (ರು) ಅಥವಾ ವಿದೇಶಿ ಘಟಕಗಳು ("ಫಂಡಿಂಗ್ ಪಾರ್ಟಿಗಳು") ಸೇರಿದಂತೆ ಯಾವುದೇ ಘಟಕದಿಂದ ಕಂಪನಿಯು ಯಾವುದೇ ಹಣವನ್ನು ಸ್ವೀಕರಿಸಿಲ್ಲ, ಕಂಪನಿಯು ನೇರವಾಗಿ ಅಥವಾ ಪರೋಕ್ಷವಾಗಿ, ಫಂಡಿಂಗ್ ಪಾರ್ಟಿಗಳು ("ಅಂತಿಮ ಫಲಾನುಭವಿಗಳು") ಅಥವಾ ಅದರ ಪರವಾಗಿ ಗುರುತಿಸಲಾದ ಇತರ ವ್ಯಕ್ತಿಗಳು ಅಥವಾ ಘಟಕಗಳಿಗೆ ಯಾವುದೇ ರೀತಿಯಲ್ಲಿ ಸಾಲ ನೀಡುತ್ತದೆ ಅಥವಾ ಹೂಡಿಕೆ ಮಾಡುತ್ತದೆ ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹವುಗಳನ್ನು ಒದಗಿಸುತ್ತದೆ ಎಂದು ಲಿಖಿತವಾಗಿ ಅಥವಾ ಬೇರೆ ರೀತಿಯಲ್ಲಿ ದಾಖಲಿಸಲಾಗಿದೆ.

ಸನ್ನಿವೇಶಗಳಲ್ಲಿ ಸಮಂಜಸವಾದ ಮತ್ತು ಸೂಕ್ತವೆಂದು ಪರಿಗಣಿಸಲಾದ ಆಡಿಟ್ ಕಾರ್ಯವಿಧಾನಗಳ ಆಧಾರದ ಮೇಲೆ, ನಿಯಮ 11 (ಇ) ರ ಉಪ–ಷರತ್ತು (i) ಮತ್ತು (ii) ರ ಅಡಿಯಲ್ಲಿನ ಪ್ರಾತಿನಿಧ್ಯಗಳು ಯಾವುದೇ ವಸ್ತು ತಪ್ಪು ಹೇಳಿಕೆಯನ್ನು ಒಳಗೊಂಡಿವೆ ಎಂದು ನಂಬಲು ಕಾರಣವಾದ ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ.

v) ಹಿಂದಿನ ವರ್ಷಕ್ಕೆ ಘೋಷಿಸಿದ ವರ್ಷಕ್ಕೆ ಸಂಬಂಧಿಸಿದಂತೆ ಕಂಪನಿಯು ಪಾವತಿಸಿದ ಅಂತಿಮ ಲಾಭಾಂಶವು ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 123 ರ ಪ್ರಕಾರ ಲಾಭಾಂಶದ ಪಾವತಿಗೆ ಅನ್ವಯಿಸುತ್ತದೆ. ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿ 13.1 ರಲ್ಲಿ ಹೇಳಿರುವಂತೆ, ಕಂಪನಿಯ ನಿರ್ದೇಶಕರ ಮಂಡಳಿಯು ಮುಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸದಸ್ಯರ ಅನುಮೋದನೆಗೆ ಒಳಪಟ್ಟಿರುವ ವರ್ಷದ ಅಂತಿಮ ಲಾಭಾಂಶವನ್ನು ಪ್ರಸ್ತಾಪಿಸಿದೆ. ಘೋಷಿತ ಲಾಭಾಂಶವು ಲಾಭಾಂಶದ ಘೋಷಣೆಗೆ ಅನ್ವಯವಾಗುವ ಮಟ್ಟಿಗೆ ಕಾಯ್ದೆಯ ಸೆಕ್ಷನ್ 123ಕ್ಕೆ ಅನುಗುಣವಾಗಿರುತ್ತದೆ.

3. ಅಧಿನಿಯಮದ ಪ್ರಕರಣ 143(5)ರ ಅನ್ವಯ ಅಗತ್ಯವಾದಂತೆ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ಹೊರಡಿಸಿರುವ ನಿರ್ದೇಶನಗಳು ಮತ್ತು ಉಪ ನಿರ್ದೇಶನಗಳ ಮೇಲಿನ ವರದಿಯನ್ನು ನಾವು ಅನುಬಂಧ–ಸಿ ದಲ್ಲಿ ನೀಡಿದ್ದೇವೆ.

ಕೆ.ಪಿ. ರಾವ್ & ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ 003135ಎಸ್

ಸಹಿ/–
(ಪ್ರಶಾಂತ್. ಎಸ್)
ಪಾಲುದಾರ
ಸದಸ್ಯತ್ವ ಸಂಖ್ಯೆ: 228407
ಯುಡಿಐಎನ್: 22228407AWTKUX1054

ಸ್ಥಳ : ಬೆಂಗಳೂರು
ದಿನಾಂಕ : 29–09–2022

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಎ

31ನೇ ಮಾರ್ಚ್, 2022ರ ವರ್ಷಕ್ಕೆ ಕೊನೆಗೊಂಡಂತೆ ಲೆಕ್ಕಪರಿಶೋಧನಾ ವರದಿಯ ಮೇಲೆ ಕಂಪನಿಯ ಸದಸ್ಯರಿಗೆ ಸ್ವತಂತ್ರ ಲೆಕ್ಕಪರಿಶೋಧನಾ ವರದಿಗೆ ನಮ್ಮ ಅನುಬಂಧ ಈ ಕೆಳಕಂಡಂತಿರುತ್ತದೆ:

i)

ಎ) (ಅ) ಪೂರ್ಣ ವಿವರಗಳ ಸಹಿತ ಸ್ಥಿರ ಸ್ವತ್ತುಗಳು ಮತ್ತು ಘಟಕ ಮತ್ತು ಯಂತ್ರೋಪಕರಣ ಪರಿಸ್ಥಿತಿ ಮತ್ತು ಪರಿಮಾಣಾತ್ಮಕ ವಿವರಗಳನ್ನೊಳಗೊಂಡಂತೆ ಕಂಪನಿಯು ಸೂಕ್ತ ದಾಖಲೆಗಳನ್ನು ನಿರ್ವಹಣೆ ಮಾಡಿದೆ.

(ಬಿ) ಪೂರ್ಣ ವಿವರಗಳ ಸಹಿತ ಅಸ್ಪಷ್ಟ ಸ್ವತ್ತುಗಳ ಮತ್ತು ಯಂತ್ರೋಪಕರಣಗಳ ವಿವರಗಳನ್ನೊಳಗೊಂಡಂತೆ ಕಂಪನಿಯು ಸೂಕ್ತ ದಾಖಲೆಗಳನ್ನು ನಿರ್ವಹಣೆ ಮಾಡಿದೆ.

ಬಿ) ಆಡಳಿತ ಮಂಡಳಿಯು ಕಂಪನಿಯ ಸ್ಥಿರ ಆಸ್ತಿಗಳನ್ನು ಪ್ರಸಕ್ತ ವರ್ಷದಲ್ಲಿ ಭೌತಿಕ ತಪಾಸಣೆಯನ್ನು ಮಾಡಲಾಗಿದ್ದು, ಈ ತಪಾಸಣೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಿರುವುದಿಲ್ಲ.

ಸಿ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ ಸ್ಥಿರಾಸ್ತಿಗಳ ಷೆಡ್ಯೂಲ್‌ನಡಿ ಟೈಟಲ್ ಡೀಡ್‌ಗಳನ್ನು ಕಂಪನಿಯ ಹೆಸರಿನಲ್ಲಿ ತೋರಿಸಲಾಗಿದೆ. ಕಂಪನಿಯ ಹೆಸರಿನಲ್ಲಿರದ ಈ ಕೆಳಕಂಡ ಟೈಟಲ್ ಡೀಡ್‌ಗಳನ್ನು ಹೊರತುಪಡಿಸಿ ಹಾಗೂ ಕಂಪನಿಯ ಹೆಸರಿನಲ್ಲಿ ಇನ್ನೂ ಕಾರ್ಯಗತಗೊಳಿಸಬೇಕಾಗಿರುವ ಕನ್ವೆಯನ್ಸ್ ಡೀಡ್‌ಗಳ ವಿವರಗಳು ಈ ಕೆಳಗಿನಂತಿದೆ.

ಆಸ್ತಿಯ ವಿವರ	ನಿವ್ವಳ ಮೌಲ್ಯ (ರೂ. ಲಕ್ಷಗಳಲ್ಲಿ)	ಇವರ ಹೆಸರಿನಲ್ಲಿ	ಟೈಟಲ್ ಡೀಡ್ ಹೋಲ್ಡರ್ ಪ್ರೊಮೋಟರ್, ನಿರ್ದೇಶಕರು ಅಥವಾ ಸಂಬಂಧಿಕರು	ಅವಧಿ	ಕಂಪನಿಯ ಹೆಸರಿನಲ್ಲಿ ಇಲ್ಲದಿರುವುದಕ್ಕೆ ಕಾರಣ
ಭೂಮಿ ಖರೀದಿಗೆ ಮುಂಗಡ ಪಾವತಿ (ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು)	596.75	ಆರ್‌ಡಿಪಿಆರ್ ಇಲಾಖೆ, ಕರ್ನಾಟಕ	ಇಲ್ಲ	2013	ಪಿಡಬ್ಲ್ಯುಡಿಯಿಂದ ನಿರ್ಮಾಣ ವೆಚ್ಚದ ಅಂತಿಮ ವರದಿಯ ಸ್ವೀಕೃತಿ ಬಾಕಿ ಇದೆ.
ಡಬ್ಲ್ಯುಐಪಿ ಬಂಡವಾಳ (ಗುಲ್ಬರ್ಗಾದಲ್ಲಿ ಸ್ಥಿರಾಸ್ತಿ)	91.77	ಡಿಸಿ, ಗುಲ್ಬರ್ಗಾ	ಇಲ್ಲ	2003-04 ರಿಂದ 2021-22	ಕಂಪನಿಗೆ ಭೂಮಿಯ ಹಸ್ತಾಂತರವಾಗುವುದು ಬಾಕಿ ಇದೆ.

ಡಿ) ಪ್ರಸಕ್ತ ವರ್ಷದಲ್ಲಿ ಆಸ್ತಿ, ಘಟಕ ಮತ್ತು ಯಂತ್ರೋಪಕರಣ ಅಥವಾ ಅಸ್ಪಷ್ಟ ಸ್ವತ್ತುಗಳನ್ನು ಕಂಪನಿಯು ಮೌಲ್ಯೀಕರಣ ಮಾಡಿರುವುದಿಲ್ಲ.

ಇ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಬೇನಾಮಿ ವರ್ಗಾಂತರ (ನಿಷೇಧ) ಕಾಯಿದೆ, 1988 (1988ರ 45) ಮತ್ತು ನಿಯಮಗಳಡಿ ಕಂಪನಿಯು ಬೇನಾಮಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಪ್ರಕ್ರಿಯೆಯಗಳನ್ನು ಪ್ರಾರಂಭಿಸಿರುವುದಿಲ್ಲ ಅಥವಾ ಬಾಕಿ ಇರುವುದಿಲ್ಲ.

ii) ಎ) ಕಂಪನಿಯು ಭೌತಿಕವಾಗಿ ಪರಿಶೀಲನೆಯನ್ನು ಸಮಂಜಸ ಮಧ್ಯಂತರಗಳಲ್ಲಿ ಮಾಡಿದೆ. ಪುಸ್ತಕಗಳಲ್ಲಿ ಹೋಲಿಸಿದರೆ ಸ್ಟಾಕ್‌ಗಳ ಭೌತಿಕ ಪರಿಶೀಲನೆಯಲ್ಲಿ ನಿರ್ವಹಣೆಯಿಂದ ಅಂತಹ ಪರಿಶೀಲನೆಯ ವ್ಯಾಪ್ತಿ ಮತ್ತು ಕಾರ್ಯವಿಧಾನವು ಸೂಕ್ತವಾಗಿದೆ; ಪ್ರತಿ ವರ್ಗದ ದಾಸ್ತಾನುಗಳಿಗೆ ಒಟ್ಟು 10% ಅಥವಾ ಅದಕ್ಕಿಂತ ಹೆಚ್ಚಿನ ವ್ಯತ್ಯಾಸಗಳನ್ನು ಗಮನಿಸಲಾಗಿಲ್ಲ ಎಂದು ಆಡಳಿತ ಮಂಡಳಿಯು ನಮಗೆ ತಿಳಿಸಿದೆ.

ಬಿ) ಕಂಪನಿಯು ವರ್ಷದಲ್ಲಿ ಯಾವುದೇ ಸಮಯದಲ್ಲಿ ಪ್ರಸ್ತುತ ಆಸ್ತಿಗಳ ಭದ್ರತೆಯ ಆಧಾರದ ಮೇಲೆ ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಒಟ್ಟಾರೆಯಾಗಿ ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಕಾರ್ಯ ಬಂಡವಾಳದ ಮಿತಿಗಳನ್ನು ಮಂಜೂರು ಮಾಡಿಲ್ಲ. ಆದ್ದರಿಂದ ಕಲಂ 3(ii)(b) ಅಡಿಯಲ್ಲಿ ವರದಿ ಮಾಡುವುದು ಅನ್ವಯಿಸುವುದಿಲ್ಲ.

iii) ಕಂಪನಿಯು ವರ್ಷದಲ್ಲಿ ಯಾವುದೇ ಹೂಡಿಕೆಗಳನ್ನು ಮಾಡಿರುವುದಿಲ್ಲ ಹಾಗೂ ಸುರಕ್ಷಿತ ಅಥವಾ ಅಸುರಕ್ಷಿತ, ಕಂಪನಿಗಳು, ಸಂಸ್ಥೆಗಳು ಸೀಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಯಾವುದೇ ಇತರ ಪಾರ್ಟಿಗಳಿಗೆ ಯಾವುದೇ ಗ್ಯಾರಂಟಿ ಅಥವಾ ಭದ್ರತೆಯನ್ನು ಒದಗಿಸಿಲ್ಲ ಅಥವಾ ಸಾಲದ ಸ್ವರೂಪದಲ್ಲಿ ಯಾವುದೇ ಸಾಲಗಳು ಅಥವಾ ಮುಂಗಡಗಳನ್ನು ನೀಡಿಲ್ಲ. ಆದ್ದರಿಂದ ಕಲಂ 3(iii) ಕಂಪನಿಗೆ ಅನ್ವಯಿಸುವುದಿಲ್ಲ.

iv) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಯಾವುದೇ ಸಾಲಗಳು / ಖಾತರಿಗಳನ್ನು ನೀಡಿರುವುದಿಲ್ಲ. ಹಾಗಾಗಿ ಆದೇಶದ ಪ್ಯಾರಾ 3(IV)ರ ಅನ್ವಯವಾಗುವುದಿಲ್ಲ.

v) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಸಾರ್ವಜನಿಕರಿಂದ ಯಾವುದೇ ರೀತಿಯ ಠೇವಣಿಗಳನ್ನು ಕಂಪನಿಯು ಅಂಗೀಕರಿಸಿರುವುದಿಲ್ಲ.

vi) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಕಂಪನಿಯು ಕೈಗೊಂಡಿರುವ ಯಾವುದೇ ಚಟುವಟಿಕೆಗಳಿಗೆ ಕಂಪನಿ ಕಾಯಿದೆ, 2013 ರ ಕಾಯ್ದೆಯ ಪ್ರಕರಣ 148(1)ರ ಅನ್ವಯ ವೆಚ್ಚದ ದಾಖಲೆಗಳನ್ನು ನಿರ್ವಹಣೆ ಮಾಡಲು ಕೇಂದ್ರ ಸರ್ಕಾರ ನಿಗದಿಪಡಿಸಿರುವುದಿಲ್ಲ. ಅದರಂತೆ, ಆದೇಶದಲ್ಲಿನ ಕಲಂ 3(vi) ಕಂಪನಿಗೆ ಅನ್ವಯಿಸುವುದಿಲ್ಲ.

vii)

ಎ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ ಹಾಗೂ ಕಂಪನಿಯ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ನಮ್ಮ ಅಭಿಪ್ರಾಯವೇನೆಂದರೆ, ಪ್ರಸಕ್ತ ವರ್ಷದಲ್ಲಿ ಕಂಪನಿಯು ಆದಾಯ ತೆರಿಗೆ, ಭವಿಷ್ಯ ನಿಧಿ, ಜಿಎಸ್‌ಟಿ, ಸೆಸ್ ಮತ್ತು ಇತರೆ ಶಾಸನಬದ್ಧ ಬಾಕಿಗಳನ್ನು ಕಂಪನಿಯು ಸಾಮಾನ್ಯವಾಗಿ ನಿಯಮಿತವಾಗಿ ಪಾವತಿ ಮಾಡುತ್ತಿದೆ.

ಬಿ) 31ನೇ ಮಾರ್ಚ್ 2022ರಲ್ಲಿದ್ದಂತೆ ಆದಾಯ ತೆರಿಗೆ, ಮಾರಾಟ ತೆರಿಗೆ, ವಿವಾದಿತ ಮೊತ್ತದಲ್ಲಿ ಬಾಕಿಗಳ ತೆರಿಗೆ ಸಂಬಂಧದ ಮೊತ್ತಗಳ ವಿವರಗಳು ಈ ಕೆಳಗಿನಂತಿವೆ.

ಕಾಯಿದೆ ಹೆಸರು	ವಿವಾದಿತ ತೆರಿಗೆ ವ್ಯಾಪ್ತಿ	ಮೊತ್ತ (ಲಕ್ಷ ರೂ.ಗಳಲ್ಲಿ)	ಸಂಬಂಧಪಟ್ಟ ಮೊತ್ತದ ಅವಧಿ	ಬಾಕಿ ಉಳಿದಿರುವ ವಿವಾದವನ್ನು ನಡೆಸುವ ವೇದಿಕೆ
ಆದಾಯ ತೆರಿಗೆ ಕಾಯಿದೆ, 1961	ಆದಾಯ ತೆರಿಗೆ	59.59	2011–12 (ನಿ.ವ.)	ಸಿಐಟಿ (ಅಪೀಲ್‌ಗಳು)
